
ಚಿತ್ರಗುಪ್ತನ ಬಪ್ತಗ

ಸಂ ೯-೧೧

# ಚೋರಚಕ್ರವರ್ತಿ





ವಿದ್ವಾನ್ ಬಾಲಸರಸ್ವತೀ

ಸೆಪ್ಟೆಂಬರ್-ಅಕ್ಟೋಬರ್] [ಬೆಲೆ ೪ ಆಣೆ.

ಚಿತ್ರಗುಪ್ತನ ದಪ್ತರ.

ನಂ, ೯

# ಚೋರಚಕ್ರವರ್ತಿ

## (ಪ್ರಥಮ ಖಂಡ)

---

ವಿದ್ವಾನ್ ಬಾಲಸರಸ್ವತೀಯವರಿಂದ

ವಿರಚಿತವಾದುದು.

ಪ್ರಥಮ ಮುದ್ರಣ ೧೦೦೦

ವಿದ್ವಾನ್ ಬಾಲಸರಸ್ವತೀ

ಸರಸ್ವತೀ ಪೀಠಂ.

ಬೆಂಗಳೂರು ಸಿಟಿ.

ಸೆಪ್ಟಂಬರ್ ೧೯೧೪] [ಕ್ರಯ ೨ ಆಣೆ.

ಕೆ. ಯುಸ್. ಕೃಷ್ಣಯ್ಯರ್ ಬಿ. ಎ., ಯವರ
' ಐರಿಷ್ ' ಮುದ್ರಾಕ್ಷರ ಶಾಲೆಯಲ್ಲಿ
ಮುದ್ರಿಸಲ್ಪಟ್ಟಿತು.

# ವಿಜ್ಞಾಪನೆ

ಈ ನವನ್ಯಾಸದ ಸಂವಿಧಾನವು ಬಹಳ ಹೃದಯಂಗಮವಾಗಿ ರಚಿಸಲ್ಪಟ್ಟಿರುವುದು. ಈ ಗ್ರಂಥವನ್ನು ಆಮೂಲಾಗ್ರವಾಗಿ ಓದಿದಲ್ಲದೆ, ಇದರಲ್ಲಿರುವ ರಸವು ಗೋಚರವಾಗಲಾರದು. ಆದುದರಿಂದ ವಾಚಕಮಹಾಶಯರು ಸಾವಧಾನವಾಗಿ ಇದನ್ನೋದಿ ಇದರಲ್ಲಿರುವ ತತ್ತ್ವವನ್ನು ಅರಿತು ಯುಕ್ತವಾದ ಮಾರ್ಗದಲ್ಲಿ ನಡೆವುದಾದರೆ, ಲೋಕವು ದಿನೇ ದಿನೇ ವೃದ್ಧಿಯನ್ನೈದುವುದರಲ್ಲಿ ಯಾವ ಸಂಶಯವೂ ಇರಲಾರದು.

ಇತಿ ಬಾಲಸರಸ್ವತಿ.

ಜಯತು ಭಗವಾನ್

# ಚೋರಚಕ್ರವರ್ತಿ

## (ಪ್ರಥಮಖಂಡ)

---

## ಒಂದನೆಯ ಅಧ್ಯಾಯ

ಅಮರಾವತಿಯೆಂಬ ನಗರದಲ್ಲಿ ಅಮರನಾಥನೆಂಬ ಹಣಗಾರನಿದ್ದನು. ಅವನು ವಿಶೇಷವಾಗಿ ಹಣದ ಲೇವಾದೇವಿಯನ್ನು ಮಾಡುತಿದ್ದನು. ಕೋಟ್ಯಂತರ ಜನಗಳು ಈತನ ಬಲೆಗೆಬಿದ್ದು ತಮ್ಮ ತಮ್ಮ ದೇಹವನ್ನೇ ಮಾರಿಬಿಟ್ಟಿದ್ದರು. ಅಮರನಾಥನು ಈ ವ್ಯಾಪಾರದಿಂದ ಕುಬೇರನಾಗಿ ಹೋಗಿದ್ದನು. ಹಣಗಾರನಾದ ಅಮರನನ್ನು ಕಂಡರೆ ಸಮಸ್ತರೂ ಹೆದರಿಹೆದರಿ ಸಾಯುತಿದ್ದರು. ಇದರ ಮೂಲತತ್ತ್ವವೇನೆಂದರೆ—ಈತನಲ್ಲಿ ವಿಶೇಷವಾಗಿ ಹಣವಿದ್ದಿತು.

ಈತನಿಗೆ ವಿಶ್ವಾಸಕ್ಕೆ ಪಾತ್ರನಾದ ಶರಚ್ಚಂದ್ರನೆಂಬ ಯುವಕನೊಬ್ಬನು ಕೆಲಸಕ್ಕೆ ಇದ್ದನು. ಅಮರನಾಥನು ಶರಚ್ಚಂದ್ರನನ್ನು ತನ್ನ ಪ್ರಾಣಕ್ಕಿಂತಲೂ ಅಧಿಕವಾಗಿ ಪ್ರೀತಿಸುತ್ತಿದ್ದನು. ಶರಚ್ಚಂದ್ರನ ಅಮೂಲ್ಯವಾದ ಗುಣಗಳೇ ಅಮರನ ವಿಶ್ವಾಸಕ್ಕೆ ಮೂಲಕಾರಣಗಳಾಗಿದ್ದವು.

ಹೀಗಿರಲೊಂದು ದಿನ ಅಮರನಾಥನು ತನ್ನ ಅಂಗಡಿ

ಯಲ್ಲಿ ಕುಳಿತುಕೊಂಡು ಕೆಲಸವಮಾಡುತ್ತಿರುವಾಗ, ಶರಚ್ಚಂದ್ರನು ಆತನಲ್ಲಿಗೆ ಬಂದು—ಸ್ವಾಮಿ ! ನನಗೆ ಒಂದೆರಡು ದಿನಗಳ ಮಟ್ಟಿಗೆ ರಜಾ ಬೇಕಾಗಿರುವುದು, ಎಂದನು.

ಅಮರ—(ಅಚ್ಚರಿಗೊಂಡು) ನನ್ನನ್ನು ಬಿಟ್ಟು ಹೋಗುವೆಯು? ನಿನಗಾಗಿರುವುದೇನು?

ಶರತ್—ಮಧುವನದಲ್ಲಿ ನನಗೊಬ್ಬ ಅಣ್ಣನಿರುವನು. ಆತನು ಮರಣಾವಸ್ಥೆಯಲ್ಲಿರುವನಂತೆ. ನಾನು ಅಲ್ಲಿಗೆ ಹೋಗಿ ಸೇರುವುದರೊಳಗಾಗಿ, ಆತನು ಬದುಕಿರುವನೋ ಇಲ್ಲವೋ ಸಂಶಯವಾಗಿರುವುದು. ಈ ದಿನ ಬೆಳಗ್ಗೆ ಮಧುವನದಿಂದ ನಾನೊಂದು ತಂತಿಯು ವರ್ತಮಾನವನ್ನು ಹೊಂದಿದೆನು. ಆದುದರಿಂದ ನಾನು ಅಲ್ಲಿಗೆ ಹೋಗಿಯೇ ತೀರಬೇಕು.

ಅಮರ—ಇಲ್ಲಿನ ಕೆಲಸವಾದರೋ ವಿಪರೀತವಾಗಿರುವುದು. ಮತ್ತೊಬ್ಬರನ್ನು ನಂಬಿ ಕೆಲಸಮಾಡುವುದಕ್ಕೆ, ನನಗೆ ನಂಬುಗೆ ಸಾಲದು. ನಿನ್ನ ಕೆಲಸವಾದರೋ ಅನಿವಾರ್ಯವಾದುದು. ನನ್ನದು ಹೇಗಾದರೂ ಇರಲಿ. ನೀನು ಹೋಗಿ ಬಾ. ಅಲ್ಲಿ ತುಂಬು ದಿನಗಳು ಮಾತ್ರ ನಿಲ್ಲಬೇಡ.

ಶರತ್.—ಇಲ್ಲಿ ತಮಗೆ ತೊಂದರೆಯನ್ನುಂಟುಮಾಡಿ ನಾನು ಹೋಗಬೇಕೆಂದಿಲ್ಲ. ಅಲ್ಲಿ ನಮ್ಮ ಅಣ್ಣನಿಗೆ ಕೊಂಚ ಗುಣವೆಂದು ಕಂಡುಬರುವುದಾದರೆ ನಾಳೆಯೇ ಹೊರಟು ಬಂದುಬಿಡುವೆನು.

ಅಮರ—ನೀನು ನನಗಾಗಿ ಶ್ರಮಪಡಬೇಕಾದ ಆವಶ್ಯಕವಿರುವುದಿಲ್ಲ. ನೀನು ಅಲ್ಲಿನ ಕೆಲಸವೆಲ್ಲವನ್ನೂ ನೋಡಿಕೊಂಡು ಕೂಡಿದಮಟ್ಟಿಗೆ ಬೇಗನೆ ಇಲ್ಲಿಗೆ ಬಂದುಬಿಡು. ನೀನು ಸಾವಕಾಶವಮಾಡುವುದಾದರೆ ನನಗೆ ತೊಂದರೆಯಾಗುವುದು

ಶರತ್—ತಮ್ಮನ್ನು ಬಿಟ್ಟು ಹೋಗುವುದೇನ ನಗೆ ಇಷ್ಟವಿಲ್ಲ, ಆದರೂ ಯತ್ನವಿಲ್ಲದೇ ಇದೆ. ಖಂಡಿತವಾಗಿಯೂ ನಾನು ಬೇಗನೆ ಬಂದುಬಿಡುವೆನು.

ಅಮರ—ನಿನ್ನ ಲೆಕ್ಕಪತ್ರಗಳೆಲ್ಲವೂ ಇಂದಿನವರೆಗೆ ಸರಿಯಾಗಿರುವುದೇ ?

ಶರತ್—ಎಲ್ಲವೂ ಬೇಬಾಕಾಗಿರುವುದು.

ಅಮರ—ಹಾಗಾದರೆ ನೀನು ಹೊರಡಬಹುದು, ನಿನ್ನ ಅಣ್ಣನಿಗೆ ಸರ್ವಪ್ರಕಾರದಲ್ಲಿಯೂ ಆರೋಗ್ಯವನ್ನುಂಟು ಮಾಡಲೆಂದು ನಾನು ದೇವರನ್ನು ಪ್ರಾರ್ಥಿಸುವೆನು.

ಅಮರನಾಥನು ೬೦ ವರ್ಷದ ವಯಸ್ಸುಳ್ಳವನಾಗಿದ್ದರೂ, ಆತನ ದೇಹದಾರ್ಢ್ಯವು ಚೆನ್ನಾಗಿಯೇ ಇದ್ದಿತು. ಆತನನ್ನು ನೋಡಿದವರೆಲ್ಲರೂ, ಅಮರನಾಥನು ದೃಢಕಾಯನಾದ ಯುವಾ ಪುರುಷನೆಂದು ಹೇಳುತಿದ್ದರು. ಆತನ ಸ್ವಭಾವವು ಬಹಳ ಮೃದುವಾದುದು; ದಯಾದಾಕ್ಷಿಣ್ಯದಿಂದ ಪರಿಪೂರ್ಣವಾದುದು. ವ್ಯಾಪಾರದ ವಿಷಯದಲ್ಲಿ ಮಾತ್ರ ಆತನು ಕಠಿಣಸ್ವಭಾವವುಳ್ಳವನು. ಕೆಲಸದಲ್ಲಿ ಆತನಂತೆ ಚತುರನಾಗಿಯೂ ದಕ್ಷನಾಗಿಯೂ ಇರುವ ಮತ್ತೊಬ್ಬ ಮನುಷ್ಯನು ಅತಿವಿರಳ. ಆತನೊಡನೆ ವ್ಯವಹಾರಮಾಡತಕ್ಕವರೆಲ್ಲರೂ ಈ ಗುಣಗಳಿಂದ ಬಹಳವಾಗಿ ಸಂತೋಷಪಡುತ್ತಿದ್ದರು. ವ್ಯಾಪಾರದಲ್ಲಿ ನಂಬುಗೆ ಗೌರವ ಇವುಗಳೇ ಮೂಲಧನವು.

ಶರಚ್ಚಂದ್ರನ ವಯಸ್ಸು ೨೫. ಆತನ ವೇಷಭೂಷೆಗಳು ನಡೆನುಡಿಗಳು ಇತರರ ಮನಸ್ಸನ್ನು ಆಕರ್ಷಿಸುವಂತಿದ್ದುವು. ಶರಚ್ಚಂದ್ರನು ತನ್ನ ೧೮ ನೆಯ ವರ್ಷದಲ್ಲಿ ಅಮರನಾಥನ ಬಳಿ

ಯಲ್ಲಿ ಸೇರಿಕೊಂಡು, ಇಂದಿನವರೆಗೂ ಯಾರಿಗೂ ವಿರೋಧವಿಲ್ಲದಂತೆ ಕೆಲಸಮಾಡಿಕೊಂಡಿದ್ದನು. ಆದುದರಿಂದಲೇ ಯಜಮಾನನಿಗೆ ಆತನಲ್ಲಿ ಪರಮಪ್ರೀತಿಯಿದ್ದಿತು.

ಶರಚ್ಚಂದ್ರನು ಯಜಮಾನನ ಅಪ್ಪಣೆಯನ್ನು ತೆಗೆದುಕೊಂಡು ಮಧುವನದ ಕಡೆ ತೆರಳಿದನು.

ಅಮರನಾಥನು ತನ್ನ ಕೆಲಸದ ಮೇಲೆ ಕುಳಿತುಕೊಂಡು ಲೆಕ್ಕ ಪತ್ರಗಳನ್ನು ನೋಡಲಾರಂಭಿಸಿದನು. ಈ ರೀತಿಯಲ್ಲಿ ಒಂದೆರಡು ಗಂಟೆಗಳು ಕಳೆದುಹೋದುವು. ಆ ಸಮಯಕ್ಕೆ ಸರಿಯಾಗಿ ಅಪರಿಚಿತನೊಬ್ಬನು ಆತನಿದ್ದಲ್ಲಿಗೆ ಬಂದನು.

ಅಪ್ಪಣೆಯಿಲ್ಲದೆ ಅಮರನಾಥನ ಕೋಣೆಯೊಳಗೆ ಯಾರೂ ಪ್ರವೇಶಮಾಡಕೂಡದೆಂದು ನಿಯಮವಿದ್ದಿತು. ಈ ಅಪರಚಿತನು ಹಠಾತ್ತಾಗಿ ತಾನಿದ್ದಲ್ಲಿಗೆ ಬಂದುದನ್ನು ನೋಡಿ, ಅಮರನಾಥನು ಅಪರಿಚಿತನಾರೋ ಮಾನಮರ್ಯಾದೆಗಳನ್ನರಿಯದ ಸಾಮಾನ್ಯಮನುಷ್ಯನಾಗಿರಬೇಕೆಂದು ತಿಳಿದು-ದಯೆಮಾಡೋಣವಾಗಲಿ, ಎಂದು ಹೇಳಿದನು.

ಅಪರಿಚಿತ — ಅಮರನಾಥಮಹಾಶಯರು ತಾವೇ ಅಲ್ಲವೆ ?

ಅಮರ—ಅಹುದು, ತಾವು ಆರೋ ಗೊತ್ತಾಗಲಿಲ್ಲ.

ಅಪರಿಚಿತ—ಗೊತ್ತಾಗಲು ಕಾರಣವಿಲ್ಲ. ನಾನು ತಮ್ಮನ್ನು ನೋಡಲು ಬಂದವನಲ್ಲ.

ಅಮರ—ತಾವು ಯಾರನ್ನು ನೋಡಬೇಕೆಂದಿರುವಿರಿ?

ಅಪರಿಚಿತ—ತಮ್ಮಲ್ಲಿ ಕೆಲಸಕ್ಕೆ ಇದ್ದ ಶರಚ್ಚಂದ್ರನನ್ನು ನಾನು ನೋಡಬೇಕೆಂದು ಬಂದೆನು.

ಅಮರ—ಆತನು ಈಗತಾನೆ ಹೊರಟುಹೋದನು.

ಅಪರಿಚಿತ—ಏನು ! ಆತನು ಓಡಿಹೋದನೆ !

ಅಮರನಾಥ—ಅಪರಿಚಿತನ ಈ ಮಾತುಗಳನ್ನು ಕೇಳಿ ವಿಸ್ಮಿತನಾಗಿ - ಆತನು ನನ್ನಿಂದ ವಿರಾಮವನ್ನು ಪಡೆದು ಮಧುವನಕ್ಕೆ ಹೋಗಿರುವನು. ಅಲ್ಲಿ ಆತನ ಅಣ್ಣನಿಗೆ ಆರೋಗ್ಯವಿಲ್ಲವಂತೆ. ಆದಕಾರಣ ಆತನನ್ನು ನೋಡಿಕೊಂಡು ಬರಲು ಹೋಗಿರುವನು, ಎಂದನು.

ಅಪರಿಚಿತ—ಸರ್ವನಾಶ ! ಸರ್ವನಾಶ ! ಓಡಿಯೇ ಹೋದನು. ಮಧುವನವಾವುದು? ಆತನ ಅಣ್ಣನೆಂದರೇನು? ಎಲ್ಲವೂ ಸುಳ್ಳು. ಆತನು ಓಡಿಯೇ ಹೋದನು.

ಅಮರ—ತಾವು ಮಾತನಾಡುವುದೇನು? ತಮಗೆ ಬುದ್ಧಿಯು ಸ್ವಾಧೀನದಲ್ಲಿರುವಂತೆ ಕಾಣುವುದಿಲ್ಲ.

ಅಪರಿಚಿತ—ನನ್ನ ಬುದ್ಧಿಯು ಸ್ವಾಧೀನದಲ್ಲಿಯೇ ಇರುವುದು. ತಾವು ಮಾತ್ರ ಮೋಸಹೋಗಿರುವಿರಿ. ಆತನು ತಮ್ಮನ್ನು ವಂಚಿಸಿ ಪಲಾಯನವಾಗಿರುವನು, ಆತನು ಹಿಂದಿರುಗಿ ಬರುವ ಸಂಭವವಿಲ್ಲ. ತಾವು ಆತನ ಆಶೆಯನ್ನೇ ಬಿಡುವುದು ಒಳ್ಳೆಯದು. ಆತನು ತಮ್ಮನ್ನು ನಂಬಿಸಿ ಮೋಸ ಮಾಡಿ ಓಡಿಹೋಗಿರುವನು.

## ಎರಡನೆಯ ಅಧ್ಯಾಯ.

---

ಅಮರನಾಥನು ಅಪರಿಚಿತನ ಮಾತನ್ನು ಕೇಳಿ ಮೂಕನಂತಾಗಿಬಿಟ್ಟನು. ಆತನ ಮುಖವು ಬಾಡಿಹೋಯಿತು. ಕ್ಷಣಕಾಲವೆನ್ನುವುದರೊಳಗಾಗಿಯೇ ಅಮರನ ಮುಖದಲ್ಲಿ ಕೋಪವು ತಲೆದೋರಿ ಕಣ್ಣುಗಳಲ್ಲಿ ಕಿಡಿಗಳು ಸುರಿಯಲಾ

ರಂಭವಾದುವು. ಅಮರನು ತನ್ನ ಹೃದಯದ ಆವೇಗವನ್ನು ತಡೆಯಲಾರದೆ ಅಪರಿಚಿತನನ್ನು ಕುರಿತು-ಸ್ವಾಮಿ ! ಒಂದು ವೇಳೆ ಪರಿಚಿತರಾದವರು ಶರಚ್ಚಂದ್ರನಮೇಲೆ ಅಪವಾದ ವನ್ನು ಹೊರಿಸಿ ದೂಷಿಸಿದರೂ ನಾನು ನಂಬುವುದಿಲ್ಲ; ಹೀಗಿ ರುವಲ್ಲಿ ಅಪರಿಚಿತರಾದ ತಾವು ಹೇಳುವ ಮಾತಿನಲ್ಲಿ ನನಗೆ ನಂಬುಗೆಯೆಂದರೇನು ? ತಾವು ಶರತ್ತಿನ ಸ್ವಭಾವವನ್ನು ಅರಿ ತವರಲ್ಲವೆಂದು ತೋರುತ್ತದೆ. ಇನ್ನು ಮುಂದೆ ತಮ್ಮ ಮಾತನ್ನು ಕೇಳಲು ನನಗೆ ಇಷ್ಟವಿಲ್ಲ, ಎಂದು ಹೇಳಿದನು.

ಅಪರಿಚಿತ—ತಾವು ನನ್ನ ಮಾತನ್ನು ಕೇಳಬೇಕೆಂದಲ್ಲ. ಪ್ರಮಾಣವು ಕಂಡುಬರುವುದಾದರೆ, ತಮಗೇ ನಂಬುಗೆಯುಂ ಟಾಗುವುದು. ಮೇಲಿನ ಸ್ವಭಾವದಿಂದ ಮನುಷ್ಯನನ್ನು ತಿಳಿಯಲಾಗುವುದಿಲ್ಲ. ಶರಚ್ಚಂದ್ರನು ನೋಡುವುದಕ್ಕೆ ಯೋ ಗ್ಯನಂತಿದ್ದರೂ ಕೃತ್ರಿಮಿಯಾಗಿರುವನು. ಪ್ರಕೃತ ಅವನು ನಿನಗೆ ಸರ್ವನಾಶವನ್ನುಂಟುಮಾಡಿ ಎಲ್ಲಿಯೋ ಪಲಾಯನ ವಾಗಿರುವನು. ಇದು ಮಾತ್ರ ಖಂಡಿತವಾದುದು,

ಅಮರ—ತಾವು ಹೇಳುವ ಮಾತಾವುದೂ ನನಗೆ ಗೊ ತ್ತಾಗುವುದಿಲ್ಲ.

ಅಪರಿಚಿತ—ತಮಗೆ ಗೊತ್ತಾಗಲು ಕಾರಣವೇನಿರು ವುದು? ನಿನ್ನೆಯ ರಾತ್ರಿ ನಾನು ಅವನನ್ನು ನೋಡಿದ್ದೆನು. ಈ ದಿನ ಬೆಳಗ್ಗೆ ಅವನು ನನಗೆ ಹಣ ಕೊಡುವುದಾಗಿ ಮಾತು ಕೊಟ್ಟಿದ್ದನು.

ಅಮರ—ಆತನು ತಮಗೆ ಹಣ ಕೊಡುವುದಾಗಿ ಮಾತು ಕೊಟ್ಟಿದ್ದನೇ? ಅದೇಕೆ?

ಅಪರಿಚಿತ—ಅವನಿಂದ ನನಗೆ ಬಾಕಿ ಬರಬೇಕು.

ಅಮರ—ನಾನು ನಂಬುವುದಿಲ್ಲ. ಈ ಮಾತು ಹಾಗಿರಲಿ, ತಮ್ಮ ಹೆಸರೇನು?

ಅಪರಿಚಿತ—ನನ್ನ ಹೆಸರು ಜೀಮೂತವಾಹನ.

ಅಪರಿಚಿತನು ಈ ರೀತಿಯಲ್ಲಿ ತನ್ನ ಹೆಸರನ್ನು ಹೇಳಿ, ಯುಜವ ನನ ಅಪ್ಪಣೆಯಿಲ್ಲದೇ ಅಲ್ಲಿಯೇ ಕುಳಿತುಕೊಂಡನು. ಅಮರನಾಥನು ಇದನ್ನು ನೋಡಿ ಅಸಂತುಷ್ಟನಾಗಿ-ತಾವು ಅಮರಾವತಿಯಲ್ಲಿಯೇ ವಾಸವಾಗಿರುವಿರಾ? ಎಂದು ಕೇಳಿದನು.

ಜೀಮೂತವಾಹನ—ನಾನು ತಮ್ಮ ಮನೆಯ ಪಕ್ಕದಲ್ಲಿ ಎರಡು ಮನೆ ಆಚೆ ವಾಸವಾಗಿರುವೆನು.

ಅಮರ—ತಾವು ಶರತ್ತನ್ನು ಬಲ್ಲಿರಾ?

ಜೀಮೂತ—ಕಾಣದೇನು?

ಅಮರ—ತಮಗೂ ಆತನಿಗೂ ಪರಿಚಯವೆಲ್ಲಿ!

ಜೀಮೂತ—ನನ್ನ ಮನೆಯಲ್ಲಿಯೇ.

ಅಮರ—ತಮ್ಮ ಕಸಬೇನು?

ಜೀಮೂತ—ಜೂಜಿನ ವ್ಯಾಪಾರ.

ನನ್ನ ಮನೆಯಲ್ಲಿ ಎಲ್ಲಾ ತರದ ಜೂಜುಗಾರರೂ ಬಂದು ಸೇರುವರು. ಸರ್ವವೂ ವಿಧವಾದ ಜೂಜಿನ ಆಟವು ನಡೆಯುತ್ತಲೇ ಇರುವುದು

ಅಮರ—ಸರಿಸರಿ. ತಾವು ಎಷ್ಟು ದಿನದಿಂದ ಈ ಸುಳ್ಳನ್ನು ಕಲಿತುಕೊಂಡಿರುವಿರಿ. ಸುಳ್ಳಿಗೆ ಆಧಾರವೇ ಬೇಡವೆ! ಇದಂತಿರಲಿ. ತಾವು ಶರತ್ತನ್ನು ನೋಡಲು ಬಂದುದಕ್ಕೆ ನಿಜವಾದ ಕಾರಣವೇನೆಂಬುದನ್ನು ತಿಳಿಸೋಣವಾಗಲಿ.

ಜೀಮೂತ—ನಾನು ಹೇಳುವುದೆಲ್ಲವೂ ತಮಗೆ ಸುಳ್ಳಾ

ದರೆ, ನಾನದೆಂತಹ ನಿಜವನ್ನು ಹೇಳಬೇಕು? ನಾನು ಪ್ರಮಾಣವಾಗಿಯೂ ಹೇಳುತ್ತೇನೆ-ಶರಚ್ಚಂದ್ರನು ಪ್ರತಿದಿನವೂ ನಮ್ಮ ಮನೆಗೆ ಬಂದು ಜೂಜಾಡುವನು. ಇದರಲ್ಲಿ ಯಾವ ವಿಧವಾದ ಸಂಶಯವೂ ಇರಲಾರದು. ಆತನು ಎರಡು ಮೂರು ದಿನಗಳಿಂದೀಚೆಗೆ ೩೦೦, ೮೪೦ ರೂಪಾಯಿಗಳನ್ನು ಸೋತಿರುವನು. ಈ ಮೊಬಲಗಿನ ರೂಪಾಯಿಗಳನ್ನು ಆತನು ನನಗೆ ಕೊಡಬೇಕು.

ಅಮರ—ಶರಚ್ಚಂದ್ರನು ಜೂಜಿನ ಆಟದಲ್ಲಿ ತಮಗೆ ೩೦೦, ೮೪೦ ರೂಪಾಯಿಗಳನ್ನು ಸೋತಿರುವನೇ?

ಜೀಮೂತ—ತಾವು ಈ ಮಾತನ್ನು ನಂಬಿಕೊಳ್ಳುವ ಹಾಗಿಲ್ಲ. ಹೀಗಿರುವಲ್ಲಿ ನಾನು ತಮ್ಮ ಸಮ್ಮುಖದಲ್ಲಿ ಹೇಳಿ ಫಲವೇನು.

ಅಮರನಾಥನು ಜೀಮೂತವಾಹನನ ಮಾತನ್ನು ಕೇಳಿ ಅಚ್ಚರಿಗೊಂಡು, ಒಂದು ಕ್ಷಣಕಾಲ ಆತನ ಮುಖವನ್ನೇ ನೋಡುತ್ತಿದ್ದು, ಅನಂತರ-ತಾವು ಹೇಳುವ ಮಾತಿನಲ್ಲಿ ನನಗೆ ಕಿಂಚಿತ್ತೂ ವಿಶ್ವಾಸವುಂಟಾಗುವುದಿಲ್ಲ. ತಾವು ಶರತ್ತನ್ನು ಬಲ್ಲಿರೋ ಇಲ್ಲವೋ ಅದೇ ನನಗೆ ಸಂದೇಹವಾಗಿರುವುದು. ಹೇಗಾದರೂ ಇರಲಿ ತಮ್ಮ ಮಾತಿನಲ್ಲಿ ನನಗೆ ನಂಬುಗೆಯೆಂಬುದೇ ಇಲ್ಲದ್ದರಿಂದ, ತಾವು ದಯೆಯಿಟ್ಟು ಇಲ್ಲಿಂದ ಮುಂದಕ್ಕೆ ತೆರಳಬೇಕು, ಎಂದು ಹೇಳಿದನು.

## ಮೂರನೆಯ ಅಧ್ಯಾಯ.

ಅಮರನಾಥನು ಹೇಳಿದ ಮಾತನ್ನು ಕೇಳಿ, ಜೀಮೂತವಾಹನನಿಗೆ ಕೊಂಚವಾದರೂ ವ್ಯಸನವುಂಟಾಗಲಿಲ್ಲ. ಕೆಲ

ಸಗಾರರು ಇತರರ ತಿರಸ್ಕಾರವನ್ನು ಎಂದಿಗೂ ಲೆಕ್ಕಿಸುವು ದಿಲ್ಲ. ಜೀಮೂತನು ತಾನು ಕುಳಿತಿದ್ದ ಸ್ಥಳದಿಂದೆದ್ದು ಹೊರಡುವ್ರದಕ್ಕೆ ಸಿದ್ಧನಾದ ಕೂಡಲೆ, ಅಮರನನ್ನು ಕುರಿತು ಮಹಾಸ್ವಾಮಿ ! ತಾವು ದೊಡ್ಡವರು. ನನ್ನ ಮಾತನ್ನು ತಾವು ಪೂರ್ತಿಯಾಗಿ ಕೇಳದೆ, ನನ್ನನ್ನು ಮನೆಯಿಂದ ಹೊರಡಿಸುವ ಪ್ರಯತ್ನಮಾಡಿದಿರಿ. ಚಿಂತೆಯಿಲ್ಲ. ದೇವರು ತಮಗೆ ಒಳ್ಳೆ ಯದನ್ನು ಮಾಡಲಿ ಎಂದು ಹೇಳಿದ ಮಾತನ್ನು ಕೇಳಿ ಅಮರನಾಥನು-ಸ್ವಾಮಿ ! ತಮ್ಮ ಆಶೀರ್ವಾದವು ಹಾಗಿರಲಿ. ಸ್ವಂತ ಕೆಲಸವೇನಾದರೂ ಇರುವುದಾದರೆ ತಿಳಿಸೋಣಾಗಲಿ ಇಲ್ಲವಾದರೆ ಹೊರಡೋಣಾಗಲಿ, ಎಂದು ಹೇಳಿದನು.

ಜೀಮೂತ—ನಾನು ತಮಗೆ ಹೇಳುವುದೇನಿದೆ. ಶರ ತ್ತನು ಬಲು ಹಣವನ್ನು ಅಪಹರಿಸಿಕೊಂಡು ಎಲ್ಲಿಯೋ ಮಾಯವಾಗಿರುವನು. ಆತನು ಈ ಮೂರು ಲೋಕದಲ್ಲಿ ಎಲ್ಲಿದ್ದರೂ ಸರಿಯೇ, ನಾನಾತನನ್ನು ಹಿಡಿತರಿಸಿ ನನಗೆ ಬರ ಬೇಕಾದ ಹಣವನ್ನು ಬರಮಾಡಿಕೊಳ್ಳುವೆನು. ಇದೆಲ್ಲವ ನ್ನೂ ತಾವು ಕಣ್ಣಿನಿಂದಲೇ ನೋಡುತ್ತಿರಬಹುದು. ಅನಂ ತರ ನನ್ನ ಮಾತೆಲ್ಲವೂ ತಮಗೆ ಸತ್ಯವೇ ಆಗುವುವು.

ಅಮರ—ಆತನು ಮಧುವನಕ್ಕೆ ಹೋಗಿಲ್ಲವೆ?

ಜೀಮೂತ—ಇಲ್ಲವೆಂದು ನನಗೆ ತೋರುವುದು.

ಅಮರ—ಹಾಗಾದರೆ ಆತನೆಲ್ಲಿಗೆ ಹೋಗಿರಬಹುದು?

ಜೀಮೂತ—ಅದನ್ನು ನಾನು ಹೇಗೆ ಹೇಳಲಿ? ಅದು ನನಗೆ ಗೊತ್ತಿದ್ದಿದ್ದರೆ, ನಾನು ಇಷ್ಟು ಶ್ರಮಪಡಬೇಕಾಗಿದ್ದಿತೇ?

ಅಮರ—ಶರತ್ತನು ಮಧುವನಕ್ಕೆ ಹೋಗಿಲ್ಲವೆಂಬು ದಕ್ಕೆ ಆಧಾರವೇನು? ತಮ್ಮ ಅನುಮಾನವೇ ಯಥಾರ್ಥವೆಂ

ದು ತಿಳಿದು ನಂಬಲಾಗುವುದಿಲ್ಲ. ಶರಚ್ಚಂದ್ರನು ಅವಿಶ್ವಾಸಕ್ಕೆ ಪಾತ್ರನೆಂಬುದು ಹೇಗೆ?

ಜೀವ.ೂತ—ನನ್ನ ಮನೆಗೆ ಬರುವ ಜನರೆಲ್ಲರೂ ಆಡಿಕೊಳ್ಳುವರು. ಅನೇಕರು ಹೇಳುವ ಮಾತು ಎಂದಿಗೂ ಸುಳ್ಳಾಗಲಾರದು.

ಅಮರ—ನಮ್ಮ ಮನೆಯಲ್ಲಿ ಕೆಲಸ ಮಾಡಿಕೊಂಡಿರುವ ಶರಚ್ಚಂದ್ರನೇ ನಿಮ್ಮ ಮನೆಯಲ್ಲಿ ಜೂಜಾಡುವನೋ ಅಥವಾ ಶರಚ್ಚಂದ್ರನೆಂಬ ಇತರರಾರಾದರೂ ಜೂಜಾಡುವರೋ?

ಜೀಮೂತ—ನಿಶ್ಚಯವಾಗಿಯೂ ನಿಮ್ಮ ಶರಚ್ಚಂದ್ರನೇ. ಆತನು ತಮ್ಮಲ್ಲಿ ಕೆಲಸಕ್ಕೆ ಇರುವುದಾಗಿ ಸಾವಿರಸಲ ಹೇಳಿರುವನು.

ಜೀಮೂತನು-ಎಷ್ಟು ಹೇಳಿದರೂ ಅಮರನಾಥನಿಗೆ ನಂಬುಗೆ ಯುಂಟಾಗಲಿಲ್ಲ. ಹೇಗಾದರೂ ಮಾಡಿ ಜೀಮೂತನನ್ನು ಹೊರಗೆ ಕಳುಹಿಸಬೇಕೆಂದು ಯೋಚಿಸಿ-ಸ್ವಾಮಿ! ಈ ವಿಷಯದಲ್ಲಿ ಸಾವಕಾಶವಾಗಿ ಮಾತನಾಡೋಣ. ಮತ್ತೊಂದು ಸಲ ನಾನು ಹೇಳಿ ಕಳುಹಿಸುವೆನು, ಆಗ ತಾವು ದಯೆಯಿಟ್ಟು ಬರೋಣವಾಗಬೇಕು. ಮತ್ತೆ ಬರಲು ತಮಗೆ ಶ್ರಮವಿಲ್ಲವಷ್ಟೆ? ಎಂದನು.

ಜೀಮೂತ—ತಮ್ಮಲ್ಲಿ ಬರಲು ನನಗೆ ಕಷ್ಟವೆಂದರೇನು? ನಾನು ಇದೇ ಬೀದಿಯಲ್ಲಿ ೨೪ ನೆಯ ನಂಬರು ಮನೆಯಲ್ಲಿ ವಾಸವಾಗಿರುವೆನು. ತಾವು ಒಂದು ಮಾತು ಹೇಳಿ ಕಳುಹಿಸಿದೊಡನೆಯೇ ನಾನು ಬಂದುಬಿಡುವೆನು.

ಜೀಮೂತವಾಹನನು ಈ ರೀತಿಯಾಗಿ ಮಾತನಾಡಿ ಆವ ರೀತಿಯಿಂದ ಕೋಣೆಯೊಳಗೆ ಪ್ರವೇಶಮಾಡಿದ್ದನೋ

ಅದೇರೀತಿ ಸುಲ್ಲಿಯೇ ಕೋಣೆಯಿಂದ ಹೊರಗೆ ಹೊರಟು ಹೋದನು.

## ನಾಲ್ಕನೆಯ ಅಧ್ಯಾಯ.

ಅಮರನಾಥನು ಚಿಂತಾಸಾಗರದಲ್ಲಿ ಮಗ್ನನಾಗಿ ಹೋದನು. ಅವನು ಬಹುವಿಧವಾಗಿ ಯೋಚನೆ ಮಾಡಿದರೂ, ಶರತ್ತಿನಲ್ಲಿ ಆವ ವಿಧವಾದ ಸಂದೇಹವೂ ಹುಟ್ಟಲಿಲ್ಲ. ಕೊನೆಗೆ ಬಗೆ ಹರಿಯುವೇ, ಅಮರನು ತನ್ನ ಕೋಣೆಯಿಂದ ಹೊರಗೆ ಬಂದು, ಅಲ್ಲಿದ್ದ ಒಬ್ಬ ಚಾಕರನನ್ನು ಕುರಿತು-ಮೋಹನದಾಸ ! ಈ ಬೆಳಗ್ಗೆ ನೀನು ಶರತ್ತನ್ನು ನೂಡಿದೆಯು ! ಎಂದು ಕೇಳಲಾಗಿ, ಮೋಹನನು-ನಾನು ನೋಡಿದ್ದೆನು, ಎಂದು ಉತ್ತರಕೊಟ್ಟನು.

ಅಮರ—ಅವನು ಊರಿಗೆ ಹೋಗುವ ವಿಷಯು ನಿನಗೆ ಗೊತ್ತಿದ್ದಿತೇ?

ಮೋಹನ—ಮಧುವನಕ್ಕೆ ಹೋಗುವುದಾಗಿ ಆತನೇ ಹೇಳಿದ್ದನು.

ಅಮರ—ಯಾಕಲ್ಲಿಗೆ?

ಮೋಹನ—ಅಲ್ಲಿ ಅವನ ಅಣ್ಣನಿರುವನಂತೆ,

ಅಮರ—ಈಗ ಹೋಗಲು ಕಾರಣ?

ಮೋಹನ—ಅವನ ಅಣ್ಣನಿಗೆ ಬಹಳ ಜ್ವರವೆಂದು ಮಧುವನದಿಂದ ತಂತೀವರ್ತಮಾನ ಬಂದಿದ್ದಿತು.

ಅಮರ—ಮತ್ತೇನು?

ಮೋಹನ—ಬಳಿಕ ಅವನು ತಮ್ಮಿಂದ ಅಪ್ಪಣೆಯನ್ನು ಪಡೆದು ಹೊರಟುಹೋದನು.

ಅಮರ—ಇದು ಹೇತರ್ಗಮತ್ತೇನೂ ಗೊತ್ತಿಲ್ಲವೋ?

ಮೋಹನ—ನನಗೆ ಮತ್ತಾವ ಸಂಗತಿಯೂ ಗೊತ್ತಿಲ್ಲ.

ಸ್ವಾಮಿ ಭೃತ್ಯರಿಬ್ಬರಿಗೂ ಈ ರೀತಿಯಾಗಿ ಮಾತುಕಥೆಗಳು ನಡೆಯುತ್ತಿರುವಾಗ, ದೊಡ್ಡಮನುಷ್ಯನೊಬ್ಬನು ಅಮರನಾಥನನ್ನು ನೋಡುವುದಕ್ಕೆ ಬಂದನು. ಆಗಂತುಕನಿಗೂ ಅಮರನಾಥನಿಗೂ ಬಹುಕಾಲದಿಂದಲೂ ಹೊದ ಲೇವಾದೇವಿಯಿದ್ದಿತು. ಆಗಂತುಕನು ಯಜಮಾನನ ಕೋಣೆಯೊಳಗೆ ಪ್ರವೇಶಮಾಡಿದ ಬಳಿಕ ಅಮರನನ್ನು ಕುರಿತು ಇಂತೆಂದನು:—

'ಮಹಾಶಯ ! ಬಂದು ವಾರದ ಹಿಂದೆ ನಾನು ತಮ್ಮಲ್ಲಿ ಜಮಾಮಾಡಿಟ್ಟಿದ್ದ ಹಣವನ್ನು ಈಗ ತೆಗೆದುಕೊಂಡು ಹೋಗಬೇಕೆಂದು ಬಂದಿರುವೆನು. ಈಗ ಹಣಕ್ಕೆ ತುಂಬಾ ತಗಾದೆಯಾಗಿರುವುದ . ತಡಮಾಡದೆ ಹಣವನ್ನು ತಾವು ಈಗಲೇ ಕೊಡುವ್ಹದಾದರೆ, ನನಗೆ ತಾವು ಮಹೋಪಕಾರ ಮಾಡಿದಂತಾಗುವುದು.

ಅಮರ—ದೀನೇಂದ್ರ ಚಂದ್ರ ! ತಮಗೆ ವಿಶೇಷವಾದ ಕಾರ್ಯಗೌರವವಿರುವುದಾದರೆ ಈಗಲೇ ಹಣವೆಲ್ಲವನ್ನೂ ಕೊಟ್ಟು ಬಿಡುವೆನು. ನನ್ನ ಲೆಕ್ಕದಲ್ಲಿ ಜಮಾಬರೆದಿರುವುದು ಎಷ್ಟು

ದೀನೇಂದ್ರ—ತಾವೇ ನೋಡಿ ಹೇಳಬೇಕು

ಅಮರನು ಗುಮಾಸ್ತನೊಬ್ಬನನ್ನು ಕರೆದು, ನಿನ್ನೆಯ ದಿನ ಮೋಹಿನೀಕುಮಾರನು ಜಮಾ ಕಟ್ಟಿಸಿದ ಹಣವೆಷ್ಟು? ಅದರ ಪೈಕಿ ಈಗ ಉಳಿದಿರುವುದೆಷ್ಟು? ಎಂದು ಕೇಳಿದನು.

ಗುಮಾಸ್ತ—ಮೋಹಿನೀಕುಮಾರನು ಕೊಟ್ಟ ಹಣವಾವುದೂ ಇನ್ನೂ ಖರ್ಚಾಗಿಲ್ಲ.

ಅಮರ—ಹಾಗಾದರೆ ಆ ಹಣದಲ್ಲಿ ನಮ್ಮ ದೀನೇಂದ್ರ ಚಂದ್ರಮಹಾಶಯರಿಗೆ ಇಪ್ಪತ್ತುಸಾವಿರ ರೂಪಾಯಿಗಳನ್ನು ಕೊಡು.

ಗುಮಾಸ್ತನು ಯಜಮಾನನ ಅಪ್ಪಣೆಯ ಪ್ರಕಾರ ಕಬ್ಬಿಣದ ಪೆಟ್ಟಿಗೆಯಿಂದ ಇಪ್ಪತ್ತು ಸಾವಿರ ರೂಪಾಯಿಗಳನ್ನು ತೆಗೆಯುವುದಕ್ಕೆ ಹೋದನು. ಆತನು ಕೊಂಚ ಹೊತ್ತಿನಮೇಲೆ ಹಿಂದಿರುಗಿ ಯಜಮಾನನ ಹತ್ತಿರ ಬಂದಾಗ, ಅವನ ಮುಖವು ಬಾಡಿದ್ದಿತು, ಕಾಂತಿಯು ಕಳೆಗುಂದಿದ್ದಿತು, ಹಸ್ತವು ಶೂನ್ಯವಾಗಿದ್ದಿತು ಅಮರನು ಇದನ್ನು ನೋಡಿ-ಹಣವನ್ನು ತರಲಿಲ್ಲವೇಕೆ? ಎಂದು ಕೇಳಿದನು

ಗುಮಾಸ್ತ—ಕಬ್ಬಿಣದ ಪೆಟ್ಟಿಗೆಯಲ್ಲಿ ಒಂದು ಕಾಸೂ ಇಲ್ಲ.

ಅಮರ—(ವಿಸ್ಮಿತನಾಗಿ) ಹಾಗೆಂದರೇನು? ಮೋಹಿನೀಕುಮಾರನು ತಂದುಕೊಟ್ಟ ಹಣವು ಇಷ್ಟುಬೇಗ ಏನಾಯಿತು. ನೀನು ಮರೆತು ಮತ್ತೆಲ್ಲಿಯಾದರೂ ಇಟ್ಟಿರಬಹುದು ಹುಡುಕು ಹುಡುಕು. ಇಷ್ಟು ಜಾಗ್ರತೆಯಾಗಿ ಅಷ್ಟು ಹಣವು ಕೈಬಿಟ್ಟುಹೋಗುವುದೆಂದರೇನು.

ಗುಮಾಸ್ತ—ನಾನು ಎಲ್ಲವನ್ನೂ ಹುಡುಕಿನೋಡಿದೆನು ದಯೆಯಿಟ್ಟು ತಾವು ಬಂದು ನೋಡಬೇಕು. ನನಗಾದರೊ ದಿಕ್ಕೇ ತೋರದಂತಾಗಿದೆ.

ಅಮರನಾಥನು ಏಕಕಾಲದಲ್ಲಿಯೇ ಸಹಸ್ರಾರು ಸಿಡಿಲು ಬಡಿದಂತವನಾಗಿ ಹಣದ ಕೋಣೆಯೊಳಗೆ ಪ್ರವೇಶ ಮಾಡಿದನು. ಗುಮಾಸ್ತನೂ ಅವನ ಹಿಂದೆ ಹಿಂದೆಯೇ ಹೋದನು. ಅಮರನು ಎಲ್ಲವನ್ನೂ ಹುಡುಕಿನೋಡಿದನು.

ಯಾತರಿಂದಲೂ ಏನೂ ಪ್ರಯೋಜನವಾಗಲಿಲ್ಲ. ಬಳಿಕ ಶರತ್ತಿನ ಲೆಕ್ಕಗಳನ್ನು ತರಿಸಿಕೊಂಡು ನೋಡಿದನು. ಅದರಲ್ಲಿ, ರಾಮನಾರಾಯಣ ಮಹಾಶಯರಿಗೆ ಈ ದಿನ ಒಂದು ಲಕ್ಷ ರೂಪಾಯಿಗಳು ಕೊಟ್ಟಿರುವುದು, ಎಂದು ಲೆಕ್ಕವು ಬರೆದಿದ್ದಿತು.

## ಐದನೆಯ ಅಧ್ಯಾಯ.

ರಾಮನಾರಾಯಣ ಮಹಾಶಯನಿಗೂ ಅಮರನಾಥನಿಗೂ ಪರಸ್ಪರ ವಿಶೇಷ ಪ್ರೇಮವಿದ್ದಿತು. ಇವರಿಬ್ಬರಿಗೂ ಲೇಣೆದೇಣೆಗಳಿಂದ ಪರಸ್ಪರ ಆಬದ್ಧರಾಗಿದ್ದರು. ರಾಮನಾರಾಯಣನ ಹೆಸರಿನಲ್ಲಿ ಒಂದು ಲಕ್ಷ ರೂಪಾಯಿ ಖರ್ಚು ಬಿದ್ದಿರುವಂತೆ ಶರಚ್ಚಂದ್ರನ ಹಸ್ತಾಕ್ಷರದಿಂದ ಲೇಖ ಬರೆಯಲ್ಪಟ್ಟಿದ್ದಿತು. ಬರವಣಿಗೆಯಲ್ಲಿ ಯಾವ ವಿಧವಾದ ಸಂಶಯವೂ ಇರಲಿಲ್ಲ.

ಅಮರನಾಥನು ಲೆಕ್ಕಪತ್ರಗಳನ್ನು ನೋಡಿ ದಿಕ್ಕು ತೋರದವನಾಗಿ ದೀನೇಂದ್ರನ ಹತ್ತಿರಕ್ಕೆ ಬಂದು-ದೀನೇಂದ್ರ! ನಿನ್ನೆಯ ರಾತ್ರಿಯೇ ಗುಮಾಸ್ತನು ಒಂದು ಲಕ್ಷ ರೂಪಾಯಿಗಳನ್ನು ಮತ್ತೊಬ್ಬನಿಗೆ ಕೊಟ್ಟುಬಿಟ್ಟಿರುವನು. ಪೆಟ್ಟಿಗೆಯಲ್ಲಿ ಈಗ ಯಾವ ಹಣವೂ ಇಲ್ಲ. ನಾಳೆಯೊಳಗಾಗಿ ನಿನ್ನ ಹಣವನ್ನು ಸರಿಪಡಿಸಿ ಕೊಡುವೆನು. ದಯವಿಟ್ಟು ನನ್ನ ತಪ್ಪನ್ನು ಕ್ಷಮಿಸಬೇಕು, ಎಂದನು

ದೀನೇಂದ್ರನು ಆ ಮಾತನ್ನು ಕೇಳಿ ಸಂತೋಷದಿಂದ ಹೊರಟುಹೋದನು.

ಅನಂತರ ಅಮರನಾಥನು ಮೋಹನದಾಸನನ್ನು ಕರೆ

ದು. ಮೋಹನ, ನೀನು ರಾಮನಾರಾಯಣನ ಮನೆಗೆ ಹೋಗಿ, ಆತನು ನಿನ್ನೆಯ ರಾತ್ರಿ ಒಂದು ಲಕ್ಷ ರೂಪಾಯಿಗಳನ್ನು ತೆಗೆದುಕೊಂಡು ಹೋಗಿರುವನೇ ಎಂಬುದನ್ನು ತಿಳಿದುಕೊಂಡು ಜಾಗ್ರತೆಯಾಗಿ ಇಲ್ಲಿಗೆ ಓಡಿ ಬಾ ಎಂದು ಹೇಳಿಕಳುಹಿಸಿದನು.

ಮೋಹನದಾಸನು ಓಡಿಹೋದನು. ಸುಮಾರು ಅರ್ಧ ಗಂಟೆಯಾಗುವುದರೊಳಗಾಗಿಯೇ ರಾಮನಾರಾಯಣನೂ ಮೋಹನನೊಡನೆಯೇ ಹೊರಟು ಬಂದನು.

ಅಮರನು ಯಥಾಯೋಗ್ಯವಾಗಿ ರಾಮನಾರಾಯಣನಿಗೆ ಮರ್ಯಾದೆಯನ್ನು ಮಾಡಿ ತನ್ನ ಕೋಣೆಯೊಳಗೆ ಕರೆದುಕೊಂಡು ಹೋದನು. ಅಲ್ಲಿ ಇಬ್ಬರೂ ಕುಳಿತುಕೊಂಡೊಡನೆಯೇ ರಾಮನಾರಾಯಣನು ಅಮರನನ್ನು ಕುರಿತು—ಮಹಾಶಯ, ತಮ್ಮ ಅಭಿಪ್ರಾಯವು ನನಗೆ ಕೊಂಚವೂ ಅರ್ಥವಾಗಲಿಲ್ಲ, ಎಂದನು.

ಅಮರ—ಅದೇನು? ನಾನು ತಮಗೆ ಕಷ್ಟವಾದ ವಿಷಯವನ್ನೇನೂ ಕೇಳಲಿಲ್ಲವಲ್ಲ? ತಮ್ಮ ಹೆಸರಿನಲ್ಲಿ ಒಂದು ಲಕ್ಷ ರೂಪಾಯಿ ಖರ್ಚು ಬಿದ್ದಿರುವುದು. ಅದು ನಿಜವೋ, ಸುಳ್ಳೋ ಎಂಬುದನ್ನು ತಿಳಿಯಬೇಕಾಗಿದೆ. ಈ ವ್ಯವಹಾರವು ನನಗೆ ತಿಳಿಯದೇ ನಡೆದಿರುವುದು. ನನ್ನ ಗುಮಾಸ್ತನೊಬ್ಬನು ಊರಿಗೆ ಹೋಗುವ ಅವಸರದಲ್ಲಿ ಈ ಸಂಗತಿಯನ್ನು ನನಗೆ ತಿಳಿಸಲು ಮರೆತಿರುವನು. ಆದುದರಿಂದ ತಾವು ನಿನ್ನೆಯ ರಾತ್ರಿ ನಮ್ಮ ಶರಚ್ಚಂದ್ರಸಿಂಹನ ಒಂದು ಲಕ್ಷ ರೂಪಾಯಿಗಳನ್ನು ತೆಗೆದುಕೊಂಡಿರಾ ?

ರಾಮನಾರಾಯಣ— (ಅಚ್ಚರಿಗೊಂಡು) ಹಾಗೆಂದ

ರೇನು? ನಿನ್ನೆಯು ರಾತ್ರಿ ನಿಮ್ಮ ಶರತ್ತನ್ನು ನಾನು ನೋಡಲೇ ಇಲ್ಲ. ನಿನ್ನೆಯ ಮಾತು ಹಾಗಿರಲಿ; ಒಂದು ತಿಂಗಳಿಂದೀಚೆಗೆ ನಿಮ್ಮಿಂದ ಒಂದು ಕಾಸನ್ನೂ ನಾನು ತೆಗೆದುಕೊಂಡು ಹೋದವನಲ್ಲ.

ಅಮರ—ಹಾಗಾದರೆ ತಾವು ನಿನ್ನೆಯ ರಾತ್ರಿ ಒಂದು ಲಕ್ಷ ರೂಪಾಯಿಗಳನ್ನು ತೆಗೆದುಕೊಂಡು ಹೋಗಲಿಲ್ಲವೇ?

ರಾಮ—ನಿನ್ನೆಯ ಮಾತು ಹಾಗಿರಲಿ; ಒಂದು ತಿಂಗಳಿಂದಲೂ ನಿಮ್ಮಿಂದ ಒಂದು ಕಾಸನ್ನೂ ನಾನು ತೆಗೆದುಕೊಂಡು ಹೋಗಿಲ್ಲ.

ಅಮರ—ಹಾಗಾದರೆ ಶರಚ್ಚಂದ್ರನು ತಮ್ಮ ಹೆಸರಿನಲ್ಲಿ ಖರ್ಚು ಹಾಕಿರುವುದು ಸುಳ್ಳೇ? ಶರಚ್ಚಂದ್ರನು ಎಂದಿಗೂ ಸುಳ್ಳಾಡತಕ್ಕವನಲ್ಲ. ಯಾರಿಗಾದರೂ ಒಂದೆರಡು ರೂಪಾಯಿಗಳ ವಿಷಯದಲ್ಲಿ ಭ್ರಮೆ ಬರುವುದುಂಟು. ಲಕ್ಷಾಂತರ ರೂಪಾಯಿಗಳ ವಿಷಯದಲ್ಲಿ ಭ್ರಮನೆಂದರೇನು?

ರಾಮ—ಏನು! ನಾನು ಒಂದು ಲಕ್ಷ ರೂಪಾಯಿಗಳನ್ನು ತೆಗೆದುಕೊಂಡಂತೆ ಅವನು ಬರೆದಿರುವನೇ?

ಅಮರ—ಅಹುದು, ಬರೆದಿರುವನು.

ರಾಮ—ರೋಜಿನಲ್ಲಿ ಮಾತ್ರ ಬರೆದಿರುವನೋ, ಅಥವಾ ವರ್ಗದಲ್ಲಿಯೂ ಬರೆದಿರುವನೊ?

ಅಮರ—ಎಲ್ಲದರಲ್ಲಿಯೂ ಸರಿಯಾಗಿ ಬರೆದಿರುವುದು. ಯಾವ ವಿಧವಾದ ಸಂಶಯವೂ ಕಂಡುಬರುವುದಿಲ್ಲ.

ರಾಮ—ಹಾಗಾದರೆ ಹಗಲುಗಳ್ಳನನ್ನು ನಿಮ್ಮ ಕೆಲಸಕ್ಕೆ ನಿಯಮಿಸಿಕೊಂಡಿರುವಂತೆ ಕಾಣುವುದು. ಅವನು ನಿಮಗೆ ಚೆನ್ನಾಗಿಯೂ ಕೈಕೊಟ್ಟು ಓಡಿಹೋಗಿರುವನು.

ಅಮರನು ಈ ಮಾತನ್ನು ಕೇಳಿ ತಲೆಯಮೇಲೆ ಕೈ ಯಿಟ್ಟುಕೊಂಡು ಅವಾಕ್ಕಾಗಿಬಿಟ್ಟನು. ಯಾವಾಗಲೂ ಸಚ್ಚ ರಿತ್ರನಾಗಿಯೂ, ಪಾಪಭೀತನಾಗಿಯೂ, ಪೂರ್ಣವಿಶ್ವಾಸಕ್ಕೆ ಪಾತ್ರನಾಗಿಯೂ ಇರುವ ಶರಚ್ಚಂದ್ರನು ಈ ರೀತಿಯಲ್ಲಿ ಸ ರ್ವನಾಶವನ್ನುಂಟುಮಾಡಿ ಓಡಿಹೋಗುವುದಾದರೆ ಲೋಕ ದಲ್ಲಿ ಮತ್ತಾರುತಾನೆ ನಂಬುಗೆಗೆ ಅರ್ಹರಾಗುವರು? ಶರಚ್ಚಂ ದ್ರನೇ ಮೋಸಗಾರನಾದಮೇಲೆ, ಲೋಕದಲ್ಲಿ ಧರ್ಮವೆಂಬು ದೇ ಇಲ್ಲ. ಶರಚ್ಚಂದ್ರನೇ ವಿಶ್ವಾಸಘಾತುಕನಾದಮೇಲೆ ನಾನೇ ನನಗೆ ಮೃತ್ಯುವಾಗಲು ಅಡ್ಡಿಯೇನಿರುವುದು. ತಾಯಿ ಯೇ ಮಕ್ಕಳಿಗೆ ವಿಷವಿಕ್ಕಿದರೆ ತಡೆಯುವವರಾರು? ಹಾ ದೈ ವವೇ ! ಈ ಸರ್ವನಾಶವನ್ನು ಅನುಭವಿಸುವುದಕ್ಕಿಂತಲೂ ನನಗೆ ಮರಣವು ಸಂಭವಿಸಿದರೆ ನಾನೇ ಧನ್ಯನು, ಎಂದು ಯೋಚಿಸಿ ಯೋಚಿಸಿ ಮಕ್ಕಳಂತೆ ಗಳಗಳ ಅಳತೊಡಗಿದನು.

---

## ಆರನೆಯ ಅಧ್ಯಾಯ.

---

ಅಮರನು ಬಹಳ ಹೊತ್ತು ಅತ್ತು ಬಳಿಕ ಮೋಹನದಾ ಸನನ್ನು ಕರೆದು ಒಂದು ಕಾಗದವನ್ನು ಅವನ ಕೈಗೆ ಬರೆ ದುಕೊಟ್ಟು, ಪತ್ತೇದಾರಿ ಆಫೀಸಿಗೆ ಹೋಗಿ ಈ ಕಾಗದ ವನ್ನು ಅಲ್ಲಿನ ಯಜಮಾನನಿಗೆ ಕೊಟ್ಟು ಬೇಗ ಬಾ, ಎಂದು ಹೇಳಿ ಕಳುಹಿಸಿದನು.

ಮೋಹನದಾಸನು ಒಂದೇ ಉಸಿರಿನಿಂದ ಓಡಿಹೋದ ನು. ಅನಂತರ ಅಮರನು ರಾಮನಾರಾಯಣನೊಡನೆ ಮತ್ತೆ ಮಾತನಾಡತೊಡಗಿದನು.

ರಾಮು—ಶರಚ್ಚಂದ್ರನು ಈಗ ಎಲ್ಲಿರುವನು?

ಅಮರ—ಮಧುವನಕ್ಕೆ ಹೋಗುವುದಾಗಿ ಹೇಳಿದ್ದನು.

ರಾಮು—ಅದೇನು?

ಅಮರ—ಅವನ ಅಣ್ಣನಿಗೆ ವಿಷಮವಾದ ಜ್ವರವಂತೆ. ಅಲ್ಲಿಂದ ತಂತಿಯ ವರ್ತಮಾನ ಬಂದದ್ದರಿಂದ ಅವನು ಹೊರಟುಹೋದನು. ತಂತಿಯ ವರ್ತಮಾನದಲ್ಲಿ ವಿಶೇಷ ಸಂಗತಿಯೇನೂ ಇರಲಿಲ್ಲ. ಶರಚ್ಚಂದ್ರನು ಮಧುವನಕ್ಕೆ ಹೋಗಿ ಕಾಗದ ಬರೆಯುವುದಾಗಿ ಹೇಳಿದ್ದನು.

ರಾಮು—ಹಾಗಾದರೆ ಶರಚ್ಚಂದ್ರನು ಹಠಾತ್ತಾಗಿ ಹೊರಟುಹೋದನೇ?

ಅಮರ—ಹಾಗೆಯೇ ತೋರುತ್ತದೆ.

ರಾಮು—ಹಠಾತ್ತಾಗಿ ಹೋದುದರಿಂದ ಏನೋ ಮೋಸವಿದ್ದಿರಬೇಕೆಂದು ತೋರುವುದು.

ಅಮರ—ಶರಚ್ಚಂದ್ರನಲ್ಲಿ ನನಗೆ ಅವಿಶ್ವಾಸಕ್ಕೆ ಕಾರಣವಿಲ್ಲ. ಅವನು ನನ್ನ ಕೇವಲವಿಶ್ವಾಸಕ್ಕೆ ಪಾತ್ರನು. ಒಂದೊಂದು ವೇಳೆ ನಾನೇ ನನ್ನನ್ನು ನಂಬುವುದಿಲ್ಲವಾದರೂ, ಅವನನ್ನು ಮಾತ್ರ ಎಂದಿಗೂ ನಂಬದಿರೆನು.

ರಾಮು—ಇಷ್ಟು ನಡೆದಿದ್ದರೂ ಅವನಲ್ಲಿ ನಂಬುಗೆಯೇ?

ಅಮರ—ನನಗೆ ಸರ್ವನಾಶವುಂಟಾಗಿರುವುದಾದರೂ, ಅವನಲ್ಲಿ ನನಗೆ ಪೂರ್ಣವಿಶ್ವಾಸವಿರುವುದು. ಆತನೆಂದಿಗೂ ಇಂತಹ ನೀಚಕೃತ್ಯವನ್ನು ಮಾಡತಕ್ಕವನಲ್ಲ.

ರಾಮು—ಹಾಗಾದರೆ ನಾನು ಈ ಮೋಸದ ಕಾರ್ಯವನ್ನು ಮಾಡಿದೆನೆಂದು ಹೇಳುವಿರೋ?

ಅಮರ—ಶಿವಶಿವ! ಇಲ್ಲ ಇಲ್ಲ; ನಾನೆಂದಿಗೂ ಹಾಗೆ

ಹೇಳುವುದಿಲ್ಲ. ಇದರಲ್ಲಿ ಯಾರದೋ ತಂತ್ರವಿರಬೇಕು. ಖಂಡಿತವಾಗಿಯೂ ಹಣವು ಚೋರಿಯಾಗಿರಬೇಕೆಂದು ನನಗೆ ತೋರುವುದು. ಶರತ್ತಿನಿಂದ ಈ ಕೆಲಸವೆಂದಿಗೂ ನಡೆದಿರ ಲಿಕ್ಕಿಲ್ಲವೆಂದು ನಾನು ಪ್ರಮಾಣವಾಗಿ ಹೇಳುವೆನು.

ರಾಮು—ಒಬ್ಬ ಸಾಧಾರಣನಾದ ಗುಮಾಸ್ತನಮೇಲೆ ಇಂತಹ ವಿಶ್ವಾಸವೊಂಬದನ್ನು ನಾನೆಂದಿಗೂ ನೋಡಿಯೂ ಇಲ್ಲ, ಕೇಳಿಯೂ ಇಲ್ಲ ಈ ರೀತಿಯಾದ ಅನರ್ಥವು ನಿತ್ಯ ವೂ ನಡೆಯುತ್ತಲೇ ಇರುವುದು. ಹಣವೆಂಬುವುದು ತಬ್ಬಲಿ ಪದಾರ್ಥ. ಹಣವು ತಂದೆಮಕ್ಕಳನ್ನು ಅಗಲಿಸುವುದು; ಹಣ ವು ಗಂಡಹೆಂಡರ ಪ್ರೇಮಪಾಶವನ್ನು ಛೇದಿಸುವುದು: ಹಣವು ಅಣ್ಣ ತಮ್ಮಂದಿರಲ್ಲಿ ಜಾತದ್ವೇಷವನ್ನು ತಂದುಹಾಕುವುದು. ಹಣದಿಂದ ಪ್ರಪಂಚದಲ್ಲಿ ಉಂಟಾಗದಿರತಕ್ಕ ಅನರ್ಥಗಳೇ ಇಲ್ಲ.

ಅಮರ—ನನಗೆ ಇದೆಲ್ಲವೂ ಗೊತ್ತು, ನಾನು ವಿಧವಿಧ ವಾಗಿ ಪರೀಕ್ಷಿಸಿನೋಡಿದ್ದಕ್ಕೆ, ಶರಚ್ಚಂದ್ರನು ಹಣದ ಆಸೆ ಗಾಗಿ ನೀಚಕಾರ್ಯವನ್ನೆಂದಿಗೂ ಮಾಡತಕ್ಕವನಲ್ಲ.

ರಾಮು—ತಂದೆಯಾದವನೂ ಮಗನಲ್ಲಿ ಎಂದಿಗೂ ಇ ಡದ ವಿಶ್ವಾಸವನ್ನು ತಾವು ಆತನಲ್ಲಿಡಲು ಕಾರಣವೇನು?

ಅಮರ—ಅವನು ನನಗೆ ಮಗನಿಗಿಂತಲೂ ಹೆಚ್ಚು. ನಾನು ಆತನ ಹೃದಯದಲ್ಲಿ ಹೊಕ್ಕು ನೋಡಿರುವೆನು. ಆತ ನಲ್ಲಿ ಕಿಂಚಿತ್ತಾದರೂ ಕಳಂಕವಿಲ್ಲ. ಆತನಲ್ಲಿ ಅನಿರ್ವಚ ನೀಯವಾದ ಒಂದು ಒಳ್ಳೆಯ ಸ್ವಭಾವವೇ ಇಷ್ಟು ವಿಶ್ವಾಸ ಕ್ಕೆ ಕಾರಣ. ಅದನ್ನು ಕುರಿತು ಜಿಜ್ಞಾಸೆಯೇನು?

ರಾಮುನಾರಾಯಣನು ಈ ಮಾತನ್ನು ಕೇಳಿ, ಮುಂದೆ

ಯಾವ ಮಾತನ್ನೂ ಆಡದೆ ಸುಮ್ಮನಿದ್ದುಬಿಟ್ಟನು.

---

## ಏಳನೆಯ ಅಧ್ಯಾಯ.

ಇವರಿಬ್ಬರೂ ಮಾತನಾಡುತ್ತಿರುವಷ್ಟರಲ್ಲಿಯೇ ಮೋಹನನು ಹಿಂದಿರುಗಿ ಬಂದನು. ಅವನ ಜತೆಯಲ್ಲಿಯೇ ಮತ್ತೊಬ್ಬ ಮನುಷ್ಯನೂ ಅಮರನ ಕೋಣೆಯನ್ನು ಪ್ರವೇಶ ಮಾಡಿದನು. ಮೋಹನನು ಯಜಮಾನನನ್ನು ನೋಡಿ— ಸ್ವಾಮಿ, ಈ ಮನುಷ್ಯನು ಒಬ್ಬ ಪ್ರಸಿದ್ಧನಾದ ಪತ್ತೇದಾರನು. ಈತನ ಹೆಸರು ಅರಿಂದಮ, ಪತ್ತೇದಾರಿ ಆಫೀಸಿನ ಯಜಮಾನನು ಈತನನ್ನು ತಮ್ಮಲ್ಲಿಗೆ ಕಳುಹಿಸಿಕೊಟ್ಟಿರುವನು, ಎಂದು ಹೇಳಿ ಅಲ್ಲಿರದೇ ಹೊರಟುಹೋದನು.

ಅಮರನು ಅರಿಂದಮನಿಗೆ ಯೋಗ್ಯವಾದ ಮರ್ಯಾದೆಯನ್ನು ಮಾಡಿ, ಆಸನದಮೇಲೆ ಕುಳ್ಳಿರಿಸಿ-ಅರಿಂದಮ ಮಹಾಶಯ ! ತಮ್ಮ ಹೆಸರು ಜಗತ್ಪ್ರಸಿದ್ಧವಾದುದು. ನಾನು ಆಗಿಂದಾಗ ತಮ್ಮ ಹೆಸರನ್ನು ವೃತ್ತಪತ್ರಿಕೆಗಳಲ್ಲಿ ನೋಡುತ್ತಲೇ ಇರುವೆನು. ತಾವೇ ಬಂದುದು ನನಗೆ ಬಹಳ ಸಂತೋಷವಾಯಿತು. ತಮ್ಮಿಂದಲೇ ನನ್ನ ಕಾರ್ಯವೆಲ್ಲವೂ ಸಫಲವಾಗುವುದೆಂದು ನನಗೆ ತುಂಬಾ ಭರವಸೆಯಿರುವುದು.

ಮಹಾಶಯ, ನನಗೆ ಪ್ರಕೃತ ಧನನಾಶವಾಗಿರುವುದರಿಂದ ನಾನು ಮಹಾವಿಪತ್ತಿನಲ್ಲಿ ಬಿದ್ದಿರುವೆನು. ನಿನ್ನೆಯರಾತ್ರಿ ನನ್ನ ಮನೆಯಲ್ಲಿ ಒಂದು ಲಕ್ಷ ರೂಪಾಯಿಗಳು ಕಳುವಾಗಿರುವುವು, ಎಂದು ಹೇಳಿದ ಮಾತನ್ನು ಕೇಳಿ, ಅರಿಂದಮನು- ಈ ಸಂಗತಿಯನ್ನು ತಮ್ಮ ಚಾಕರನಿಂದ ಕೇಳಿ ತಿಳಿದುಕೊಂಡೆನು, ಎಂದನು.

ಅಮರ—ಯಾವ ಸಂಗತಿಯನ್ನೂ ಬಹಿರಂಗಪಡಿಸ ಕೂಡದೆಂದು ನಾನು ಅಪ್ಪಣೆ ಮಾಡಿದ್ದೆನು

ಅರಿಂದಮ—ಅದಿರಬಹುದು. ಪತ್ತೇದಾರನು ಕೆಲಸ ವನ್ನು ಕೈಗೊಳ್ಳುವುದಕ್ಕೆ ಮುಂಚೆ, ಇತರರ ಕಡೆಯಿಂದ ಎಷ್ಟು ಸಾಧ್ಯವೋ ಅಷ್ಟು ಸಂಗತಿಗಳನ್ನು ತಿಳಿಯಲು ಯ ತ್ನಮಾಡುವನು. ಇದು ಪತ್ತೇದಾರರ ಸ್ವಭಾವವೇ ಸರಿ. ಇದಕ್ಕಾಗಿ ತಾವು ಚಾಕರನ ಮೇಲೆ ಕೋಪಮಾಡಕೂಡದು.

ಅಮರ—ನನ್ನ ಮನೆಯಲ್ಲಿ ನಡೆದ ಅನರ್ಥವು ಲೋಕ ದಲ್ಲೆಲ್ಲಾ ಹರಡಕೂಡದೆಂಬುದೇ ನನ್ನ ಉದ್ದೇಶ. ಆದ್ದರಿಂ ದಲೇ ಬಹಿರಂಗ ಮಾಡಕೂಡದೆಂದು ನಾನು ಚಾಕರನಿಗೆ ಅಪ್ಪಣೆಮಾಡಿದ್ದೆನು. ತಮಗೆ ತಿಳಿಸದ್ದರಿಂದ ಅಪರಾಧವೆಂದು ನನ್ನ ಅಭಿಪ್ರಾಯವಲ್ಲ. ತಮಗೆ ತಿಳಿಸದೇ ನಾವು ಏನು ಕೆ ಲಸಮಾಡುವುದಕ್ಕಾದೀತು ?

ಅರಿಂದಮ—ತಮ್ಮ ಕೆಲಸವೆಲ್ಲವೂ ಗೋಪ್ಯವಾಗಿ ಯೇ ನಡೆವುದು, ಆ ವಿಷಯದಲ್ಲಿ ತಾವು ಯೋಚಿಸಕೆಲಸವಿಲ್ಲ.

---

## ಎಂಟನೆಯ ಅಧ್ಯಾಯ.

---

ಅನಂತರ ಅಮರನಾಥನು ನಡೆದ ಸಂಗತಿಯೆಲ್ಲವನ್ನೂ ಆಮೂಲಾಗ್ರವಾಗಿ ವಿವರಿಸಿದನು. ನಮ್ಮ ಪ್ರಿಯಪಾಠಕ ಮಹಾಶಯರು ಎಲ್ಲವನ್ನೂ ಬಲ್ಲವರಾದ್ದರಿಂದ ಪುನಃ ಅದನ್ನು ನಾವಿಲ್ಲಿ ವಿವರಿಸಬೇಕಾದುದಿಲ್ಲ.

ಅಮರನಾಥನು ತನ್ನ ವೃತ್ತಾಂತವನ್ನು ಎಲ್ಲಿನವರೆಗೂ ಹೇಳುತ್ತಾನೋ, ಅಲ್ಲಿನವರೆಗೂ ಅರಿಂದಮನು ಆದರದಿಂದ

ಕೇಳುತಿದ್ದು, ಬಳಿಕ-ತಾವು ಹೇಳುವುದು ನೋಡಿದರೆ ಅಪ ರಾಧಿ ಯಾರೆಂಬುದರಲ್ಲಿ ಕೊಂಚವೂ ಸಂಶಯವೇ ಇರುವು ದಿಲ್ಲ, ಎಂದನು.

ಅಮರ—ಶರಚ್ಚಂದ್ರನಿಂದ ಈ ವಿಶ್ವಾಸಘಾತುಕತೆ ಯು ನಡೆದಿರುವುದೆಂದು ತಾವು ನಂಬುವಿರಾ ?

ಅರಿಂದಮ—ಹಾಗೆ ಯೋಚಿಸುವುದು ಆಶ್ಚರ್ಯವೇ ನೂ ಅಲ್ಲ.

ಅಮರ—ಹಾಗಾದರೆ ಶರಚ್ಚಂದ್ರನೇ ದೋಷಿಯೆಂದು ಹೇಳೋಣವಾಗುವುದೇ ?

ಅರಿಂದಮ-ಇದೇ ಪರಮಾರ್ಥವೆಂದು ಹೇಳುವುದಕ್ಕಾ ಗುವುದಿಲ್ಲ. ನಡೆದಿರುವುದು ನೋಡಿದರೆ, ಹಾಗೆಯೇ ಸಂಶ ಯಪಡಬೇಕಾಗುವುದು. ಇಷ್ಟು ದೊಡ್ಡ ಅಂಗಡಿಯಲ್ಲಿ ಅಪರಿಮಿತವಾದ ಹಣವನ್ನು ಒಬ್ಬನೇ ಕದ್ದನೆಂದು ಹೇಳುವು ದಕ್ಕಾಗುವುದಿಲ್ಲ. ಇದರಲ್ಲಿ ಮತ್ತೊಬ್ಬರಾರೋ ಒಳಗಾ ಗಿರಬೇಕು.

ಅಮರ—ಇದ್ದರೂ ಇರಬಹುದು.

ಅರಿಂದಮ—ಶರಚ್ಚಂದ್ರನು ನಿರ್ದೋಷಿಯೆಂದು ತಮ ಗೆ ಪೂರ್ಣವಿಶ್ವಾಸವಿರುವುದಲ್ಲವೇ ?

ಅಮರ—ಆತನು ನಿರ್ದೋಷಿಯೆಂಬುದಕ್ಕೆ ಸಂದೇಹ ವೇ ಇಲ್ಲ.

ಅರಿಂದಮ—ಪ್ರಕೃತ ವಿಷಯವನ್ನು ನೋಡಿದರೆ ತ ಪ್ಪು ಆತನ ಮೇಲೆಯೇ ಬರಗುವುದು.

ಅಮರ—ಇರಬಹುದು; ಆದರೆ ನಾನು ಮಾತ್ರ ಆತ ನನ್ನು ಬಾಲ್ಯದಿಂದಲೂ ಪ್ರೀತಿಸುತ್ತಿರುವೆನು. ಆತನ ಚಾಲ್

ಚರ್ಯೆಗಳಲ್ಲಿ ನನಗೆ ತಿಳಿಯದೇ ಇರುವುದೇನೂ ಇಲ್ಲ.

ಅರಿಂದಮ—ಕೇಳೋಣಾಗಲಿ. ಯೋಗ್ಯನಾದವನು ಮನೋವಾಕ್ಕಾಯಗಳಲ್ಲಿ ಏಕರೂಪನಾಗಿರುವನು; ಅಯೋಗ್ಯನು ಕಾಯೇನವಾಚಾ ಮನಸಾ ಬೇರೆಬೇರೆಯಾಗಿರುವನು. ಕೇವಲ ಬಹಿರಾಕಾರದಿಂದ ಮನುಷ್ಯನನ್ನು ನಂಬುವುದಕ್ಕೆ ಆಗುವುದಿಲ್ಲ. ಅದರಲ್ಲಿಯೂ ಹಣದ ವಿಷಯ. ಈಗಿನ ಕಾಲದಲ್ಲಿ ನಾವು ಯಾರನ್ನೂ ಯಾವಾಗಲೂ ನಂಬಕೂಡದು. ಕಾರಣವೇನೆಂದರೆ-ಪುರಾತನ ಕಾಲದಿಂದಲೂ ಹೃದಯಫಲಕದಲ್ಲಿ ದೃಢವಾಗಿ ಅಂಕಿತವಾಗಿದ್ದ ಧರ್ಮಾಕ್ಷರಗಳು ಈ ಸಂಪೂರ್ಣವಾಗಿ ಲುಪ್ತವಾಗಿ ಹೋಗಿರುವುದಾದ್ದರಿಂದ, ಜನಗಳು ಮಾಡುವ ಯಾವ ಕೆಲಸವೇ ಆಗಲಿ ಧರ್ಮದಿಂದ ದೂರವಾಗಿರುವುದು. ಧರ್ಮಬದ್ಧವಲ್ಲದ ಕೆಲಸವೆಲ್ಲವೂ ಸ್ವಾರ್ಥಕ್ಕಾಗಿಯೇ ಸರಿ. ಇಂತಹ ಪದಾರ್ಥವೆಂಬುದನ್ನರಿಯದ ಸ್ವಾರ್ಥಪ್ರಪಂಚದಲ್ಲಿ ಪರಸ್ಪರಪ್ರೀತಿವಿಶ್ವಾಸಗಳಿರುವುದೆಂಬ ಮಾತು ಆಶ್ಚರ್ಯವನ್ನುಂಟುಮಾಡುವುದು. ಆದ್ದರಿಂದ ಈಗಿನ ಕಾಲದಲ್ಲಿ ನಾವು ಯಾರನ್ನೂ ನಂಬಲಿಕ್ಕಾಗಲಾರದು. ಆಮಾತು ಹಾಗಿರಲಿ. ಆತನು ಮಧುವನಕ್ಕಲ್ಲವೇ ಹೋಗಿರುವುದು?

ಅಮರ—ಅಹುದು, ಆತನು ನನಗೆ ಹಾಗೆ ಹೇಳಿದನು.

ಅರಿಂದಮ—ಹಾಗಾದರೆ ತಾವು ಅಲ್ಲಿಗೆ ಒಂದು ತಂತಿಯ ವರ್ತಮಾನವನ್ನು ಕಳುಹಿಸೋಣಾಗಲಿ.

ಅಮರ—ಕಳುಹಿಸಿರುವೆನು.

ಅರಿಂದಮ—ಒಳ್ಳೆಯದಾಯಿತು. ಆತನು ನಿರ್ದೋಷಿಯಾಗಿದ್ದ ಪಕ್ಷದಲ್ಲಿ, ತಮಗೆ ಆತನಿಂದ ಜವಾಬ್ ಬರುವುದು. ಆತನು ದೋಷಿಯಾಗಿರುವುದಾದರೆ, ಆತನು ಅಲ್ಲಿಗೆ

ಹೋಗಿಯೂ ಇರುವುದಿಲ್ಲ. ಅಲ್ಲಿಂದ ತಮಗೆ ಜವಾಬೂ ಬರುವುದಿಲ್ಲ.

ರಾಮನಾರಾಯಣ—ಶರಚ್ಚಂದ್ರನು ಮಧುವನಕ್ಕೆ ಹೋಗಿಲ್ಲವೆಂದು ತೋರುತ್ತದೆ.

ಮತ್ತೊಬ್ಬ ಮನುಷ್ಯನು ತಮ್ಮ ಮಾತುಗಳ ಮಧ್ಯದಲ್ಲಿ ತಲೆಹಾಕಿದ್ದನ್ನು ಕಂಡು, ಅರಿಂದಮನು ಆತನನ್ನು ನೋಡಿ—ಮಹಾಶಯ ! ಶರಚ್ಚಂದ್ರನು ದೋಷಿಯೆಂದು ತಾವು ಖಂಡಿತವಾಗಿಯೂ ಹೇಳುವಿರಲ್ಲವೇ? ಎಂದನು.

ರಾಮ—ಖಂಡಿತವಾಗಿಯೂ ಆತನು ದೋಷಿಯೇ ಸರಿ.

ಅಪೂರ—ಅದೇಕೆ ಹಾಗೆ ಹೇಳುವಿರಿ? ನಾನು ಬಾಲ್ಯದಿಂದಲೂ ಆತನನ್ನು ಬಲ್ಲೆನು. ಆತನ ಗುಣಗಳಲ್ಲಿ ಕಿಂಚಿತ್ತಾದರೂ ದೋಷವಿಲ್ಲ. ಆತನು ನಿರ್ದೋಷಿಯೆಂದೇ ನನಗೆ ನಂಬುಗೆ.

ರಾಮ—ಒಳ್ಳೆಯವರೆಂಬುವರೇ ಒಂದೊಂದು ವೇಳೆ ಇಂತಹ ಕೆಲಸವನ್ನು ಮಾಡಿಬಿಡುವರು.

ಅರಿಂದಮ—(ರಾಮನಾರಾಯಣನನ್ನು ನೋಡಿ) ಶರಚ್ಚಂದ್ರನು ತಮ್ಮ ಹೆಸರಿನಲ್ಲಿ ಅಲ್ಲವೇ ಒಂದು ಲಕ್ಷ ರೂಪಾಯಿ ಖರ್ಚನ್ನು ತೋರಿಸಿರುವನು.

ರಾಮ—ಅಹುದು.

ಅರಿಂದಮ—ಒಳ್ಳೆಯದು, ಆತನು ಬರೆದಿರುವ ಲೆಕ್ಕಗಳೆಲ್ಲವನ್ನೂ ನೋಡಿದೆನು; ಅದರಲ್ಲಿ ಕೊಂಚವಾದರೂ ತಪ್ಪೆಂಬುದಿಲ್ಲ. ಹೀಗಿರುವಲ್ಲಿ ಈಗ ಮಾತ್ರ ಅವನು ಲೆಕ್ಕಗಳನ್ನು ತಪ್ಪಾಗಿ ಬರೆಯಲು ಕಾರಣವೇನಿರುವುದು?

ರಾಮನಾರಾಯಣನು ಈ ಮಾತನ್ನು ಕೇಳಿ ರೋಷ ಕಷಾಯಿತಲೋಚನನಾಗಿ, ಅರಿಂದಮನನ್ನು ದಿಟ್ಟಿಸಿ ಹಾಕದೆ ನೋಡುತ್ತಾ-ಹಾಗಾದರೆ ನಾನೇ ಈ ಕೆಲಸವನ್ನು ಮಾಡಿದವನೆಂದು ತಾವು ಹೇಳುವಂತಿದೆ, ಎಂದನು.

ಅರಿಂದಮ—ನಾನು ತಮ್ಮ ಮೇಲೆ ತಪ್ಪನ್ನು ಹೊರಿಸಬೇಕೆಂದಿಲ್ಲ. ತಾವೇ ತಪ್ಪಿಗೆ ಸಿಕ್ಕಿಕೊಳ್ಳುವಿರಿ, ಆತನು ತಮಗೆ ಹಣ ಕೊಟ್ಟಿರುವನು; ತಾವೇ ಹಣವನ್ನು ತೆಗೆದುಕೊಂಡಿರುವಿರಿ. ಇಷ್ಟುಮಾತ್ರ ನಿಜವೆಂದು ನಾನು ಕಂಡುಹಿಡಿದಿರುವೆನು. ಈ ಆಧಾರದ ಮೇಲೆಯೇ ನಾನು ಕೆಲಸಮಾಡಬೇಕಾಗಿರುವುದು. ನಾನು ಈ ಮೊಕದ್ದಮೆಯನ್ನು ನ್ಯಾಯಸ್ಥಾನಕ್ಕೆ ಕಳುಹಿಸಿಕೊಡುವೆನು. ಅಲ್ಲಿ ತಾವು ಹಣ ತೆಗೆದಿರುವುದೂ ಇಲ್ಲದ್ದೂ ಇತ್ಯರ್ಥವಾಗುವುದು. ಬಳಿಕ ಯಾರು ಅಪರಾಧಿಯೋ ತಾನಾಗಿಯೇ ಗೊತ್ತಾಗುವುದು. ಇದಕ್ಕಾಗಿ ನಾವು ಈಗಿನಿಂದಲೂ ವಿಚಾರಮಾಡಬೇಕಾದ ಕಾರಣವಿರುವುದಿಲ್ಲ.

## ಒಂಬತ್ತನೆಯ ಅಧ್ಯಾಯ.

ರಾಮನಾರಾಯಣನು ಯಾವ ಮಾತನ್ನೂ ಆಡಲಿಲ್ಲ. ಪತ್ತೇದಾರನು ಹೇಳಿದ ಮಾತನ್ನು ಕೇಳಿದ ಕೂಡಲೇ ಅವನಿಗೆ ಸಂಶಯುಕ್ಕಿಟ್ಟಿತು. ಈ ವಿಲಕ್ಷಣವಾದ ಘಟನೆಯಿಂದ, ಅವನ ಹೃದಯದಲ್ಲಿ ನಾನಾ ಭಾವಗಳು ಏಕಾಧಿಪತ್ಯಮಾಡಲಾರಂಭಿಸಿದವು. ರಾಮನಾರಾಯಣನು ದಿಕ್ಕುತೋರದವನಾಗಿ ಯಾವ ಮಾತನ್ನೂ ಆಡದೆ ಸುಮ್ಮನಿದ್ದುಬಿಟ್ಟನು.

ಅನಂತರ ಅರಿಂದಮನು ಅಮರನ ಕಡೆಗೆ ತಿರುಗಿ ಇಂತೆಂದನು—ನಾನು ತಮ್ಮಲ್ಲಿ ಒಂದೆರಡು ಪ್ರಶ್ನೆಮಾಡಬೇಕೆಂದು ಇಚ್ಛಿಸುವೆನು. ನಾವಿಬ್ಬರು ಹೊರತಾಗಿ ಮತ್ತಾರೂ ಇಲ್ಲಿ ರಕೂಡದೆಂದೇ ನನ್ನ ಉದ್ದೇಶವಾಗಿರುವುದು.

ಅಮರನಾಥನು ಕಣ್ಣಿನ ಸಂಜ್ಞೆಯಿಂದ ರಾಮನಾರಾಯಣನನ್ನು ಬೇರೆಯ ಕಡೆಗೆ ಹೋಗುವಂತೆ ತಿಳಿಸಲಾಗಿ, ರಾಮನಾರಾಯಣನು ಕೂಡಲೆ ಬೇರೊಂದು ಕೋಣೆಯೊಳಗೆ ಹೋಗಿ ಕುಳಿತುಕೊಂಡನು. ಅದಾದಮೇಲೆ, ಅರಿಂದಮನು—ಅಮರಮಹಾಶಯ! ಶರಚ್ಚಂದ್ರನು ತಮಗೆ ಮುಖ್ಯನಾದ ಗುಮಾಸ್ತನೋ? ಎಂದನು.

ಅಮರ—ಹೌದು.

ಅರಿಂ—ಹಣದ ಲೇಣೆದೇಣೆಯೆಲ್ಲವೂ ಆತನೇ ನೋಡುತ್ತಿದ್ದನೋ?

ಅಮರ—ಹೌದು

ಅರಿಂ—ಎಷ್ಟು ದಿವಸದಿಂದ ಆತನು ನಿಮ್ಮಲ್ಲಿರುವನು?

ಅಮರ—ಮೂರು ವರ್ಷಗಳಿಂದ.

ಅರಿಂ—ಶರಚ್ಚಂದ್ರ ಹೊರತಾಗಿ ಮತ್ತೆಷ್ಟು ಜನ ಗುಮಾಸ್ತರಿರುವರು?

ಅಮರ—ಮತ್ತೆ ಇಬ್ಬರಿರುವರು.

ಅರಿಂ—ಅವರುಗಳ ಹೆಸರೇನು?

ಅಮರ—ಅವರಲ್ಲಿ ಒಬ್ಬನ ಹೆಸರು ಮಣಿಶಂಕರ; ಮತ್ತೊಬ್ಬನ ಹೆಸರು ರಾಮರತ್ನ.

ಅರಿಂದಮ—ಅವರಿಬ್ಬರೂ ಯೋಗ್ಯರೋ?

ಅಮರ—ಅವರು ಯೋಗ್ಯರೆಂದು ಹೇಳಲು ಕಾರಣ

ವೇನೂ ಇರುವುದಿಲ್ಲ. ಇಲ್ಲಿನವರೆಗೂ ಯಾರೂ ನನಗೆ ಮೋಸವಮಾಡಿದವರಲ್ಲ. ಹಣದ ವಿಷಯವೆಲ್ಲವೂ ಶರಚ್ಚಂದ್ರನ ಮೂಲಕವಾಗಿಯೇ ನಡೆಯುತ್ತಿದ್ದುದಾದುದರಿಂದ ಉಳಿದವರ ವಿಷಯದಲ್ಲಿ ನಾನು ಸಂಶಯಪಡಲು ಕಾರಣವೇನೂ ಇಲ್ಲ.

ಅರಿಂ—ಅದು ಹೇಗೆ?

ಅಮರ—ಹಣದ ವಿಷಯವೆಲ್ಲವೂ ನಮ್ಮಿಬ್ಬರಲ್ಲಿಯೇ ಇರುತ್ತಿದ್ದಿತು. ಮಣಿಶಂಕರ ರಾಮರತ್ನರು ಲೆಕ್ಕಗಳನ್ನು ಮಾತ್ರ ತಯಾರುಮಾಡುವರು.

ಅರಿಂ—ಶರಚ್ಚಂದ್ರನು ಮಾಡುತ್ತಿದ್ದ ಕೆಲಸವೆಲ್ಲವನ್ನೂ ತಾವು ಪರೀಕ್ಷಿಸಿ ನೋಡುತ್ತಿದ್ದರೋ?

ಅಮರ—ಪ್ರತಿನಿತ್ಯವೂ ನಾವಿಬ್ಬರೂ ಹತ್ತಿರದಲ್ಲಿಯೇ ಕುಳಿತುಕೊಂಡು ಲೇವಾದೇವಿ ನಡೆಯಿಸುತ್ತಿದ್ದೆವು. ಆದಕಾರಣ ಆತನನ್ನು ವಿಶೇಷವಾಗಿ ಪರೀಕ್ಷಿಸುವುದು ನನಗೆ ಪ್ರಕೃತವಾಗಿರಲಿಲ್ಲ.

ಅರಿಂ—ಶರಚ್ಚಂದ್ರನು ಯಾವ ಕೆಲಸ ಮಾಡಬೇಕಾದರೂ ತಮ್ಮನ್ನು ಕೇಳಿ ಮಾಡುತ್ತಿದ್ದನೋ?

ಅಮರ—ಹೌದು, ಎಲ್ಲವನ್ನೂ ನನ್ನನ್ನೇ ಕೇಳಿ ಮಾಡುತ್ತಿದ್ದನು.

ಅರಿಂದಮ—ಹಾಗಾದರೆ ಆತನು ರಾಮನಾರಾಯಣನ ವಿಷಯದಲ್ಲಿ ನಡೆಯಿಸಿದ ಕೃತ್ಯವು ನೂತನವಾದುದು?

ಅಮರ—ಹೌದು, ಈ ರೀತಿಯಾದ ಕೆಲಸವನ್ನು ಆತನೆಂದಿಗೂ ಮಾಡಿದವನಲ್ಲ.

ಅರಿಂ—ಲಕ್ಷ ರೂಪಾಯಿ ಖರ್ಚು ಬಿದ್ದಿರುವ ಲೆಕ್ಕವು ಆತನಿಂದಲೇ ಬರೆಯಲ್ಪಟ್ಟಿದ್ದೋ?

ಅಮರ—ಬರೆಯಲ್ಪಟ್ಟದ್ದು.

ಅರಿಂ—ತಾವು ಪ್ರಮಾಣವಾಗಿ ಹೇಳುವಿರಾ?

ಅಮರ—ಆತನ ಅಕ್ಷರವಿದ್ದ ಹಾಗೆಯೇ ಇರುವುದು.

ಅರಿಂ—ಮಣಿಶಂಕರ ರಾಮರತ್ನರೆಂಬುವರೇನಾದರೂ ಈ ಕೆಲಸದಲ್ಲಿ ಒಳಸಂಚು ಆಗಿದ್ದರೂ ಆಗಿರಬಹುದು. ಅದನ್ನು ನಾನು ತಿಳಿಯಲು ಯತ್ನಮಾಡಬಹುದೇ?

ಅಮರ—ಅಗತ್ಯವಾಗಿ ಈ ಗುಮಾಸ್ತರುಗಳಲ್ಲಿ ಯಾರು ದೋಷಿಗಳೋ ಯಾರು ಬಲ್ಲರು. ತಪ್ಪು ಮಾಡಿದವನು ಸಿಕ್ಕಲಿ. ತಪ್ಪಿಗೆ ಶಿಕ್ಷೆಯಾಗಲಿ. ಆದರೆ ಮಾತ್ರ ಅಪರಾಧಿಯು ನಿರಪರಾಧಿಯಾಗಬಾರದು; ನಿರಪರಾಧಿಯು ಅಪರಾಧಿಯಾಗಬಾರದು.

ಅರಿಂ—ತಾವು ಹೇಳುವಂತೆಯೇ ಆಗಲಿ. ಈ ದಿನ ತಾವು ದೀನೇಂದ್ರಚಂದ್ರ ಮತ್ತು ರಾಮನಾರಾಯಣ ಇವರು ಹೊರತಾಗಿ ಹುತ್ತಾರನ್ನಾದರೂ ಕಂಡು ಮಾತನಾಡಿದಿರಾ?

ಅಮರನಾಥನು ಒಂದು ಕ್ಷಣಕಾಲ ಯೋಚನೆಯಲ್ಲಿ ಮಗ್ನನಾದನು. ಜೂಜಿನ ಕಟ್ಟೆಯನ್ನಿಟ್ಟುಕೊಂಡಿರುವ ಜೀಮೂತವಾಹನನಿಗೂ ತನಗೂ ನಡೆದ ಸಂಭಾಷಣೆಯನ್ನು ಅರಿಂದಮನಿಗೆ ತಿಳಿಸಲು ಆತನಿಗೆ ಇಷ್ಟವಿರಲಿಲ್ಲ ಆದರೆ ತನಗೆ ಸಹಾಯನಾಗಿ ಬಂದಿರುವ ಪತ್ತೇದಾರನಾದ ಅರಿಂದಮನಿಗೆ ಆ ಸಂಗತಿಯನ್ನು ತಿಳಿಸದಿರುವುದು ಅಧರ್ಮವೆಂದು ತಿಳಿದು ಸಮಸ್ತವನ್ನೂ ಹೇಳಿಬಿಟ್ಟನು.

---

## ಹತ್ತನೆಯ ಅಧ್ಯಾಯ.

ಆರಿಂದಮನು ನಡೆದ ಸಂಗತಿಯೆಲ್ಲವನ್ನೂ ಕೇಳಿ-ಈ

ವಿಷಯದಲ್ಲಿ ಕೊಂಚ ಯೋಚಿಸಬೇಕಾಗಿದೆ. ಆತನನ್ನು ಕಂಡುಹಿಡಿದು ಮುಂದೆ ತಿಳಿಯಬೇಕಾದ ಸಂಗತಿಗಳನ್ನು ವಿಮರ್ಶೆಮಾಡಿಕೊಳ್ಳುವೆನು, ಎಂದು ಹೇಳಿ ಹೊರಡಲು ಸಿದ್ಧನಾದವನು ಮತ್ತೆ ಏನೋ ಯೋಚಿಸಿಕೊಂಡು ಅಮರನನ್ನು ಕುರಿತು—ಮಹಾಶಯ ! ಈ ಆಧಾರದಮೇಲೆ ನಾನು ಕೆಲಸವನ್ನು ಪ್ರಾರಂಭಿಸುವೆನು. ಈ ದಿನದೊಳಗಾಗಿ ತಮ್ಮ ತಂತಿಯ ವರ್ತಮಾನಕ್ಕೆ ಜವಾಬು ಬರಬಹುದು. ಅಷ್ಟರೊಳಗಾಗಿ ನಾನೂ ಮಾಡಬೇಕಾದ ಕೆಲಸವನ್ನು ಮಾಡತೊಡಗುವೆನು. ಪ್ರಕೃತ ತಮ್ಮ ಮನೆಯನ್ನೂ, ತಮ್ಮ ಕಬ್ಬಿಣದ ಪೆಟ್ಟಿಗೆಯನ್ನೂ, ತಮ್ಮ ಗುಮಾಸ್ತನನ್ನೂ ನಾನು ನೋಡಬೇಕಾಗಿರುವುದು. ತಮ್ಮ ಗುಮಾಸ್ತರೊಡನೆ ಒಂದೆರಡು ಮಾತನ್ನಾಡುವುದರಿಂದ ತಮಗೇನೂ ತೊಂದರೆಯಿಲ್ಲವಷ್ಟೆ? ಎಂದನು.

ಅಮರ—ನನ್ನ ಅಡ್ಡಿಯಾವುದೂ ಇರುವುದಿಲ್ಲ. ಹೀಗೆ ಹೇಳಿ ಅಮರನು ಅರಿಂದಮನನ್ನು ಮನೆಯ ಒಳಗೆ ಕರೆದುಕೊಂಡು ಹೋಗಿ ಪೆಟ್ಟಿಗೆಯನ್ನು ತೋರಿಸಿದನು.

ಅರಿಂ—ಇದರಲ್ಲಿಯೋ ತಾವು ಹಣವನ್ನಿಟ್ಟಿದ್ದುದು?

ಅಮರ—ಹೌದು; ಈ ಪೆಟ್ಟಿಗೆಯನ್ನು ತೆರೆಯುವುದರಲ್ಲಿ ಗೋಪ್ಯವಾದ ಉಪಾಯವಿರುವುದು. ಈ ಉಪಾಯವನ್ನು ನಾನು, ಶರಚ್ಚಂದ್ರ, ರಾಮರತ್ನ ಈ ಮೂವರಿಗೆ ಮಾತ್ರ ಗೊತ್ತು. ಮತ್ತಾರೂ ಅರಿಯರು. ಈಗ ಪೆಟ್ಟಿಗೆಯನ್ನು ತೆಗೆದು ಹಣವನ್ನು ಅಪಹರಿಸಿದವನೂ ಈ ಉಪಾಯವನ್ನು ಬಲ್ಲನೆಂದು ಹೇಳಬಹುದು.

ಅರಿಂದಮನು ಅಲ್ಲಿಂದ ಗುಮಾಸ್ತರಿರುವ ಸ್ಥಳಕ್ಕೆ

ಹೋಗಿ, ಗುಮಾಸ್ತರ ಭಾವಭಂಗಿಗಳನ್ನು ತಿಳಿದನು. ಅದರಿಂದ ಆತನಿಗೆ ವಿಶೇಷಸಂಗತಿಯೇನೂ ತಿಳಿಯಬರಲಿಲ್ಲ. ಬಳಿಕ ಲೆಕ್ಕಪತ್ರಗಳನ್ನು ಪರೀಕ್ಷಿಸಿ ನೋಡಿದನು. ಶರಚ್ಚಂದ್ರ ರಾಮರತ್ನರ ಹಸ್ತಾಕ್ಷರಗಳು ಸುಮಾರಾಗಿ ಬಂದಕ್ಕೊಂದು ಹೋಲುತಿದ್ದುವೇ ಹೊರತು ಮತ್ತಾವ ಸಂಗತಿಯೂ ಹೊರಪಡಲಿಲ್ಲ. ಅರಿಂದಮನು ಅಲ್ಲಿನ ಸಂಗತಿಗಳನ್ನು ತಿಳಿದುಕೊಂಡು ಹೊರಗೆ ಹೊರಡುವುದಕ್ಕೆ ಪೂರ್ವ ರಾಮರತ್ನನ ಹತ್ತಿರಕ್ಕೆ ಹೋಗಿ—ಅಯ್ಯಾ! ನಾನು ಜೀಮೂತವಾಹನನ ಹತ್ತಿರಕ್ಕೆ ಹೋಗಬೇಕೆಂದಿರುವೆನು ತಾವು ಆತನನ್ನು ಬಲ್ಲಿರಾ? ಎಂದು ಕೇಳಿದನು.

ಈ ಮಾತನ್ನು ಕೇಳಿದಕೂಡಲೆ ರಾಮರತ್ನನು ಗಡಗಡ ನಡುಗಿದನು. ಆತನ ಮುಖವು ಸಪ್ಪೆಯಾಯಿತು, ಕೈಯಲ್ಲಿದ್ದ ಲೇಖಣಿಯು ಜಾರಿಬಿದ್ದಿತು.

ಅರಿಂದಮನು ಉತ್ತರವನ್ನು ನಿರೀಕ್ಷಿಸಿಕೊಂಡು ಆತನ ಬಳಿಯಲ್ಲಿ ಬಹಳ ಹೊತ್ತು ನಿಂತಿರಲಿಲ್ಲ. ಅರಿಂದಮನು ಅವನ ಅಪ್ಪಣೆಯನ್ನು ತೆಗೆದುಕೊಂಡು ಮುಂದಕ್ಕೆ ತೆರಳಿದನು.

ರಾಮನಾರಾಯಣನು ಕೊಂಚಹೊತ್ತು ಅವರನೊಡನೆ ಮಾತನಾಡುತಿದ್ದು ಬಳಿಕ ತನ್ನಮನೆಗೆ ಹೊರಟುಹೋದನು.

---

## ಹನ್ನೊಂದನೆಯ ಅಧ್ಯಾಯ.

ಸಂಧ್ಯಾಕಾಲದ ವರೆಗೂ ಗ್ರಂಥದಲ್ಲಿ ಬರೆದಿಡತಕ್ಕ ವಿಶೇಷಸಂಗತಿಗಳೇನೂ ನಡೆಯಲಿಲ್ಲ. ಸಂಧ್ಯಾಕಾಲವಾದ ಮೇಲೆ ಮಧುವನದಿಂದ ಒಂದು ತಂತಿಯ ವರ್ತಮಾನವು ಬಂತು. ಅವರು ಅದನ್ನು ಆ ಕೂಡಲೆ ಬಿಚ್ಚಿನೋಡಿದನು.

ಅದರಲ್ಲಿ ಬರೆದಿದ್ದುದೇನೆಂದರೆ:—ಶರಚ್ಚಂದ್ರನು ಇಲ್ಲಿಗೆ ಬಂದಿಲ್ಲ. ನನಗೆ ಯಾವ ವಿಧವಾದ ಆಯಾಸವೂ ಉಂಟಾಗಿಲ್ಲ. ಆತನು ಇಲ್ಲಿಗೆ ಬರುವಂತೆ ನಾನಾವ ಟೆಲಿಗ್ರಾಮನ್ನೂ ಕಳುಹಿಸಿದವನಲ್ಲ.

ಈ ಉತ್ತರವು ಶರಚ್ಚಂದ್ರನ ಅಣ್ಣನಿಂದ ಬಂದುದು. ಅಮರನು ಇದನ್ನು ಓದಿ ನೋಡಿಕೊಂಡು ದಿಕ್ಕು ತೋರದವನಾಗಿ ತಲೆಯಮೇಲೆ ಕೈಗಳನ್ನಿಟ್ಟುಕೊಂಡು ಕುಳಿತುಬಿಟ್ಟನು. ‘ನನ್ನ ವಿಶ್ವಾಸಕ್ಕೆ ಪಾತ್ರನಾದ ಶರಚ್ಚಂದ್ರನೂ ನನಗೆ ಈ ರೀತಿಯಲ್ಲಿ ಮೋಸಮಾಡಿ ಹೊರಟುಹೋದನೇ !’ ಎಂದು ಅಮರನು ತನ್ನಲ್ಲಿ ತಾನೇ ಯೋಚಿಸಲಾರಂಭಿಸಿದನು.

ಅಮರನಾಥನು ಇಂತ ಪೆಟ್ಟನ್ನು ಎಂದೂ ತಿಂದವನಲ್ಲ. ಇಷ್ಟಾದರೂ ಶರಚ್ಚಂದ್ರನು ನಿರ್ದೋಷಿಯೇ ಸರಿಯೆಂದು ಅಮರನಿಗೆ ನಂಬುಗೆಯಿದ್ದಿತು.

* * * *

ಅರಿಂದಮನು ಅಮರನಾಥನ ಅಪ್ಪಣೆಯನ್ನು ಗೆದುಕೊಂಡು ತನ್ನ ಮನೆಗೆ ಹಿಂದಿರುಗಿಬಂದವನು, ವೇಷಾಂತರವನ್ನು ಧಾರಣಮಾಡಿ ಸುಮಾರು ಒಂದು ಗಂಟೆಯೊನ್ನುವುದರೊಳಗಾಗಿ ಹೊರಗೆ ಹೊರಟನು. ಮಾರ್ವಾಡಿಯ ವೇಷವನ್ನು ಹಾಕಿಕೊಂಡಿದ್ದ ಅರಿಂದಮನನ್ನು ಗುರುತು ಕಂಡವರು ಕೂಡ ಹಗಲು ಹೊತ್ತಿನಲ್ಲಿ ಗುರುತಿಸಲಾರದೇ ಹೋದರು. ಅರಿಂದಮನು ತನ್ನ ನೂತನ ವೇಷವನ್ನು ಧರಿಸಿ, ಅಮರನಾಥನು ಹೇಳಿದ್ದ ಜೂಜಿನ ಕಟ್ಟೆಯ ಮನೆಯ ಬಳಗೆ ಹೋಗಿ ಪೂರ್ವಪರಿಚಿತನಂತೆ ಬಾಗಿಲನ್ನು ತಟ್ಟಿದನು. ಬಳಿಕ ಮಾರ್ವಾಡಿಯ ಹೆಂಗಸೊಬ್ಬಳು ಒಳಗಿನಿಂದ ಬಂದು ಬಾಗಿಲನ್ನು

ತೆರದು-ಸ್ವಾಮಿ, ತಾವು ಯ ರನ್ನು ಹುಡುಕಿಕೊಂಡು ಬಂದಿ ರುವಿರಿ, ಎಂದು ಕೇಳಿದಳು.

ಅರಿಂದಮ—ಜೀವನ್ಮುತವಾಹನ ಮಹಾಶಯರು ಮನೆಯಲ್ಲಿರುವರೇ ?

ಹೆಂಗಸು—ಇರುವರು. ಏನಪ್ಪಣೆ?

ಅರಿಂ—ಅವರನ್ನು ನಾನೀಗ ನೋಡಲು ಅವಕಾಶ ದೊರೆತೀತೆ?

ಹೆಂಗಸು—ನಾನು ಹೇಳಲಾರೆ. ಅವರೊಡನೆ ಈಗ ಆರಾರೋ ಮಾತನಾಡಿಕೊಂಡಿರುವರು.

ಅರಿಂ—ಆರಾರಿರುವರು?

ಹೆಂಗಸು— ಅವರಾರೋ ನನಗೆ ತಿಳಿಯದು.

ಅರಿಂ—ಯಜಮಾನರು ಈಗ ಯಾವ ಕೋಣೆಯಲ್ಲಿ ಕುಳಿತುಕೊಂಡು ಮಾತನಾಡುತ್ತಿರುವರು?

ಹೆಂಗಸು—ಅವರು ತಮ್ಮ ಸ್ವಂತ ಕೋಣೆಯಲ್ಲಿಯೇ ಇರುವರು.

ಅರಿಂ—ಎರಡನೆಯ ಅಂತಸ್ತಿನಲ್ಲಿಯೋ?

ಹೆಂಗಸು—ಇಲ್ಲ, ಮೂರನೆಯ ಅಂತಸ್ತಿನಲ್ಲಿ.

ಅರಿಂ—ಯಾರೋ ಅವರನ್ನು ನೋಡಬೇಕೆಂದು ಬಂದಿರುವರೆಂದು ದಯವಿಟ್ಟು ಅವರಿಗೆ ತಿಳಿಸು.

ಅಪ್ಪಣೆಯೆಂದು ಆ ಹೆಂಗಸು ಮನೆಯೊಳಗೆ ಹೋಗಿ ಸುಮಾರು ಹತ್ತು ನಿಮಿಷದೊಳಗಾಗಿ ಮತ್ತೆ ಬಂದು ' ಬರ ಬಹುದು, ಮಹಾಶಯ, ಎಂದು ಹೇಳಿದಳು.

---

# ಹನ್ನೆರಡನೆಯ ಅಧ್ಯಾಯ

ಅರಿಂದಮನು ತಡಮಾಡದೆ ಹೆಂಗಸಿನ ಹಿಂದೆ ಹಿಂದೆಯೇ ಹೊರಟನು. ಹೆಂಗಸು ಅರಿಂದಮನನ್ನು ಕರೆದುಕೊಂಡು ಮೂರನೆಯ ಅಂತಸ್ತಿಗೆ ಹೋದಳು.

ಮನೆಯೆಲ್ಲವೂ ಅಂಧಕಾರಮಯ ಕಿಟಕಿಗಳಿಗೆ ಆಸ್ಪದವಿಲ್ಲ. ಮನೆಯೊಳಗೆ ಗಾಳಿಯೆಂಬುದು ಪರಮಪಾವನವಾಗಿದ್ದಿತು. ಹಗಲುಹೊತ್ತಿನಲ್ಲಿ ದೀಪ ಹಚ್ಚಿದರೂ ಮನೆಯ ಅಂಧಕಾರವು ದೂರತೊಲಗುವುದು ಅತಿಪ್ರಯಾಸವೆಂದು ತೋರಿಬರುತಿದ್ದಿತು. ಅರಿಂದಮನು ದೇವರಮೇಲೆ ಭಾರಹಾಕಿ ಹೆಂಗಸಿನ ಕಾಲಿನ ಶಬ್ದವನ್ನೇ ಆಧಾರವಾಗಿಟ್ಟುಕೊಂಡು ಮಹಡಿಯ ಮೇಲೆ ಮಹಡಿಯನ್ನು ಹತ್ತಲಾರಂಭಿಸಿದನು. ಕೊಂಚಕಾಲವೆನ್ನುವುದರೊಳಗಾಗಿ ಹೆಂಗಸು ಮೂರನೆಯ ಅಂತಸ್ತಿನಲ್ಲಿ ಯಜಮಾನನಿದ್ದ ಕೋಣೆಯ ಬಾಗಿಲ ಹತ್ತಿರಕ್ಕೆ ಒಂದು 'ಇಲ್ಲಿಯೇ ಯಜಮಾನರಿರುವುದು' ಎಂದು ಹೇಳಿ ಮಾಯವಾಗಿಬಿಟ್ಟಳು.

ಅರಿಂದಮನು ಕೋಣೆಯ ಬಾಗಿಲನ್ನು ತಟ್ಟಿದನು. ಬಾಗಿಲು ತೆರೆಯಲ್ಪಟ್ಟಿತು. ಇದಿರಿಗೆ ಒಬ್ಬ ಮನುಷ್ಯನು ಬಂದು ನಿಂತುಕೊಂಡನು. ಆತನ ಚಹರೆಯೆಲ್ಲವೂ ಅಮರನಾಥನು ವರ್ಣಿಸಿದ್ದ ಹಾಗೆಯೇ ಇದ್ದದ್ದರಿಂದ, ಈತನೇ ಜೀಮೂತವಾಹನನಾಗಿರಬೇಕೆಂದು ಅರಿಂದಮನು ತಿಳಿದು ಆತನನ್ನು ಕುರಿತು—ಮಹಾಶಯ, ಜೀಮೂತವಾಹನರೆಂಬುವರು ತಾವೇ ಅಲ್ಲವೇ? ಎಂದು ಕೇಳಲಾಗಿ, ಜೀಮೂತವಾಹನನು-ಅಹುದು, ಸ್ವಾಮಿ, ನಾನೇ. ಒಳಗೆ ದಯಮಾಡೋಣವಾಗಲಿ. ತಾವು ಯಾರೋ ನನಗೆ ಪರಿಚಯಸಾಲದು.

ತಾವು ಯಾವ ಕೆಲಸವನ್ನು ನಿಮಿತ್ತಮಾಡಿಕೊಂಡು ನನ್ನಲ್ಲಿಗೆ
ದಯಮಾಡಿದ್ದಾಗಿದೆಯೋ ತಿಳಿಸಬೇಕು. ನಾನು ಸಿದ್ಧ
ನಾಗಿರುವೆನು, ಎಂದು ಹೇಳಿದನು.

ಅರಿಂದಮನು ಕೋಣೆಯೊಳಗೆ ಹೋಗಿ ಬಂದು ಆಸ
ನದ ಮೇಲೆ ಕುಳಿತುಕೊಂಡು ಒಂದು ಕ್ಷಣಕಾಲ ಸುತ್ತಲೂ
ನೋಡಿ ಅಲ್ಲಿ ತಾವಿಬ್ಬರು ಹೊರತಾಗಿ ಮತ್ತಾರೂ ಇಲ್ಲದಿ
ರುವುದನ್ನು ಕಂಡು ಜೀಮೂತವಾಹನನನ್ನು ನೋಡಿ-ದೇವರು,
ತಮ್ಮ ಕೆಲಸಕ್ಕೆ ನಾನು ಕುಂದನ್ನುಂಟುಮಾಡಲಿಲ್ಲವಷ್ಟೆ?
ಎಂದು ಕೇಳಿದನು.

ಜೀಮೂತ—ಇಲ್ಲ, ಇಲ್ಲ, ತಾವು ಈ ರೀತಿಯಾಗಿ
ತಿಳಿಯಕೂಡದು.

ಅರಿಂ—ತಮ್ಮೊಡನೆ ಏಕಾಂತವಾಗಿ ಆರಾರೋ ಮಾ
ತನಾಡಿಕೊಂಡಿರುವರೆಂದು ತಮ್ಮ ಮನೆಯ ದಾಸಿಯು ನನಗೆ
ತಿಳಿಸಿದ್ದಳಾದಕಾರಣ ನಾನು ತಮ್ಮನ್ನು ಈ ರೀತಿಯಲ್ಲಿ ಪ್ರ
ಶ್ನೆಮಾಡಬೇಕಾಯಿತು.

ಜೀಮೂತ—ಅವಳು ಮೊದಲೇ ದಾಸಿ, ಚಾಕರರಸ್ವ
ಭಾವವೇ ಹೀಗಿರುವುದು ಹೊಸಬರಾರಾದರೂ ಬಂದರೆ
ಚಾಕರರಿಗೆ ಇಲ್ಲದ ಬಿಗುಮಾನ ಬರುವುದು ತಮಗೆ ಗೊತ್ತಿ
ಲ್ಲದೇ ಇಲ್ಲ. ಆಕೆಯು ಏತಕ್ಕೆ ಹಾಗೆ ಹೇಳಿದಳೋ ನನಗೆ
ಗೊತ್ತಿಲ್ಲ. ಅಂತೂ ಆಕೆಯು ಸುಳ್ಳು ಹೇಳಿರಬೇಕು.

ತೀಕ್ಷ್ಣಬುದ್ಧಿಯುಳ್ಳ ಅರಿಂದಮನು ದಾಸಿಯು ಹೇಳಿ
ದ್ದು ಸುಳ್ಳೋ, ಯಜಮಾನನು ಹೇಳುವುದು ಸುಳ್ಳೋ ಎಂ
ಬುದನ್ನು ತನ್ನ ಮನದಲ್ಲಿಯೇ ನಿರ್ಧರಿಸಿಕೊಂಡು,-ಆಮಾತು
ಹೋಗಲಿ, ಪ್ರಕೃತ ನಾನು ತಮ್ಮಲ್ಲಿ ಬಂದು ಕೆಲಸಕ್ಕಾಗಿ

ಬಂದಿರುವೆನು. ನನ್ನ ಕಾರ್ಯವಾದರೋ ಕೇವಲ ಗೋಪ್ಯ ವಾದುದು. ಮೂರನೆಯ ಮನುಷ್ಯನಿಗೆ ಅದು ಸರ್ವಾತ್ಮನಾ ಗೋಚರವಾಗಕೂಡದೆಂಬುದೇ ನನ್ನ ಉದ್ದೇಶವಾಗಿರುವುದು, ಎಂದು ಹೇಳಿದನು.

ಜೀಮೂತ—ನನ್ನ ಮನೆಯಲ್ಲಿ ಮತ್ತಾರೂ ಇಲ್ಲ. ಇಲ್ಲಿ ಮಾತನಾಡಿದರೆ ಪಕ್ಕದ ಮನೆಗೆ ಕೇಳುವುದೆಂದು ತಾವು ಭಯಪಡಬೇಕಾದ್ದಿಲ್ಲ. ಗೋಪ್ಯವಾದ ಸಂಗತಿಗಳನ್ನು ನಾನು ಯಾವಾಗಲೂ ಇತರರಿಗೆ ತಿಳಿಸತಕ್ಕ ಸ್ವಭಾವದವನೂ ಅಲ್ಲ.

ಅರಿಂ—ಒಳ್ಳೆಯದಾಯಿತು. ನಾನು ಶರಚ್ಚಂದ್ರನ ವಿಷಯವಾಗಿ ಕೆಲವು ಸಂಗತಿಗಳನ್ನು ತಮ್ಮಿಂದ ಕೇಳಿ ತಿಳಿದುಕೊಂಡು ಹೋಗಬೇಕೆಂದು ಬಂದಿರುವೆನು.

ಈ ಮಾತನ್ನು ಕೇಳಿದ ಕೂಡಲೆ ಜೀಮೂತನು ನಡುಗಿದವನಾಗಿ ಕ್ಷಣಕಾಲ ಅರಿಂದಮನನ್ನು ನೋಡಿಕೊಂಡಿದ್ದು, ಸ್ವಾಮಿ, ಆತನ ವಿಷಯದಲ್ಲಿ ತಾವು ಏನನ್ನು ಕೇಳಬೇಕೆಂದಿರುವಿರಿ, ಎಂದು ಕೇಳಿದನು.

ಅರಿಂ—ಆತನು ಎಲ್ಲಿಯೋ ಓಡಿಹೋದನೆಂದು ನಾನು ಕೇಳಿದೆನು.

ಜೀಮೂತ—ಆತನು ಓಡಿಹೋದನೆಂದು ಕೇಳುವುದರಿಂದ ತಮಗೇನು ನಷ್ಟವೇನು?

ಅರಿಂ—ನನಗೆ ನಷ್ಟವುಂಟು.

ಜೀಮೂತ—ಅದೇನು?

ಅರಿಂ—ಆತನು ನನಗೆ ಹಣಕಾಸುಗಳನ್ನು ಕೊಡಬೇಕಾಗಿದ್ದಿತು.

ಜೀಮೂತ—ಇಷ್ಟೇ ಅಲ್ಲ, ಅವನು ಅನೇಕ ಆಟ

ಗಳನ್ನು ಆಡಿ ಓಡಿಹೋಗಿರುವನು.

ಅರಿಂ — ಅವನು ಜನಗಳಿಗೆ ಮೋಸಮಾಡಿ ಓಡಿಹೋಗುವುದಾದರೂ, ಆತನ ಹೆಂಡತಿಗೆ ತಿಳಿಸಿ ಹೋಗಬಾರದೆ !

ಈ ಮಾತನ್ನು ಕೇಳಿ ಜೀಮೂತನು ಅಚ್ಚರಿಗೊಂಡವನಾಗಿ ಅರಿಂದಮನನ್ನು ನೋಡಿ-ಶರಚ್ಚಂದ್ರನ ಹೆಂಡತಿ ! ಏನು, ಶರಚ್ಚಂದನು ವಿವಾಹಿತನೇ? ಈ ಸಂಗತಿಯು ಇಂದಿನವರೆಗೂ ನಮಗೆ ತಿಳಿಯದು. ಆತನಿಗೆ ವಿವಾಹವೇ ಆಗಿಲ್ಲವೆಂದು ಇಲ್ಲಿನವರೆಲ್ಲರಿಗೂ ನಂಬುಗೆಯಿರುವುದು, ಎಂದು ಹೇಳಿದ ಮಾತನ್ನು ಕೇಳಿ, ಅರಿಂದಮನು ಇದೇನು ಆಶ್ಚರ್ಯವಾಗಿದೆ ! ಯಾರನ್ನು ಕೇಳಿದರೂ ಅವನಿಗೆ ಮದುವೆಯೇ ಇಲ್ಲವೆಂದು ಹೇಳುವರು, ಎಂದನು.

---

## ಹದಿಮೂರನೆಯ ಅಧ್ಯಾಯ

ಅರಿಂದಮನು ತನ್ನ ಮುಂದಿನ ಕಾರ್ಯಕ್ಕೆ ಯಾವ ಅವತಾರಿಕೆಯನ್ನು ಸಿದ್ಧಪಡಿಸಿಕೊಂಡನೋ, ಅದನ್ನು ಮುಂದಿನ ಕಥಾಸಂದರ್ಭದಲ್ಲಿ ವರ್ಣಿಸುವೆವು.

ಜೀಮೂತವಾಹನು ಅರಿಂದಮನು ಹೇಳಿದ ಮಾತನ್ನು ಕೇಳಿ-ಅಯ್ಯೊ ! ತಮಗೂ ಶರಚ್ಚಂದ್ರನಿಗೂ ಸಂಬಂಧವೇನಾದರೂ ಇರುವುದೇ? ಎಂದು ಕೇಳಿದನು

ಅರಿಂ — ಸಂಬಂಧವಿಲ್ಲದೇ ಏನು? ಆತನು ನನ್ನ ತಂಗಿಯ ಗಂಡನಾಗಬೇಕು.

ಜೀಮೂತ — ತಾವು ನನ್ನಲ್ಲಿ ಬರುವುದಕ್ಕೆ ಕಾರಣವೇನು?

ಅರಿಂದಮ. — ಶರಚ್ಚಂದ್ರನ ವಿಷಯವು ತಮಗೆ ಚೆನ್ನಾ

ಗಿ ಗೊತ್ತಿರಬಹುದೆಂದು ನಾನಿಲ್ಲಿಗೆ ಬಂದುದು.

ಜೀಮೂತ—ನನಗೆ ಗೊತ್ತಾಗಲು ಕಾರಣವೇನು?

ಅರಿಂ—ಕಾರಣವಿಲ್ಲದೇ ಏನು? ಅಮರನಾಥನ ಗುಮಾಸ್ತೆ ರಾಮರತ್ನನು ತಮಗೆ ವಿಷಯವೆಲ್ಲವನ್ನೂ ತಿಳಿಸಿಯೇ ಇರಬೇಕು.

ಜೀಮೂತನು ಈ ರೀತಿಯಾಗಿ ಪ್ರಶ್ನೆಮಾಡಿದ ಅರಿಂದಮನ ಮನೋಭಿಪ್ರಾಯವನ್ನು ಗ್ರಹಿಸದೇ-ರಾಮರತ್ನನು ನನಗೆ ಯಾವುದನ್ನೂ ತಿಳಿಸಲಿಲ್ಲವಲ್ಲ, ಎಂದನು.

ಅರಿಂ—ಈ ವತ್ತಿನೊಳಗಾಗಿ ತಾವು ರಾಮರತ್ನನನ್ನು ನೋಡೋಣವಾಗಿದ್ದಿತೇ?

ಜೀಮೂತವಾಹನನಿಗೆ ಉತ್ತರಕೊಡುವುದೇ ಕಷ್ಟಕ್ಕೆ ಬಂದಿತು. ಅವನಿಗೆ ಆಗಂತುಕನ ಮಾತಿನಲ್ಲಿ ಏನೋ ಸ್ವಾರಸ್ಯವಿದೆಯೆಂದು ತಿಳಿಯುವುದಕ್ಕೆ ಇಷ್ಟು ಹೊತ್ತು ಬೇಕಾಯಿತು. ಈ ತಿಳುವಳಿಕೆ ಉಂಟಾದ ಮೇಲೆ ಜೀಮೂತನಿಗೆ ಅರಿಂದಮನಲ್ಲಿ ಸಂಶಯವೇರ್ಪಟ್ಟಿತು. ಸಂಶಯಗ್ರಸ್ತನಾದ ಜೀಮೂತನು ಅರಿಂದಮನನ್ನು ತೀಕ್ಷ್ಣದೃಷ್ಟಿಯಿಂದ ಕಾಲಿಂದ ತಲೆಯವರೆಗೂ ರಪ್ಪೆಹಾಕದ ದೃಷ್ಟಿಯಿಂದ ನೋಡಲಾರಂಭಿಸಿದನು. ಈ ರೀತಿಯಲ್ಲಿ ಒಂದು ಕ್ಷಣಕಾಲ ನೋಡಿದ ಬಳಿಕ ಜೀಮೂತನು ಅರಿಂದಮನ ಮಾತಿಗೆ ಯಾವುದೊಂದು ಉತ್ತರವನ್ನೂ ಹೇಳದೆ ಅಲ್ಲಿಂದೆದ್ದು ಮತ್ತೊಂದು ಕೊಟಡಿಗೆ ಹೊರಟುಹೋದನು. ಇದನ್ನು ಕಂಡ ಅರಿಂದಮನಿಗೆ ಕೊಂಚ ಕೋಪಬಂದಿತು. ಆದರೆ ಕೋಪವನ್ನು ತನ್ನಲ್ಲಿಯೇ ಅಡಗಿಸಿಕೊಂಡು, ಏನು ನಡೆಯುವುದೋ ಎಂದು ಅರಿಂದಮನು ನಿರೀಕ್ಷಿಸಿಕೊಂಡಿರಲು, ಬಳಿಗೆ

ಹೋಗಿದ್ದ ಜೀಮೂತನು ಮತ್ತೊಬ್ಬ ಮನುಷ್ಯನನ್ನು ಜತೆಯಲ್ಲಿ ಕರೆದುಕೊಂಡು ಬಂದನು. ಜತೆಯಲ್ಲಿ ಬಂದವನು ಕೇವಲ ವೃದ್ಧನು. ಆತನ ಗಡ್ಡಮೀಸೆಗಳೆಲ್ಲ ನರೆತುಹೋಗಿದ್ದುವು.

ಅರಿಂದಮನ ಹೃದಯದಲ್ಲಿ ಸಂದೇಹವಂಕುರಿಸಿ, ಅವರು ಬಂದ ಕೂಡಲೇ ಅರಿಂದಮನು ತನ್ನ ಆಸನದಿಂದ ಎದ್ದು ಜೀಮೂತನನ್ನು ಕುರಿತು-ಈ ಮಹನೀಯರಾರು? ಎನಲಾಗಿ, ಜೀಮೂತನು-ಇವರು, ಇವರು, ಎಂದು, ಹೆಸರನ್ನು ಹೇಳಿದರೇನೊ, ಬಿಟ್ಟರೇನೋ ಎಂದು ಯೋಚಿಸುತ್ತಿರುವಷ್ಟರಲ್ಲಿಯೇ, ವೃದ್ಧನು ತಾನು ಮುಂದು ಬಂದು-ಮಹಾಶಯ ! ನನ್ನ ಹೆಸರು ಮೃತ್ಯುಂಜಯ. ತಮ್ಮನ್ನು ನಾನು ಇದಕ್ಕೆ ಮೊದಲು ಎಲ್ಲಿಯೋ ನೋಡಿರುವಂತೆ ಕಾಣುವುದು, ಎಂದನು.

ಅರಿಂದಮನು ವೃದ್ಧನನ್ನು ನಿರೀಕ್ಷಿಸಿ ನೋಡಿ, ಆತನಾರೆಂಬುದನ್ನು ತಿಳಿದುಕೊಂಡಿದ್ದಲ್ಲದೇ, ಅಂತಹ ಸಮಯದಲ್ಲಿ ತಾನು ಅಲ್ಲಿಗೆ ಬಂದಿರುವುದೂ ಅಪಾಯಕರವೆಂದೂ ತಿಳಿದುಕೊಂಡನು. ಬಳಿಕ ಆತ್ಮರಕ್ಷಣೆಗೆ ಬೇಕಾದ ಉಪಾಯವನ್ನು ಯೋಚಿಸತೊಡಗಿದನು.

ಜೀಮೂತನು ಮೃತ್ಯುಂಜಯನಕಡೆಗೆ ತಿರುಗಿ-ಅಯ್ಯಾ, ಈ ದೊಡ್ಡಮನುಷ್ಯರು ಶರಚ್ಚಂದ್ರನ ವಿಷಯದಲ್ಲಿ ಕೆಲವು ಸಂಗತಿಗಳನ್ನು ತಿಳಿಯಬೇಕೆಂದು ಬಂದಿರುವರು. ನಾನು ಇವರನ್ನು ನಿನಗೆ ಪರಿಚಯ ಮಾಡಿಕೊಟ್ಟಿರುವೆನು. ಅವರ ಮನೋರಥವನ್ನು ಸಾಧ್ಯವಾದಷ್ಟು ನೆರವೇರಿಸುವನಾಗು, ಎಂದು ಹೇಳಿ ಸುಮ್ಮನಾದನು.

---

# ಹದಿನಾಲ್ಕನೆಯ ಅಧ್ಯಾಯ.

ಆ ಬಳಿಕ ವೇಷಧಾರಿಯಾದ ಮುದುಕನು ವೇಷಧಾರಿಯಾದ ಅರಿಂದಮನನ್ನು ನೋಡಿ-ಆಗಬಹುದು; ಶರಚ್ಚಂದ್ರನ ವಿಷಯದಲ್ಲಿ ಅನೇಕ ಸಂಗತಿಗಳನ್ನು ನಾನು ತಮಗೆ ತಿಳಿಸುವೆನು, ಎನಲಾಗಿ ಅರಿಂದಮನು-ಆತನು ತಮಗೆ ಬಂಧುವೆ? ಎಂದನು.

ಮೃತ್ಯುಂಜಯ—ಆತನಿಗೂ ನನಗೂ ಸಂಬಂಧವೇನೂ ಇಲ್ಲದಿರುವುದಾದರೂ, ಆತನು ನನಗೆ ಪೂರ್ವಪರಿಚಿತನು.

ಅರಿಂದಮ—ಆತನು ಈ ಬೆಳಗ್ಗೆ ಎಲ್ಲಿಗೆ ಹೋದನು?

ಮೃತ್ಯುಂ—ಮಧುವನಕ್ಕೆ.

ಅರಿಂ—ಅಕಸ್ಮಾತ್ತಾಗಿ ಅಲ್ಲಿಗೆ ಹೋಗಲು ಕಾರಣವೇನು?

ಮೃತ್ಯುಂ—ದುಷ್ಟಕಾರ್ಯಮಾಡಿ ಓಡಿಹೋಗಿರಬೇಕು.

ಅರಿಂ—ಅದೆಂತಹ ದುಷ್ಕಾರ್ಯ.

ಮೃತ್ಯುಂ—ಆತನು ಸುಳ್ಳು ಲೆಕ್ಕಗಳನ್ನು ಬರೆದು, ಬಹಳ ಹಣವನ್ನು ಗುಪ್ತವಾಗಿ ತೆಗೆದುಕೊಂಡು ಓಡಿಹೋಗಿರುವನು.

ಅರಿಂ—ಚೆನ್ನಾಯಿತು ! ಚೆನ್ನಾಯಿತು ! ಅವನು ದೋಷಿಯೆಂದು ತಾವು ನಂಬಿದಿರಾ ?

ಮೃತ್ಯುಂ—ಇಷ್ಟಾದಮೇಲೆ ದೋಷಿಯೋ ಅಲ್ಲವೋ ನೀವೇ ಯೋಚಿಸಿ?

ಅರಿಂ—ಆತನಿಗೆ ಹೆಂಡತಿಯಿರುವಳು; ಅದನ್ನು ತಾವು

ಬಲ್ಲಿರಷ್ಟೆ?

ಮೃತ್ಯುಂಜಯನು ಈ ಮಾತನ್ನು ಕೇಳಿ ಆಶ್ಚರ್ಯಗೊಂಡವನಾಗಿ, ಅರಿಂದಮನನ್ನು ಕೊಂಚಹೊತ್ತು ರಪ್ಪೆಹಾಕದೆ ನೋಡಿ-ಮಹಾಶಯ, ಆ ವಿಷಯ ನನಗೆ ಗೊತ್ತೇ ಇಲ್ಲ, ಎಂದನು.

ಅರಿಂ—ಆತನ ಹೆಂಡತಿಯು ನನಗೆ ತಂಗಿಯಾಗಬೇಕು. ಆದ್ದರಿಂದಲೇ ನಾನು ಆತನನ್ನು ಹುಡುಕುತ್ತಿರುವೆನು. ಆತನು ಓಡಿಹೋಗಿರುವ ಸ್ಥಳವನ್ನು ಯಾರಾದರೂ ತಿಳಿಸಿದರೆ, ನಾನವರಿಗೆ ಒಂದು ನೂರು ರೂಪಾಯಿಗಳನ್ನು ಬಹುಮಾನವಾಗಿ ಕೊಡುವೆನು.

ಮೃತ್ಯುಂ—(ಕೊಂಚಹೊತ್ತು ಯೋಚಿಸಿ) ಆತನು ಮಧುವನಕ್ಕೆ ಹೋಗಿರುವ ಸಂಗತಿಯು ಅಷ್ಟಾಗಿ ನಿಜವೆಂದು ನನಗೆ ನಂಬುಗೆ ಸಾಲದು. ಅವನು ಮತ್ತೆಲ್ಲಿಗೋ ಹೋಗಿರಬೇಕು. ಅದು ನನಗೆ ಗೊತ್ತಿಲ್ಲ.

ಅರಿಂ—(ಹತಾಶನಾಗಿ) ಆತನ ವಿಷಯವು ತಮಗೆ ವಿಶೇಷವಾಗಿ ಗೊತ್ತಿಲ್ಲವೆಂದು ತೋರುವುದು.

ಮೃತ್ಯುಂ—ನನಗೆ ತಿಳಿದಿದ್ದನ್ನು ತಿಳಿಸಿದೆನು. ಇದಕ್ಕಿಂತಲೂ ಹೆಚ್ಚಾಗಿ ನನಗೆ ಗೊತ್ತಿಲ್ಲ.

ಅರಿಂದಮನು ಈ ಮಾತನ್ನು ಕೇಳಿ, ಇವರು ಒಳಗುಟ್ಟನ್ನು ಬಹಿರಂಗ ಪಡಿಸದೇ ಸುಳ್ಳಾಡುತ್ತಿರುವರೆಂದು ತಿಳಿದು, ಜೀಮೂತನ ಅಪ್ಪಣೆಯನ್ನು ತೆಗೆದುಕೊಂಡು ಹೊರಗೆ ಹೊರಟನು. ಹೊರಡುವಾಗ, ಜೀಮೂತವಾಹನ ಮತ್ತು ಮೃತ್ಯುಂಜಯ ಇವರಿಬ್ಬರನ್ನೂ ಸಾಕ್ಷಾತ್ತಾಗಿ ನೋಡಿದ್ದರಿಂದ, ಇವರಿಗೆ ಶರಚ್ಚಂದ್ರನ ಪರಿಚಯವು ಚೆನ್ನಾ

ಗಿರಬೇಕು; ಶರಚ್ಚಂದ್ರನು ದೋಷಿಯೋ ಅಲ್ಲವೋ ಎಂಬು ದನ್ನು ಇವರು ಚೆನ್ನಾಗಿಯೂ ಅರಿತಿರುವರು ನನಗೆಮಾತ್ರ ನಿಜವಾದ ಸಂಗತಿಯನ್ನು ತಿಳಿಸಲಿಲ್ಲ. ಅದೇತಕೆ ಗೋಪ್ಯ ವಾಗಿಟ್ಟುಕೊಂಡಿರುವರೋ, ಅದು ಮಾತ್ರ ನನಗೆ ಗೊತ್ತಾ ಗಲಿಲ್ಲ, ಎಂದು ಯೋಚಿಸುತ್ತಾ ಆ ಸ್ಥಳವನ್ನು ಬಿಟ್ಟು ಕದಲಿದನು.

---

## ಹದಿನೈದನೆಯ ಅಧ್ಯಾಯ

ಅರಿಂದಮನು ಮಹಡಿಯಿಂದ ಕೆಳಗೆ ಇಳಿದುಬರಲು, ಮಾರ್ವಾಡಿಹೆಂಗಸು ಮೊದಲಿನಂತೆಯೇ ಅಲ್ಲಿ ನಿಂತಿದ್ದಳು. ಅರಿಂದಮನು ಆಕೆಯನ್ನು ನೋಡಿದಕೂಡಲೆ, ಅವಳಎರ ಡು ಕೈಗಳನ್ನೂ, ಬಲವಾಗಿ ಹಿಡಿದುಕೊಂಡು- ನಾನು ಬರು ವುದಕ್ಕೆ ಮುಂಚೆ ಮಹಡಿಯಮೇಲೆ ಯಾರು ಯಾರು ಇದ್ದ ರು? ಖಂಡಿತವಾಗಿ ಹೇಳು; ಸುಳ್ಳು ಹೇಳುವುದಾದರೆ ನಿನ್ನ ನ್ನು ನಾನು ಇಲ್ಲಿಯೇ ಕೊಂದುಬಿಡುವೆನು ಎಂದು ಭಯಂ ಕರವಾದ ಧ್ವನಿಯಿಂದ ಮಾತನಾಡಿಸಿದನು.

ಹೆಂಗಸು ಹಠಾತ್ತಾಗಿ ಸಂಭವಿಸಿದ ಈ ವಿಪತ್ತಿನಿಂದ ಉದ್ಧಾರವಾಗಲೋಸುಗ ಗಟ್ಟಿಯಾಗಿ ಕಿರಿಚಲಾರಂಭಿಸ ಲಾಗಿ, ಅರಿಂದಮನು ಅವಳ ಕುತ್ತಿಗೆಯನ್ನು ಅಮಿ ಹಿಡಿದು ಕೊಂಡು-ರಂಡೆ ! ಕಿರಿಚುವುದಾದರೆ ಇಲ್ಲಿಯೇ ನಿನ್ನನ್ನು ತುಳಿ ದುಬಿಡುವೆನು, ಎಂದನು.

ಇದನ್ನು ಕೇಳಿ ಹೆಂಗಸು—ನನ್ನನ್ನು ಏತಕ್ಕೆ ಗೋಳಾ ಡಿಸುವೆ? ಎಂದು ಅಂಗಲಾಚಿಕೊಂಡಳು. ಅದನ್ನು ಕೇಳಿ ಅರಿಂದಮನು-ನಾನು ಯಾರೆಂದು ತಿಳಿದಿರುವೆ ? ನಾನು ಪೋ

ಲೀಸಿನವನು; ಹೆಚ್ಚಾಗಿ ಗಲಾಟೆ ಮಾಡುವುದಾದರೆ ಕಂಡೇ ಇದೆ, ಎಂದನು. ಇದನ್ನು ಕೇಳಿದ ಹೆಂಗಸು ಬಿರುಗಾಳಿಯಲ್ಲಿ ಬಾಳೆಯ ಗಿಡವು ನಡುಗುವಂತೆ ಥರಥರ ನಡುಗಿದಳು. ಅರಿಂದಮನು ಅದನ್ನು ಲಕ್ಷಿಸದೆ-ನೀವೆಲ್ಲ ಕಳ್ಳರಿದ್ದೀರಿ; ನಿಮ್ಮನ್ನು ನಾನು ಸುಮ್ಮನೇ ಬಿಡೆನು. ನಾನು ಕೇಳಿದ್ದಕ್ಕೆ ಸರಿಯಾಗಿ ಉತ್ತರಕೊಡು; ಇಲ್ಲದಿದ್ದರೆ ನಿನ್ನ ಬಾಳು ನಾಯಿಗಿಂತ ಕಡೆಯಾದೀತು, ಎನಲು, ಆ ಹೆಂಗಸು-ನಾನು ಮನೆಯ ದಾಸಿಯು. ನನಗೆ ಯಾವುದೂ ಗೊತ್ತಿಲ್ಲ, ಗೊತ್ತಿಲ್ಲ, ಗೊತ್ತಿಲ್ಲ, ಎಂದಳು.

ಪ್ರಶ್ನೆ-ಈಗ ಮೇಲಿರುವವರನ್ನು ನೀನು ಯಾವಾಗಲೂ ಇಲ್ಲಿ ನೋಡಿಲ್ಲವೋ?

ಉತ್ತರ—ಇಲ್ಲ.

ಪ್ರಶ್ನೆ—ಖಂಡಿತವಾಗಿ ಹೇಳು?

ಉತ್ತರ—ಖಂಡಿತವಾಗಿಯೂ ನೋಡಿಲ್ಲ. ಸುಳ್ಳು ಹೇಳಿ ನನಗಾಗುವುದೇನು?

ಪ್ರಶ್ನೆ—ಹಾಗಾದರೆ ನಾನೇ ಕಂಡು ಹಿಡಿಯುವೆನು. ನನಗೆ ನೀನು ಸಹಾಯಳಾಗಬೇಕು.

ಉತ್ತರ—ನಾನು ಹೆಣ್ಣುಹೆಂಗಸು. ನನ್ನಿಂದಾಗುವುದೇನಿದೆ? ನನ್ನನ್ನು ಬಿಟ್ಟು ಬಿಡಬಾರದೆ? ಒಳಸಂಗತಿಗಳಾವುವೂ ನನಗೆ ಗೊತ್ತಿಲ್ಲ.

ಅರಿಂದಮನು ತನ್ನ ಮುಷ್ಟಿಯನ್ನು ಅವಳ ಮುಖದ ಹತ್ತಿರ ಹಿಡಿದುಕೊಂಡು-ಹರಾಮಿ ! ನಿನಗೆ ಯಾವುದೂ ಗೊತ್ತಿಲ್ಲವೋ? ಇಂತಹ ವಿದ್ಯೆಯನ್ನು ನನ್ನಲ್ಲಿ ತೋರಿಸುವುದಾದರೆ, ನಿನ್ನನ್ನು ಧೂಳೀಪಟ ಮಾಡಿಬಿಡುವೆನು. ನಿನ್ನ

ಅಳು ಗಿಳು ನಾನು ಲಕ್ಷ್ಯಕ್ಕೆ ತರತಕ್ಕವನಲ್ಲ. ನಿನಗೆ ಯಮ ಲೋಕದಲ್ಲಿ ಆಗತಕ್ಕ ಶಿಕ್ಷೆಯು ಇಲ್ಲಿಯೇ ಆದೀತು, ಎಚ್ಚ ರಿಕೆ ! ಎಂದನು.

ಉತ್ತರ—ಅದೇನು ಕೇಳೋಣಾಗಲಿ. ತಿಳಿದಿದ್ದನ್ನು ಹೇಳುವೆನು.

ಪ್ರಶ್ನೆ—ಮಾಡಿಯು ಮೇಲೆ ಜೀಮೂತವಾಹನನಿದ್ದ ಕೋಣೆಗೆ ಸೇರಿದ ಹಾಗೆ ಮತ್ತೊಂದು ಕೋಣೆ ಇದ್ದ ಹಾಗೆ ಕಾಣುವುದು. ಅಲ್ಲಿಗೆ ಹೋಗುವುದಕೆ ಬೇರೊಂದು ದಾರಿ ಯುಂಟೆ?

ಉತ್ತರ—ಉಂಟು. ತಮಗೆ ಇಷ್ಟವಿರುವುದಾದರೆ ನಾನು ಅಲ್ಲಿಗೆ ಕರೆದುಕೊಂಡು ಹೋಗಬಲ್ಲೆನು. ನನ್ನನ್ನು ಪೋಲೀಸಿಗೆ ಹಿಡಿದು ಕೊಡದೇ ಹೋದರೆ, ತಾವು ಹೇಳಿದ ಕೆಲಸವೆಲ್ಲವನ್ನೂ ಮಾಡುವೆನು. ನಾನು ತಮ್ಮ ದಾಸಾ ನುದಾಸಿ.

ಪ್ರಶ್ನೆ—ಬಾಯಿಮುಚ್ಚು. ನಿನ್ನ ಚಾಲಾಕಿನ ಮಾತು ಸಾಕು. ನನ್ನನ್ನೀಗ ಅಲ್ಲಿಗೆ ಕರೆದುಕೊಂಡು ಹೊರಡು. ನನ್ನ ನ್ನು ಈಗ ವಂಚಿಸಿ, ಬೇರೊಂದು ಸ್ಥಳಕ್ಕೆ ಕರೆದೊಯ್ಯುವು ದಾದರೆ ನಿನ್ನ ಹೆಣ ಹಾಕುವೆನು, ಕಂಡೆಯು?

ಉತ್ತರ—ವಂಚನೆಯೇತಕೆ? ತಾವು ನನ್ನ ಜತೆಯಲ್ಲಿ ಬರೋಣಾಗಲಿ. ನಾನು ತಮ್ಮನ್ನು ಸರಿಯಾದ ದಾರಿಯಲ್ಲಿ ಯೇ ಕರೆದುಕೊಂಡು ಹೋಗುವೆನು. ತಾವು ಶಬ್ದ ಮಾಡದಂತೆ ನನ್ನ ಹಿಂದೆ ಹಿಂದೆಯೇ ಬರಬೇಕು.

ಮಾರ್ವಾಡಿ ಹೆಂಗಸು ಈ ರೀತಿಯಾಗಿ ಹೇಳಿ ಮುಂ ದಾದಳು. ಅರಿಂದಮನು ಅವಳ ಹಿಂದೆ ಹಿಂದೆಯೇ ಹೊ ರಟನು.

# ಹದಿನಾರನೆಯ ಅಧ್ಯಾಯ

ಮಾರ್ವಾಡಿ ಹೆಂಗಸು ಅರಿಂದಮನನ್ನು ಜತೆಯಲ್ಲಿ ಕರೆದುಕೊಂಡು ಬೇರೊಂದು ದಿಕ್ಕಿನಿಂದ ಅಂಧಕಾರಮಯವಾದ ಮೆಟ್ಟಿಲುಗಳನ್ನಿಳಿದು ಎರಡನೆಯ ಅಂತಸ್ತಿಗೆ ಬಂದಳು. ಅಲ್ಲಿಂದ ಮತ್ತೊಂದು ದಾರಿಯನ್ನು ಹಿಡಿದು ಮತ್ತೆ ಮೂರನೆಯ ಅಂತಸ್ತಿಗೆ ಹೊರಟಳು. ಅರಿಂದಮನಿಗೆ ತಾನು ಎಲ್ಲಿಂದ ಎಲ್ಲಿಗೆ ಹೋಗುತ್ತೇನೆಂಬುದೇ ಗೊತ್ತಾಗಲಿಲ್ಲ. ಏತಕೆಂದರೆ-ಇಂತಹ ಕಾರ್ಗತ್ತಲೆಯುಳ್ಳ ಮನೆಯನ್ನು ಅವನೆಂದಿಗೂ ನೋಡಿರಲಿಲ್ಲ.

ಮೂರನೆಯ ಅಂತಸ್ತಿನಲ್ಲಿ ಬಾದು ಗಾಢಾಂಧಕಾರಪ್ರೂರಿತವಾದ ಕೋಣೆಯೊಳಗೆ ಹೆಂಗಸು ಪ್ರವೇಶಮಾಡಿ ಅರಿಂದಮನನ್ನು ಕುರಿತು "ಸ್ವಾಮಿ, ಈಗ ನಾವು ಉದ್ದೇಶಮಾಡಿದ ಸ್ಥಳಕ್ಕೆ ಬಂದಿರುವೆವು. ಈ ಕೋಣೆಯಿಂದಲೇ ನೀವು ಮೊದಲು ಕುಳಿತಿದ್ದ ಕೋಣೆಗೆ ಹೋಗಬಹುದು; ಮನೆಯೊಳಗೆ ಪ್ರವೇಶ ಮಾಡಲೂಬಹುದು. ಇಲ್ಲಿರುವ ಬಾಗಿಲ ಬಳಿ ಕಿವಿಯಿಟ್ಟು ಕೇಳುವುದಾದರೆ, ಯಜಮಾನನ ಕೋಣೆಯೊಳಗೆ ಮೆಲ್ಲಗೆ ಮಾತನಾಡಿದರೂ ಕೇಳಬಹುವುದು, ಎಂದು ಹೇಳಿ ಅಲ್ಲಿಂದ ಹೊರಟು ಹೋದಳು. ಅವಳು ಯಾವ ಕಡೆಗೆ ಹೊರಟುಹೋದಳೆಂಬುದು ಅಂಧಕಾರದಲ್ಲಿ ಅರಿಂದಮನಿಗೆ ಕೊಂಚವೂ ಗೊತ್ತಾಗಲಿಲ್ಲ. ಇದರಿಂದ ಆ ಹೆಂಗಸು ತನ್ನ ಕೈಯಿಂದ ಉದ್ಧಾರವಾಗ ಪುದಕ್ಕಾಗಿ ಈ ರೀತಿಯಾದ ತಂತ್ರವನ್ನು ಮಾಡಿರುವಳೆಂದು ಅವನಿಗೆ ಬೋಧೆಯಾಯಿತು, ಆದರೂ ಅವನು ಹೆದರದವನಾಗಿ, ಅಂಧಕಾರದಲ್ಲಿಯೇ ಮುಂದಕ್ಕೆ ಹಜ್ಜೆಯನ್ನಿಡುತ್ತಾ ಹೊರಟನು. ಆಗ ಎಲ್ಲಿಂದಲೋ

ಒಂದು ಧ್ವನಿಯು ಕೇಳಬರಲು, ಅರಿಂದಮನು ಸಮೀಪದಲ್ಲಿದ್ದ ಒಂದು ಬಾಗಿಲಬಳಿಯಲ್ಲಿ ನಿಂತು ಆಲಿಸಿ ಕೇಳತೊಡಗಿದನು. ಜೀಮೂತನು ಮೃತ್ಯುಂಜಯನನ್ನು ಕುರಿತು-ಅಯ್ಯಾ! ಆ ಆಗಂತುಕನು ನಿನ್ನ ವೇಷದಲ್ಲಿ ಸಂದೇಹ ಪಟ್ಟವನಾದರೂ, ನೀನೇ ರಾಮರತ್ನನೆಂದು ಆತನು ತಿಳಿಯಲಾರದೇ ಹೋದನು, ಎಂದನು. ಇದನ್ನು ಕೇಳಿದ ಕೂಡಲೆ ಅರಿಂದಮನಿಗಿದ್ದ ಸಂಶಯವು ಪೂರ್ತಿಯಾಗಿ ನಿವೃತ್ತಿಯಾಯಿತು. ಶರಚ್ಚಂದ್ರನು ತಪ್ಪಿತಸ್ಥನಲ್ಲವೆಂಬುದಕ್ಕೆ ಅನೇಕ ಪ್ರಮಾಣಗಳು ಒದಗಿದವು. ಆತನ ಪ್ರಕೃತದ ಉದ್ದೇಶವು ಬೇರೆಯಾಗಿದ್ದಿತು. ಶರಚ್ಚಂದ್ರನ ಸ್ಥಿತಿಗತಿಗಳನ್ನು ವಿಚಾರಿಸುವುದಕ್ಕೆ ಆತನು ಜೀಮೂತನ ಮನೆಗೆ ಬಂದುದು. ಅಲ್ಲಿ ರಾಮರತ್ನನು ವೇಷಾಂತರವನ್ನು ಧಾರಣಮಾಡಿಕೊಂಡು ಜೀಮೂತನೊಡನೆ ಗೋಪ್ಯವಾಗಿ ವ್ಯವಹರಿಸುತಿದ್ದನು. ಇದನ್ನು ನೋಡಿದ ಕೂಡಲೆ ಅಮರನಾಥನ ಅರ್ಥಾಪಹರಣದಲ್ಲಿ ರಾಮರತ್ನನು ಬಹುತರವಾಗಿ ಕಾರಣನಾಗಿರಬೇಕೆಂದು ಅರಿಂದಮನ ಮನದಲ್ಲಿ ವಿಚಾರಕ್ಕಿಟ್ಟಿತು. ನ್ಯಾಯಪರನೂ, ಧರ್ಮೈಕದೃಷ್ಟಿಯುಳ್ಳವನೂ ನೈಜವಾದ ರೂಪವನ್ನು ಬದಲಾಯಿಸಿಕೊಂಡು ತಿರುಗಬೇಕಾದುದಿಲ್ಲ. ಯಾವನ ಹೃದಯದಲ್ಲಿ ಕಳಂಕವು ಅಂಕುರಿಸುವುದೋ ಅಂತಹವನು ಕಳಂಕವನ್ನು ಮರೆಮಾಚುವುದಕ್ಕಾಗಿ ಇಲ್ಲದ ವೇಷವನ್ನು ಧಾರಣಮಾಡಬೇಕು. ರಾಮರತ್ನನು ವೇಷವನ್ನು ಧಾರಣಮಾಡಿರುವುದರಿಂದ, ಅವನಲ್ಲಿ ಗುರುತರವಾದ ದೋಷವಿದ್ದಿರಬೇಕು ಇದನ್ನು ಯಾರು ತಾನೆ ಇಲ್ಲವೆಂದು ಅಪರೂಪಮಾಡುವರು. ಪ್ರತ್ಯಕ್ಷವಾದರೂ ಪರೀಕ್ಷಿಸಿ ನೋಡಬೇಕೆಂದು ಶಾಸ್ತ್ರವಿರುವುದರಿಂದ ದುಡುಕುವುದು

ಸರಿಯಲ್ಲವೆಂದು ತಿಳಿದು, ಅರಿಂದಮನು ಹಾಗೆಯೇ ಕೇಳುತ ನಿಂತನು. ಅರಿಂದಮನಿಗೆ ಒಂದು ಕಡೆ ಭಯ; ಮತ್ತೊಂದು ಕಡೆ ಕುತೂಹಲ, ಈ ಉಭಯ ಸಂಕಟದಲ್ಲಿ ಶಿಲುಕಿ ಅರಿಂದಮನು ಕೋಣೆಯೊಳಗೆ ನಡೆಯುತಿದ್ದ ಸಂಭಾಷಣೆಯನ್ನು ಕೇಳಲಾರಂಭಿಸಿದನು.

ರಾಮರತ್ನ—ಆತನು ನನ್ನ ಗುರುತನ್ನು ಹಿಡಿಯಲಾರದೆ ಹೋದನೆಂದು ನಾನು ಖಂಡಿತವಾಗಿಯೂ ಬಲ್ಲೆನು.

ಜೀಮೂತ—ಅದು ಹೇಗೆ ?

ರಾಮ—ಮುಖಭಾವದಿಂದ

ಜೀಮೂತ—ಬುದ್ಧಿವಂತರು ಹೃದಯಾಭಿಪ್ರಾಯಗಳನ್ನು ಮುಖಭಾವಗಳಿಂದ ಹೊರಪಡಿಸರು.

ರಾಮ—ಹಾಗಾದರೆ ನನ್ನನ್ನು ದಡ್ಡನೆಂದು ನೀನು ತಿಳಿದೆಯು ? ನಾನು ಆತನನ್ನೇ ನೋಡುತಿದ್ದೆನು, ಕೊಂಚವಾದರೂ ಅವನ ಮುಖದಲ್ಲಿ ಸಂಶಯವಾಗಲಿ, ವಿಸ್ಮಯವಾಗಲಿ ಕಂಡು ಬರಲಿಲ್ಲ. ಎಷ್ಟೇ ಬುದ್ಧಿವಂತನಾದರೂ ಸ್ವಭಾವಕ್ಕೆ ವಿರುದ್ಧವಾಗಿ ನಡೆವುದಕ್ಕಾದೀತೆ ? ಈ ವಿಷಯದಲ್ಲಿ ನಿನ್ನೊಡನೆ ಚರ್ಚಿಸಿ ಪ್ರಯೋಜನವಿಲ್ಲ. ನಾವಿಬ್ಬರೂ ಕೋಣೆಯೊಳಗೆ ಪ್ರವೇಶಿಸಿದ ಕೂಡಲೇ, ಆತನು ಥಟತ್ತನೆ ಎದ್ದು ನಿಂತದ್ದೇ ಆತನು ಹೆದರಿದನೆಂಬುದಕ್ಕೆ ಸಾಕ್ಷಿದ ನಿದರ್ಶನವಾಗಿದೆ. ಹೀಗಿರುವಲ್ಲಿ ನಮ್ಮ ಗುರುತು ಕಂಡು ಹಿಡಿಯುವ ಮಾತು ಹಾಗಿರಲಿ.

ಜೀಮೂತ—ಹೇಗಾದರೂ ಆಗಲಿ, ಆತನಿಗೆ ನಿನ್ನ ಗುರುತು ಗೊತ್ತಾಗದಿದ್ದರೆ ಸರಿ.

ರಾಮ—ಒಂದು ವೇಳೆ ಆತನಿಗೆ ಗೊತ್ತಾಗಿದ್ದಿದ್ದರ ಬಹ

ಳ ಕಷ್ಟಕ್ಕೀಡಾಗಬೇಕಾಗುತ್ತಿತ್ತು. ಈಗ ಆ ಕಷ್ಟವೆಲ್ಲವೂ ನಿವೃತ್ತಿಯಾದಂತೆಯೆ.

ಜೀಮೂತ—ಅದೇನು ?

ರಾಮು—ನಿನಗೆ ಈ ಸಂಗತಿಗಳಾವುವೂ ಗೊತ್ತಾಗುವುದೇ ಇಲ್ಲ. ಆತನು ಇಲ್ಲಿಗೆ ಬರಲು ಕಾರಣವೇನು ? ನೀನು ಅಲ್ಲಿಗೆ ಹೋಗಿದ್ದಾಗ, ನಿನಗೆ ಹಣ ಬರಬೇಕೆಂದೂ, ನೀನು ವಾಸವಾಗಿರುವ ಮನೆಯು ಇಂತಹ ಕಡೆಯಿರುವುದೆಂದೂ ಹೇಳಿಬಂದಿದ್ದರಿಂದಲ್ಲವೇ ಇತರರು ಇಲ್ಲಿಗೆ ಬರುವುದಕ್ಕೆ ಆಸ್ಪದವಾಯಿತು. ಈಗ ಅದರ ಫಲಾಫಲಗಳನ್ನು ನೀನೇ ನೋಡುವೆ ?

ಜೀಮೂತ—ಏನು, ಪತ್ತೇದಾರನು ಶರಚ್ಚಂದ್ರನ ವಿಷಯದಲ್ಲಿ ನಮ್ಮ ಅಭಿಪ್ರಾಯಗಳನ್ನು ತಿಳಿದುಕೊಳ್ಳಲು ಇಲ್ಲಿಗೆ ಬಂದಿದ್ದನೇ ? ಅಥವಾ ಶರಚ್ಚಂದ್ರನಿಗೆ ಈ ದುಷ್ಕಾರ್ಯದಲ್ಲಿ ಯಾರು ಯಾರು ಹಿಮ್ಮತ್ತಾಗಿರುವರು ಎಂಬುದನ್ನು ತಿಳಿದು ಅವರೆಲ್ಲರನ್ನೂ ದಂಡಿಸುವುದಕ್ಕಾಗಿ ಇಲ್ಲಿಗೆ ಬಂದಿದ್ದನೇ ?

ರಾಮು—ನಿನಗೆ ಈ ರೀತಿಯಾದ ಸಂಶಯು ಹುಟ್ಟಲು ಕಾರಣವೇನು ?

ಜೀಮೂತ—ನನಗೆ ಕಾರಣ ಗೀರಣ ಗೊತ್ತಿಲ್ಲ. ನನ್ನ ಮನದಲ್ಲಿ ಹೀಗೆ ಹೊಳೆಯುವುದು.

ರಾಮು—ನಿನ್ನ ಅನುಮಾನವು ನನಗೆ ಸಂದೇಹವನ್ನುಂಟು ಮಾಡುವುದು.

ಜೀಮೂತ—ನನಗೂ ಸಂದೇಹ, ಭಯ, ಉಂಟಾಗಿರುವುದು.

ರಾಮು—ನಾನು ಪ್ರಮಾಣಮಾಡಿ ಹೇಳುವೆನು. ನಮಗೆ

ಪ್ರಾಣಕ್ಕೆ ಬಂದಿರುವುದು.

ಜೀಮೂತ.—ಹಣೆಯಲ್ಲಿ ಬರೆದಂತೆ ಗಲಿ; ಅದಕ್ಕೆ ಭಯಪಟ್ಟರಾದೀತೆ ?

ರಾಮು—ಶರಚ್ಚಂದ್ರನು ಸಿಕ್ಕದಿದ್ದರೆ ನಮ್ಮನ್ನೇನು ಮಾಡುವರು?

ಜೀಮೂತ—ಹಾಗೆ ಹೇಳುವುದಕ್ಕಾಗುವುದಿಲ್ಲ. ಶರಚ್ಚಂದ್ರನನ್ನು ಹಿಡಿಯುವ ಸಂರಂಭದಲ್ಲಿ ಯಾರು ಯಾರೋ ಸಿಕ್ಕಿ ಬೀಳುವರು. ನಮಗೂ ತಲೆನೋವು ಇಲ್ಲದೇ ಇಲ್ಲ. ರಾಜಾಸನದಲ್ಲಿ ಮೊಕದ್ದಮೆಗಳು ಹೇಗೆ ಹೇಗೋ ತಿರುಗುವುದುಂಟು, ಅದನ್ನು ಕಂಡವರಾರು ? ಕೆಲವು ವೇಳೆಗಳಲ್ಲಿ ಭಯದಿಂದ ನಮ್ಮಿಂದ ನಾವೇ ಸಿಕ್ಕಿಹೋಗುವ ಸಂಭವವೂ ಉಂಟು, ಇದನ್ನು ಯಾರು ಅರಿಯರು ?

ರಾಮು—ಪ್ರಕೃತ ಶರಚ್ಚಂದ್ರನು ಮಧುವನಕ್ಕೆ ಹೋಗುವನೆಂದು ಹೇಳಿ, ಅಲ್ಲಿಗೆ ಹೋಗದಿದ್ದರೆ ತಪ್ಪು ಯಾರಮೇಲೆ ಬೀಳುವುದು ?

ಜೀಮೂತ—ಅವನು ಅಲ್ಲಿಗೆ ಹೋಗದಿದ್ದರೆ, ಗೋಪ್ಯವಾಗಿ ಮಸಲತ್ತು ಮಾಡುತ್ತಿರುವ ನಮ್ಮಗಳ ಮೇಲೆಯೇ!

ರಾಮು—ಈ ಮಾತು ಕೇಳಿದರೇನೇ ಭಯವಾಗುವುದು ಎಂದು ಸುತ್ತಲೂ ನೋಡಿ ಸುಮ್ಮನಾದನು.

ಅರಿಂದಮನಿಗೆ ಮಹಾಕಷ್ಟಕ್ಕಿಟ್ಟಿತು. ಮುಂದೆ ಅವರ ಮಾತುಗಳು ಅವನಿಗೆ ಕೇಳಿಸಲಿಲ್ಲ. ಅವರಿಬ್ಬರೂ ಹಠಾತ್ತಾಗಿ ಸುಮ್ಮನಾದರು. ಅರಿಂದಮನಿಗೆ ತಿಳಿದುಬಂದುದರಲ್ಲಿ, ಜೀಮೂತವಾಹನ, ರಾಮರತ್ನ, ಶರಚ್ಚಂದ್ರ ಈ ಮೂವರು ಅಮರನಾಥನ ಅರ್ಥಾಪಹರಣದಲ್ಲಿ ಒಳಗಾಗಿರಬೇಕು, ಎಂಬುದಾಗಿದ್ದಿತು.

# ಹದಿನೇಳನೆಯ ಅಧ್ಯಾಯ.

---

ಶರಚ್ಚಂದ್ರನು ಮಧುವನಕ್ಕೆ ಹೋಗಿರುವನೋ ಇಲ್ಲವೋ ಎಂಬ ಸಂಗತಿಯನ್ನು ಅರಿಂದಮನು ಇದಕ್ಕೆ ಮೊದಲು ಕೇಳಿರಲಿಲ್ಲ. ಜೀಮೂತ ರಾಮರತ್ನರ ಸಂಭಾಷಣೆಯಿಂದ ಶರಚ್ಚಂದ್ರನು ಮಧುವನಕ್ಕೆ ಹೋಗಿಲ್ಲವೆಂದು ತಿಳಿಯಿತು. ಶರಚ್ಚಂದ್ರನು ನಿಜವಾಗಿಯೂ ಮಧುವನಕ್ಕೆ ಹೋಗಿದ್ದ ಪಕ್ಷದಲ್ಲಿ, ಅವನೇ ಈ ಕಳ್ಳತನದಲ್ಲಿ ಮುಖಂಡನಾಗಿ, ಇವರಿಬ್ಬರೂ ಅವನಿಗೆ ಹಿಮ್ಮೆತ್ತಾಗಿರಬೇಕು. ಅವನು ನಿರ್ದೋಷಿಯಾಗಿರುವನಾದರೆ, ಅವನು ಸುಳ್ಳು ಹೇಳಿ ಹೋಗಲು ಕಾರಣವೇನೂ ಇರುವುದಿಲ್ಲ.

ಅರಿಂದಮನು ಈ ಕಾರ್ಯಭಾರವನ್ನು ವಹಿಸಿದಾಗ,ಅಂತರ್ಯವು ಇಷ್ಟು ದುರ್ಭೇದ್ಯವಾಗಿ ಕಂಡು ಬರಲಿಲ್ಲ. ಈಗಲಾದರೋ ಪದೇ ಪದೇ ಸಂಶಯಕ್ಕೆ ಕಾರಣಗಳು ಹೆಚ್ಚುತಲಿರುವುವು. ಶರಚ್ಚಂದ್ರನು ತಾನು ನಿರ್ದೋಷಿಯಾದರೂ, ದುಷ್ಟರಿಗೆ ಬಳಸಂಬಾಗಿರಬಹುದು. ಇದೇನೂ ಅಸಂಭವವಲ್ಲ. ಏನಾದರೂ ಆಗಲಿ, ಜೀಮೂತ ರಾಮರತ್ನರ ಸಂಭಾಷಣೆಯಿಂದ, ಕಳ್ಳರನ್ನು ಪತ್ತೆಮಾಡಲು ಅನೇಕ ಉಪಾಯಗಳು ದೊರೆದಂತಾದುವು. ಕಳ್ಳರೂ ಬೇಗನೆ ಸಿಕ್ಕಬಹುದೆಂದು ಅರಿಂದಮನಿಗೆ ಭರವಸೆಯುಂಟಾಯಿತು. ಅರಿಂದಮನು ಇಷ್ಟರಲ್ಲಿಯೇ ತೃಪ್ತನಾಗಲು ಇಷ್ಟವುಳ್ಳವನಾಗಲಿಲ್ಲ. ಶರಚ್ಚಂದ್ರನು ನಿರ್ದೋಷಿಯೆಂಬುದನ್ನು ಸಾಧಿಸಬೇಕೆಂಬುದೇ ಅರಿಂದಮನ ಪರಮೋದ್ದೇಶವಾಗಿದ್ದಿತು. ಪ್ರಕೃತ ಸಂಭಾಷಣೆಯನ್ನು ಕೇಳಿದ ಮೇಲೆ, ಶರಚ್ಚಂದ್ರನನ್ನು ತಪ್ಪಿನಿಂದ

ಉದ್ಧಾರವಮಾಡುವುದು ಅಸಾಧ್ಯವೆಂದು ಅರಿಂದಮನಿಗೆ ತೋರಿಬಂದಿತು.

ಅರಿಂದಮನು ಮೇಲ್ಕಂಡ ರೀತಿಯಲ್ಲಿ ಯೋಚಿಸುತ್ತಿರುವಾಗ, ರಾಮರತ್ನನ ಕಂಠಸ್ವರವು ಮತ್ತೆ ಕೇಳಿಸಿತು.

ರಾಮ—ಪತ್ತೇದಾರನು ಇಲ್ಲಿಗೆ ಬಂದ ವೇಳೆಯಲ್ಲಿ, ನಾನು ಇಲ್ಲಿ ಇಲ್ಲದಿದ್ದರೆ ಚೆನ್ನಾಗಿರುತಿತ್ತು.

ಜೀಮೂತ—ಅದೇನು ?

ರಾಮ—ಅನೇಕ ಕಾರಣಗಳಿವೆ.

ಜೀಮೂತ—ಅವೇನು, ನನಗೆ ಹೇಳಬಾರದೆ ?

ರಾಮ—ನಾನು ಇಲ್ಲಿ ಇಲ್ಲದಿದ್ದರೆ, ಅವನ ಸಂದೇಹಕ್ಕೆ ಆಸ್ಪದವೇ ಇರುತ್ತಿರಲಿಲ್ಲ. ಅವನು ಕೇಳುವ ಪ್ರಶ್ನೆಗೆ ನಿನಗೆ ತೋರಿಬಂದ ಉತ್ತರವನ್ನು ಹೇಳಿ ಕಳುಹಿಸಿ ಬಿಡುತಿದ್ದೆ. ಅನಂತರ ನಮ್ಮ ಮೇಲೆ ಯಾವ ಅಪರಾಧವೂ ಬರುತ್ತಿರಲಿಲ್ಲ.

ಜೀಮೂತ—ಹುಚ್ಚಾ ! ನೀನು ಹೆದರುವುದೇತಕೆ ? ಇಂತಹ ಹೊಟ್ಟೆಗೆ ಹಿಟ್ಟಿಲ್ಲದ ಪತ್ತೇದಾರರನ್ನು ನಾನು ಎಷ್ಟೋ ನೋಡಿರುವೆನು.

ರಾಮ—ನೀನೇನೋ ಬುದ್ಧಿವಂತನೇ ಸರಿ. ಈಗ ನಿನಗೂ ನನಗೂ ಇರುವ ಸಂಬಂಧವು ವ್ಯಕ್ತಪಟ್ಟಿತು. ಇದರಿಂದ ನಾನು ಸಿಕ್ಕಿ ಬೀಳುವ ಸಂಭವವುಂಟು.

ಜೀಮೂತ—ನೀನು ಇಲ್ಲಿ ಇದ್ದದ್ದರಿಂದಲೇ ಸಂಬಂಧವು ಗೊತ್ತಾಯಿತೆಂದು ತಿಳಿಯಬೇಡ. ಗೊತ್ತಾಗಬೇಕಾದ ಸಂಬಂಧವು ಯಾವಾಗಲಾದರೂ ಗೊತ್ತಾಗಿಯೇ ಆಗುವುದು.

ರಾಮ—ಹಾಗೆ ಹೇಳಬೇಡ. ಗೊತ್ತಾಗಲು ಕಾರಣ

ವಿರುವುದಿಲ್ಲ. ಮನುಷ್ಯನು ಅಂತರ್ಯಾಮಿಯಾದ ಪರಮಾತ್ಮನಲ್ಲ.

ಜೀಮೂತ—ಪತ್ತೇದಾರರ ವಿಷಯದಲ್ಲಿ ಹಾಗೆ ಎಣಿಸಬೇಡ ಬೇಡದದ್ದು ಬೇಕಾದ್ದು ಎಲ್ಲವೂ ಅವರ ಪತ್ತೆಯಿಂದ ಪ್ರಕಟವಾಗುವುದು. ಮೂರು ಜನದ ಕಿವಿಗೆ ಬಿದ್ದ ವಿಷಯವು ಲೋಕದಲ್ಲಿ ಹರಡುವುದಿಲ್ಲವೆಂದರೇನು ? ಈ ವಿಷಯದಲ್ಲಿ ನೀತಿಶಾಸ್ತ್ರಕಾರರು ಹೇಳಿರುವುದನ್ನು ಕೇಳು. ಶ್ಲೋ॥ ಷಟ್ಕರ್ಣೋಭಿದ್ಯತೇ ಮಂತ್ರಃ । ಚತುಃಕರ್ಣೋನಭಿದ್ಯತೇ ॥ ದ್ವಿಕರ್ಣಸ್ಯಚ ಮಂತ್ರಸ್ಯ । ಬ್ರಹ್ಮಾಪ್ಯಂತಂ ನಗಚ್ಛತಿ ॥ ಇದರ ಅರ್ಥ:—ಆರು ಕಿವಿಗಳಿಗೆ ಬಿದ್ದ ಆಲೋಚನೆಯು ಗುಪ್ತವಾಗಿರುವುದಿಲ್ಲ; ನಾಲ್ಕು ಕಿವಿಗಳಿಗೆ ಬಿದ್ದುದು ಹರಡಲಾರದು; ಎರಡು ಕಿವಿಗಳಿಗೆ ಗೋಚರವಾದ ಮಂತ್ರವನ್ನು ಭೇದಿಸಲು ಬ್ರಹ್ಮನಿಗೂ ಅಸಾಧ್ಯವು.

ರಾಮ—ನಿಜ; ನೀನು ಹೇಳುವುದು ಸುಳ್ಳಲ್ಲ. ಮರ್ಮಭೇದನ ಶಕ್ತಿಯಿಲ್ಲದಿದ್ದರೆ ಪತ್ತೇದಾರರೇ ಆಗಲಾರರು.

ಜೀಮೂತ—ಆದದ್ದು ಆಗಿಹೋಯಿತು. ಈಗ ಅದನ್ನು ತಪ್ಪಿಸಿಕೊಳ್ಳುವುದಕ್ಕೆ ಮಾರ್ಗವೇನು ? ಮುಂದೆ ನಮ್ಮ ಕೆಲಸವೆಲ್ಲವೂ ಗಟ್ಟಿಯಾಗಿರಬೇಕು. ಈಗ ನೀನು ಹೋಗಿ ಪತ್ತೇದಾರನು ಏನು ಮಾಡುತ್ತಿರುವನು, ಯಾವ ವೇಷದಿಂದ ನಮ್ಮಲ್ಲಿ ಸಂಚರಿಸುತ್ತಿರುವನು, ಎಂದು ಮುಂತಾದ ಸಂಗತಿಗಳನ್ನು ತಿಳಿಯುವವನಾಗು. ನೀನು ಅವನನ್ನು ನೋಡಿರುವೆಯಾದ ಕಾರಣ, ನಿನಗೆ ಎಲ್ಲವೂ ಸುಲಭವಾಗಿ ಗೊತ್ತಾಗುವುದು.

ರಾಮ—ಅವನು ನಮ್ಮ ಬೆನ್ನು ಬಿಡುವುದಿಲ್ಲವೆಂದು

ನನಗೆ ನಂಬುಗೆಯುಂಟು.

ಜೀಮೂತ—ಅದರಿಂದ ಅವನ ಪರಿಣಾಮವು ಒಳ್ಳೆಯದಾಗಲಾರದು. ಈ ಮನೆಯಲ್ಲಿ ನಾವು ಅವನನ್ನು ಮತ್ತೆಲ್ಲಿಯಾದರೂ ನೋಡುವುದಾದರೆ, ಅವನ ತಲೆಯು ಚಂಡಾಡಲ್ಪಟ್ಟೀತು.

ರಾಮ—ಅದು ಹೇಗೆ?

ಜೀಮೂತ—ಬಂದೂಕಿಲ್ಲವೆ! ಮಚ್ಚಿಲ್ಲವೆ!

## ಹದಿನೆಂಟನೆಯ ಅಧ್ಯಾಯ.

ಜೀಮೂತನು ಮೇಲೆ ಹೇಳಿರುವಂತೆಯೇ ನಿಶ್ಚಯಮಾಡಿಕೊಂಡು ಪತ್ತೇದಾರನನ್ನು ಕಂಡೊಡನೆಯೇ, ಕೊಲ್ಲಲು ಸಿದ್ಧನಾದನು. ಇದು ಅರಿಂದಮನಿಗೆ ಗೊತ್ತಾಯಿತು. ಗೊತ್ತಾದರೇನು. ಪತ್ತೇದಾರರಿಗೆ ಇದು ಸಹಜವಾದುದೇ. ಇದಕ್ಕಾಗಿ ಅವರು ಹೆದರುವ ಹಾಗಿಲ್ಲ. ಪ್ರಾಣಭಯವಿರತಕ್ಕ ಪತ್ತೇದಾರನು ಪ್ರಸಿದ್ಧಿಗೆ ಎಂದಿಗೂ ಬರಲಾರನು.—ಅದರಲ್ಲಿಯೂ ನಿತ್ಯವೂ ಜೀವನ್ಮರಣವೆಂಬ ನಾಟಕದಲ್ಲಿ ಪ್ರಧಾನವೇಷವನ್ನು ಧಾರಣಮಾಡಿರುವ ಅರಿಂದಮನು ಹೆದರುವಿಕೆಯೆಂಬುದನ್ನು ಎಂದಿಗೂ ಅರಿತವನೇ ಅಲ್ಲ.

ರಾಮರತ್ನನು ಜೀಮೂತನ ಮಾತನ್ನು ಕೇಳಿ—ಅರಿಂದಮನೆಂಬ ಪತ್ತೇದಾರನು ಸಾಧಾರಣ ಮನುಷ್ಯನಲ್ಲ. ಅವನನ್ನು ಹಿಂಬಾಲಿಸುವುದೂ, ಹುಲಿಯ ಬಾಲವನ್ನು ಎಳೆವುದೂ ಎರಡೂ ಒಂದು. ನೀನು ಹೇಗಾದರೂ ಮಾಡಿ ಆತನನ್ನು ಸಂಹಾರಮಾಡಿಬಿಡಬೇಕು, ಎಂದನು.

ಜೀಮೂತ—ಅಹುದು. ಅರಿಂದಮನು ಬದುಕಿರುವ ವರೆಗೂ ನಮಗೆ ಮೇಲೆ ಮೇಲೆ ವಿಪತ್ತಿದ್ದೇ ಇರುವುದು. ಶತ್ರುಶೇಷವು ನಿಲ್ಲುವುದಾದರೆ, ನನ್ನ ಕೆಲಸದಲ್ಲಿ ಮಂಗಳವೇ ಇರುವುದಿಲ್ಲ. ಆತನಿಗೆ ನನ್ನ ಮೇಲೆ ಸಂದೇಹ ತೋರಿ, ಅದು ಕಾರಣಾಂತರದಿಂದ ಸ್ಥಿರಪಡುವುದಾದರಂತೂ, ಆತನು ನನಗೆ ಜಿಗಣೆ ಅಂಟಿದಹಾಗೆ ಅಂಟುವನು. ಈಗಲಾದರೋ, ಅವನು ಅಮರನ ಕಾರ್ಯಭಾರವನ್ನು ವಹಿಸಿರುವನು. ತನ್ನ ಕಾರ್ಯೋದ್ಧಾರಕ್ಕಾದರೂ, ದುಷ್ಟರೆಲ್ಲರನ್ನೂ ಹಿಡಿತರಿಸಿ ಎಲ್ಲರನ್ನೂ ಇಲ್ಲದ ಸಂಕಟಕ್ಕೀಡುಮಾಡುವನು.

ರಾಮು—ಇಷ್ಟೇ ಅಲ್ಲದೆ, ಇನ್ನೇನಾಗುತ್ತದೆಯೋ ಯಾರು ಬಲ್ಲರು?

ಜೀಮೂತ—ಖಂಡಿತವಾಗಿಯೂ, ನಾನವನನ್ನು ಕೊಲ್ಲುವುದೇ ಸರಿ ಅವನು ನನ್ನ ಕಣ್ಣಿಗೆ ಬೀಳುವುದೇ ಬಾಕಿ.

ಈ ಮಾತನ್ನು ಕೇಳಿದ ಅರಿಂದಮನಿಗೆ ಬಹು ಹೊತ್ತು ಅಲ್ಲಿರಲು ಮನ ಬಡಂಬಡಲಿಲ್ಲ. ತಾನು ತಿಳಿಯಬೇಕೆಂದಿದ್ದ ಸಂಗತಿಗಳನ್ನು ಅವನು ತಿಳಿದಿದ್ದಾಯಿತು. ಅಲ್ಲಿಂದ ಮುಂದೆ ನಿರಪಾಯವಾಗಿ ಹೊರಗೆ ಹೊಗಡುವ ಉಪಾಯವನ್ನು ಮಾಡತೊಡಗಿದನು

ಜೀಮೂತನ ಮನೆಯು ಅಂಧಕಾರಮಯ, ಮನೆ ತಟ್ಟಿದ ಮೊದಲು ಯಾವತ್ತೂ ಒಳಗೆ ಸೂರ್ಯ ಚಂದ್ರರ ಪ್ರವೇಶವೆಂಬುದೇ ಇಲ್ಲ. ಗಾಳಿಯು ಮನೆಯೊಳಗೆ ಬರಲು ಹೆದರುತ್ತಿದ್ದಿತು. ಇಂತಹ ಕಾರ್ಗತ್ತಲೆಯುಳ್ಳ ಮನೆಯಿಂದ ಹೇಗೆ ಪಾರಾಗುವುದೆಂದು ಅರಿಂದಮನು ಗೋಡೆಗಳನ್ನು

ತಡವರಿಸುತ್ತಾ ಹೊರಟನು. ಒಂದು ಕಡೆಯಲ್ಲಿ ತಪ್ಪಲೆ ತಂಬಿಗೆ ಕೊಡ ಮುಂತಾದುವು ನೆಲದಮೇಲೆ ಬಿದ್ದಿದ್ದವು. ಅರಿಂದಮನು ಕಣ್ಣು ಕಾಣದೆ ಅವುಗಳನ್ನು ಎಡವಲಾಗಿ ಟಣ್ ಟಣ್ ಟಣಾರ್ ಎಂದು ಶಬ್ದವಾಯಿತು. ಆ ಕೂಡಲೆ ಜೀಮೂತ ರಾಮರತ್ನರು ಗಾಬರಿಬಿದ್ದು ಶಬ್ದ ಬಂದಕಡೆಗೆ ಓಡಿದರು.

ಅರಿಂದಮನಿಗೆ ಯೋಚನೆಗಿಟ್ಟಿತು. ಕೈಯಲ್ಲಿ ಆಯುಧವನ್ನು ಹಿಡಿದುಕೊಂಡು ರಾಕ್ಷಸರಂತೆ ಕದನಮಾಡುವ ಜೀಮೂತರಾಮರತ್ನರೊಡನೆ ಹೋರಾಡಬೇಕೆ? ಇಲ್ಲವೇ, ಪ್ರಕೃತದಲ್ಲಿ ಅಲ್ಲಿಂದ ಪಲಾಯನವಾಗಬೇಕೆ? ಇವೆರಡರಲ್ಲಿ ಯಾವುದು ಸೂಕ್ತವಾದುದು, ಎಂದು ಯೋಚಿಸಿ, ಅರಿಂದಮನು ಕೊನೆಗೆ ಪಲಾಯನವಾಗುವುದೇ ಲೇಸೆಂದು ತಿಳಿದು, ತಾನು ಯಾವ ದಾರಿಯಿಂದ ಬಂದನೋ ಅದೇ ದಾರಿಯನ್ನು ಹುಡುಕಿ ಅಲ್ಲಿಂದ ಹೊರಟನು. ಅವನ ಹಿಂದೆಹಿಂದೆಯೇ ಅವನ ಶತ್ರುಗಳೂ ಬರುತ್ತಿದ್ದುದನ್ನು ತಿಳಿದು, ಪ್ರತ್ಯುತ್ಪನ್ನ ಮತಿಯಾದ ಅರಿಂದಮನು ಬೇಗ ಬೇಗ ಓಡಿಬಂದು ದಾರಿಯಲ್ಲಿ ಸಿಕ್ಕಿದ ಒಂದು ಬಾಗಿಲನ್ನು ಬಲವಾಗಿ ತಳ್ಳಿ ಅಗಳಿಯನ್ನು ಹಾಕಿದನು. ಜೀಮೂತರಾಮರತ್ನರು ಆ ಕೂಡಲೆ ಓಡಿಬಂದು ಬಾಗಿಲನ್ನು ಕಾಲುಗಳಿಂದ ಬಲವಾಗಿ ಒದೆಯಲಾರಂಭಿಸಿದರು. ಅರಿಂದಮನು ಕೊಂಚ ಅವಕಾಶ ಸಿಕ್ಕಿದ್ದನ್ನು ಹಾಳುಮಾಡಿಕೊಳ್ಳದೆ ಮುಂದೆ ಮುಂದೆ ಓಡಿ ಕ್ಷಣಮಾತ್ರದಲ್ಲಿಯೇ ಮೂರನೆಯ ಮಹಡಿಯಿಂದ ಎರಡನೆಯ ಮಹಡಿಗೆ ಇಳಿದನು. ಅವನು ಕೆಳಗಿಳಿದು ನೋಡಲಾಗಿ, ಅಲ್ಲಿ ಮಾರ್ವಾಡಿ ಹೆಂಗಸು ಮೊದಲಿನಂತೆ ನಿಂತಿದ್ದಳು. ಅವಳನ್ನು ನೋಡಿದ ಕೂಡಲೆ, ಅರಿಂದಮನು-ದಾಸಿ ನನ್ನನ್ನು ಬೇಗನೆ ಮನೆಯಿಂ

ದ ಹೊರಗೆ ಕರೆದುಕೊಂಡುಹೋಗು, ಎನಲಾಗಿ, ಆ ಹೆಂಗಸು (ವಿಸ್ಮಿತಳಾಗಿ) ಈ ಕಡೆಯಿಂದ ಕೆಳಗಿಳಿದು ಹೋಗಲಾಗುವುದಿಲ್ಲ, ಎಂದು ಹೇಳಿದಳು.

ಅರಿಂದಮ—ಅದೇನು?

ಹೆಂಗಸು—ಕಾರಣವೇ?

ಮುಂದೆ ಅವಳ ಬಾಯಿಂದ ಮಾತು ಹೊರಡದಿರುವುದನ್ನು ನೋಡಿ, ಅರಿಂದಮನು-ರಂಡೆ ! ಒಳ್ಳೆಯ ಮಾತಿನಿಂದ ಹೇಳುವೆಯೋ ಇಲ್ಲವೋ? ಇಲ್ಲವಾದರೆ ತಿಕಡಿಕೆ ಕಟ್ಟಿಸಿ ಹೊಡೆಯಿಸುವೆನು, ಎಂದುದನ್ನು ಕೇಳಿ ಹೆಂಗಸು-ಸ್ವಾಮಿ, ನನ್ನನ್ನು ಏತಕ್ಕೆ ಬೈಯುತ್ತೀರಿ? ನನ್ನದೇನು ತಪ್ಪಿರುವುದು? ಮನೆಯ ತಲೆಬಾಗಿಲು ಬಂದಾಗಿರುವುದು, ಎಂದಳು.

ಅರಿಂ—ಬೀಗದಕ್ಕೈ ಯಾರಲ್ಲಿರುವುದು?

ಹೆಂಗಸು—ಯಜಮಾನಿಯ ಹತ್ತಿರ.

ಅರಿಂ—ಇನ್ನು ಯಜಮಾನಿಯಾರು? ಯಾರಾದರೂ ಆಗಲಿ, ಬೇಗ ಹೋಗಿ ಬೀಗದಕ್ಕೈಯನ್ನು ತೆಗೆದುಕೊಂಡು ಬಾ. ಹೊತ್ತಾಗುವುದಾದರೆ ತೊಂದರೆಯುಂಟು.

ಅರಿಂದಮನು ಹೀಗೆ ಹೇಳುತ್ತಿರುವಾಗ, ಹಿಂದಿನ ಬಾಗಿಲೊಂದು ಒಡೆದುಬಿದ್ದ ಶಬ್ದವಾಯಿತು, 'ಜೀಮೂತನು ಅಟ್ಟಿಸಿಕೊಂಡುಬರಲು ಸಾವಕಾಶವಿಲ್ಲ; ಜೀಮೂತನು ಹಸಿವುಳ್ಳ ವ್ಯಾಘ್ರದಂತೆ ಓಡಿಬಂದು ತನ್ನನ್ನು ನುಂಗಿಬಿಡುವನು' ಎಂದು ಅರಿಂದಮನು ತಿಳಿದು ತನ್ನ ಜೇಬಿನಲ್ಲಿದ್ದ ಪಿಸ್ತೂಲನ್ನು ಹೊರಗೆ ತೆಗೆದು ಹೆಂಗಸಿನ ಮೂಗಿನ ನೇರಕ್ಕೆ ಹಿಡಿದು-ಪಾಳಾದವಳೇ ! ಬೇಗ ದಾರಿಯನ್ನು ತೋರಿಸು; ಇಲ್ಲವಾದರೆ ನಿನ್ನನ್ನು ಸುಟ್ಟುಬಿಡುವೆನು, ಎಂದುದನ್ನು ಕೇಳಿ ಹೆಂಗಸು

ಅರಿಂದಮನನ್ನು ಹಿಂದೆ ಹಿಂದೆಯೇ ಬರುವಂತೆ ಹೇಳಿ ತಾನು ಮುಂದಾದಳು. ಅರಿಂದಮನು ಏನೊಂದನೂ ಮಾತನಾಡದೆ, ಅವಳನ್ನು ಹಿಂಬಾಲಿಸಿಯೇ ಹೊರಟನು. ಮೆಲ್ಲಗೆ ಹೋಗುತ್ತಿದ್ದ ಹೆಂಗಸು ಓಡಲಾರಂಭಿಸಿದ್ದನ್ನು ನೋಡಿ, ಅರಿಂದಮನೂ ದಾರಿಯಲ್ಲಿ ಏನಿರುವುದೆಂಬುದನ್ನೂ ಲಕ್ಷಿಸದೆ ಓಡತೊಡಗಿದನು; ಆದರೆ ಅವನ ಮನದಲ್ಲಿ ದಾರುಣವಾದ ಸಂಶಯವು ಪದಾರ್ಪಣ ಮಾಡಿತು.

---

## ಹತ್ತೊಂಬತ್ತನೆಯ ಅಧ್ಯಾಯ.

ಅರಿಂದಮನು ಆ ಹೆಂಗಸಿನ ಹಿಂದೆಯೇ ಓಡುತ್ತಾ ಸುಟ್ಟ ಮೋರೆಯವಳೆ ! ನನ್ನನ್ನು ಎಲ್ಲಿಗೆ ಕರೆದೊಯ್ಯುವೆ? ಜೋಕೆ. ನನ್ನನ್ನು ತೊಂದರೆಗೆ ಸಿಲ್ಕಿಸುವೆಯಾದರೆ, ನಿನ್ನನ್ನು ನಾನು ಧ್ವಂಸಮಾಡಿಬಿಡುವೆನು, ಎಂದನು.

ಹೆಂಗಸು—ನಾನು ನಿಮಗೆ ಮೋಸಮಾಡುವುದಿಲ್ಲ ಈ ಕಡೆ ತಾವು ಹೊರಟರೆ, ತಮಗೆ ಬೇಗ ದಾರಿಸಿಕ್ಕುವುದು. ಈಗ ನಾನು ತಮ್ಮನ್ನು ಮನೆಯಿಂದ ಹೊರಗೆ ಕರೆದುಕೊಂಡು ಬಂದಿರುವೆನು. ಹಿತ್ತಲ ಬಾಗಿಲು ತೆರದ ಕೂಡಲೆ, ನೀವು ನಿರಪಾಯವಾಗಿ ಹೊರಗೆ ಹೋಗಬಹುದು. ಒಂದು ವೇಳೆ ಹಿತ್ತಲ ಬಾಗಿಲೂ ಬಂದಾಗಿದ್ದರೆ ನನ್ನ ಯತ್ನವಿಲ್ಲ.

ಅರಿಂ—ಈ ಮನೆಯಿಂದ ಹೊರಗೆ ಹೋಗಲು ಮತ್ತಾವ ದಾರಿಯೂ ಇಲ್ಲವೋ ?

ಹೆಂಗಸು—ಇಲ್ಲ; ಈ ಕಡೆ ಮತ್ತಾವ ದಾರಿಯೂ ಇಲ್ಲ.

ಅರಿಂದಮನು ಮತ್ತೆ ಪ್ರಶ್ನೆಮಾಡಲಿಲ್ಲ. ಏತಕೆಂದರೆ-ಪ್ರಶ್ನೆಮಾಡಲು ಕಾಲವಿರಲಿಲ್ಲ. ಹೆಂಗಸು ಕೊಂಚದೂರ ಹೋಗಿ ಹಿತ್ತಲ ಬಾಗಿಲನ್ನು ನೋಡಿ-(ಕಂಪಿತವಾದ ಸ್ವರ ದಿಂದ) ಸ್ವಾಮಿ, ಈ ಬಾಗಿಲೂ ಹಾಕಿದೆ. ತೆರೆಯಲಾಗು ವುದಿಲ್ಲ. ಈಗ ನಾನೇನು ಮಾಡಲಿ? ತಮ್ಮನ್ನು ನಾನೆಲ್ಲಿಗೆ ಕರೆದುಕೊಂಡು ಹೋಗಲಿ. ಕೆಲಸವು ಬಹಳ ತೊಂದರೆ ಗಿಟ್ಟಿತು, ಎಂದಳು.

ಅರಿಂದಮ—ಬಾಗಿಲು ಬಂದಾದ ಮಾತ್ರಕ್ಕೆ ಮನೆ ಯಿಂದ ಹೊರಗೆ ಹೋಗಲು ಆಗಲಾರದೆ?

ಹೆಂಗಸು—(ಉತ್ತರವಿಲ್ಲ)

ಅರಿಂದಮನು ಖಿನ್ನನಾಗಿ ಬಾಗಿಲನ್ನು ಒದೆದು ನೋ ಡಿದನು. ಬಾಗಲಿಗೆ ಹೊರಗಡೆಯಿಂದ ಚಿಲುಕ ಹಾಕಿದ್ದಿತು. ಅರಿಂದಮನು ದಿಕ್ಕು ತೋರದೆ ರೋಷಪರವಶನಾಗಿ ಕಣ್ಣು ಗಳಿಂದ ಕೆಂಡಗಳನ್ನೇ ಸುರಿಸುತ್ತಾ ಹೆಂಗಸನ್ನು ಕುರಿತು-ಹೊರಗೆ ಹೋಗಲು ನಿನಗೆ ದಾರಿ ಗೊತ್ತಿದ್ದರೂ, ನನಗೆ ನೀನು ತೋರಿಸಲೊಲ್ಲೆ. ನನ್ನನ್ನು ಸಂಕಟಕ್ಕೆ ಈಡುಮಾ ಡಬೇಕೆಂದು ನಿನ್ನ ಅಭಿಪ್ರಾಯವಿರುವ ಹಾಗೆ ತೋರುತ್ತದೆ. ಈ ಸಮಯದಲ್ಲಿ ನೀನು ನನಗೆ ಸರಿಯಾದ ದಾರಿಯನ್ನು ತೋರಿಸು, ಅದರಿಂದ ನಿನಗೆ ಪ್ರಯೋಜನವುಂಟು, ಎಂದು ನುಡಿದನು.

ಹೆಂಗಸು—ಖಂಡಿತವಾಗಿಯೂ ನನಗೆ ಗೊತ್ತಿಲ್ಲ ಯಾವ ದಿನವೂ ಈ ಬಾಗಿಲಿಗೆ ಹೊರಗಿನಿಂದ ಚಿಲುಕ ಹಾಕಿ ದ್ದಿಲ್ಲ. ಈ ದಿನ ಮಾತ್ರ ಬಾಗಿಲು ಬಂದಾದದ್ದು ನೋಡಿದರೆ ನನಗೇ ಆಶ್ಚರ್ಯವಾಗುವುದು.

ಅರಿಂ—ನನ್ನನ್ನು ಬೇರೊಂದು ಕಡೆಯಿಂದಲಾದರೂ ಪಾರಗಾಣಿಸು. ವೃಥಾ ಕಾಲಹರಣದಿಂದ ತೊಂದರೆ ಕೊಡಬೇಡ.

ಹೆಂಗಸು—ಗೊತ್ತಾಯಿತು, ಗೊತ್ತಾಯಿತು, ಹೊರಗೆ ಹೋಗಲು ಬೇರೊಂದು ದಾರಿಯಿರುವುದು ಜ್ಞಾಪಕಕ್ಕೆ ಬಂದಿತು.

ಅರಿಂ—ಇಲ್ಲಿನವರೆಗೂ ಪಿಶಾಚಿಯಂತೆ ಅದೇಕೆ ಸುಮ್ಮನಿದ್ದೆ ? ಬೇರೆಯ ಸ್ಥಳವಿದ್ದರೆ ನನ್ನನ್ನು ಬೇಗನೆ ಅಲ್ಲಿಗೆ ಕರೆದುಕೊಂಡು ಹೊರಡು.

ಹೆಂಗಸು—ಅಲ್ಲಿ ಬಾಗಿಲು ಗೀಗಲು ಏನೂ ಇಲ್ಲ.

ಅರಿಂ—ಅಲ್ಲೇನಿದೆ ಬೇಗ ಹೇಳು ?

ಹೆಂಗಸು—ಅಲ್ಲೊಂದು ಕಿಟಕಿ ಮಾತ್ರವಿರುವುದು.

ಅರಿಂ—ಇಲ್ಲಿಯೂ ಎರಡು ಕಿಟಕಿಗಳಿವೆಯಲ್ಲ. ಅಲ್ಲೇತಕೆ ಹೋಗಬೇಕು ?

ಹೆಂಗಸು—ಇಲ್ಲಿನ ಕಿಟಕಿಗಳಿಗೆ ದಪ್ಪವಾದ ಕಬ್ಬಿಣದ ಸಲಾಕೆಗಳಿವೆ.

ಅರಿಂ—ಹಾಗಾದರೆ ಅಲ್ಲಿಗೆ ಹೋಗೋಣ ನಡೆ.

ಹೆಂಗಸು—ಬರೋಣಾಗಲಿ.

ಎಂದು ಹೆಂಗಸು ಮುಂದಾಗಲು, ಅರಿಂದಮನು ಅವಳನ್ನು ಹಿಂಬಾಲಿಸಿದನು. ಸ್ವಲ್ಪಹೊತ್ತು ಹೆಂಗಸು ಮುಂದೆ ನಡೆದು ಒಂದು ಸ್ಥಳದಲ್ಲಿ ನಿಂತು ಅಲ್ಲಿದ್ದ ಕಿಟಕಿಯ ಬಾಗಿಲನ್ನು ತೆರೆದು-ಸ್ವಾಮಿ, ತಾವು ಇಲ್ಲಿಂದ ಕೆಳಗೆ ಇಳೀ ಬೀಳಬಹುದು, ಎನಲಾಗಿ ಅರಿಂದಮನು—ಎಲೆ ! ಎಲ್ಲವೂ ಕಾಗತ್ತಲೆಯಾಗಿರುವುದು. ನಾನು ಇಲ್ಲಿಳಿದು ಎಲ್ಲಿಗೆ ಹೋ

ಗಬೇಕು ? ಎಂದು ಪ್ರಶ್ನೆಮಾಡಿದನು.

ಆದಕ್ಕೆ ಹೆಂಗಸು ಏನೊಂದುತ್ತರವನ್ನೂ ಹೇಳಲಿಲ್ಲ. ಆಕೆಯಿಂದ ಉತ್ತರವನ್ನು ನಿರೀಕ್ಷಣೆ ಮಾಡುವುದಕ್ಕೆ ಕಾಲವೂ ಇರಲಿಲ್ಲ. ಆ ಹೆಂಗಸು ಅರಿಂದಮನಿಗೆ ಆ ಸ್ಥಳವನ್ನು ತೋರಿಸಿ ಬಿಟ್ಟು ಹಿಂದಕ್ಕೆ ಸರಿದಳು. ಅರಿಂದಮನು ಆಕೆಯು ಹೊರಟು ಹೋದುದನ್ನು ನೋಡಿ ಗಟ್ಟಿಯಾಗಿ— ಎಲೆ! ನೀನು ಎಲ್ಲಿಗೆ ಹೋದೆ ? ಎಂದು ಕೂಗಿದನು.

ಅವನ ಪ್ರಶ್ನೆಗೆ ಯಾರೂ ಉತ್ತರ ಕೊಡಲಿಲ್ಲ. ಆಗ ಅರಿಂದಮನು ತಿಳಿದಿದ್ದೇನೆಂದರೆ:—

'ಆ ಮಾಯಾವಿನಿ ಹೆಂಗಸು ತಾನು ವಿಪತ್ತಿನಿಂದ ಉದ್ಧಾರವಾಗಲೋಸುಗ ನನ್ನನ್ನು ಮಹಡಿಯ ಮೇಲೆ ಕರೆದುಕೊಂಡು ಹೋದಳು. ಬಳಿಕ ತಾನು ಕೆಳಗೆ ಇಳಿದು ಬಂದು, ನಾನು ತಪ್ಪಿಸಿಕೊಂಡು ಹೊರಗೆ ಹೋಗದ ಹಾಗೆ ಬಾಗಿಲುಗಳೆಲ್ಲವನ್ನೂ ಬಂಧಿಸಿಬಿಟ್ಟು ಮತ್ತೆ ತನ್ನ ಸ್ಥಳದಲ್ಲಿ ಬಂದು ನಿಂತಳು. ನನ್ನನ್ನು ವಿಪತ್ತಿನಲ್ಲಿ ಕೆಡಹಬೇಕೆಂಬುದೇ ಅವಳ ಉದ್ದೇಶ. ಈಗ ಅವಳ ಉದ್ದೇಶವು ವಿಫಲವಾಗಲಿಲ್ಲ. ಮೋಸಗಾತಿಯ ಮೋಸಕ್ಕೆ ಒಳಗಾಗಿ ತೀಕ್ಷ್ಣಬುದ್ಧಿಯುಳ್ಳ ಪ್ರಸಿದ್ಧನಾದ ಅರಿಂದಮನೆಂದು ಹೆಸರ್ಗೊಂಡ ನಾನು ಈಗ ಖಂಡಿತವಾಗಿಯೂ ಬಂದಿಯಾದೆನು.

---

## ಇಪ್ಪತ್ತನೆಯ ಅಧ್ಯಾಯ.

ನಾವು ಬಹಳ ಹೊತ್ತಿನಿಂದ ಅಮರನಾಥನ ವಿಷಯವನ್ನು ಕುರಿತು ಏನೊಂದನ್ನೂ ತಿಳಿಸಲಿಲ್ಲ. ಪಾಠಕ ಮಹಾಶ

ಯುರು ತಮ್ಮ ತಮ್ಮ ಮನದಲ್ಲಿ ಏನೆಂದುಕೊಳ್ಳುವರೋ ಒಂದು ವಿಷಯವನ್ನು ಹೇಳುವಾಗ ಮತ್ತೊಂದನ್ನು ಬಿಟ್ಟುಬಿಡುವುದೂ, ಮತ್ತೊಂದನ್ನು ಹೇಳುವ ವ್ಯಾಜದಿಂದ ಪ್ರಕೃತವನ್ನು ದೂರ ಮಾಡುವುದೂ ಗ್ರಂಥಕರ್ತರ ಸಾಮಾನ್ಯವಾದ ಸ್ವಭಾವವಾದುದರಿಂದ, ಈ ದೊಡ್ಡ ತಪ್ಪನ್ನು ದಯವಿಟ್ಟು ಎಲ್ಲರೂ ಕ್ಷಮಿಸುವರೆಂದು ನಂಬಿ ಪ್ರಕೃತ ಕಥಾಧಾರನಾದ ಅಮರನಾಥನ ವಿಷಯವೇನಾಗಿರುವುದೆಂಬುದನ್ನು ಇಲ್ಲಿ ವಿವರಿಸುವೆವು. ಹಾಗೆ ವಿವರಿಸದಿದ್ದರೆ ಗ್ರಂಥದ ಸಾಮರಸ್ಯವು ಛಿನ್ನ ವಿಚ್ಛಿನ್ನವಾಗಿ ಹೋಗುವುದು.

ಶರಚ್ಚಂದ್ರನ ಅಣ್ಣನ ಹೆಸರಿನಲ್ಲಿ ಮಧುವನದಿಂದ ಬಂದ ತಂತಿಯವರ್ತಮಾನವು ಅಮರನಕೈ ಸೇರಿದಾಗಿನಿಂದಲೂ, ಶರಚ್ಚಂದ್ರನಲ್ಲಿದ್ದ ಆತನ ಪೂರ್ಣವಿಶ್ವಾಸವು ಕೃಷ್ಣಪಕ್ಷದ ಚಂದ್ರನಂತೆ ಕ್ಷಣೇ ಕ್ಷಣೇ ಕ್ಷೀಣವಾಗುತ್ತ ಬಂದಿತು. ಮನುಷ್ಯಮಾತ್ರದವನಿಗೆ ಹೀಗಾಗುವುದು ಆಶ್ಚರ್ಯವಲ್ಲ. ಅಮರನು ತಂತಿಯವರ್ತಮಾನವನ್ನು ಕೈಯಲ್ಲಿ ಹಿಡಿದುಕೊಂಡು ಯೋಚಿಸಿದ್ದೇನೆಂದರೆ:—ಶರಚ್ಚಂದ್ರನು ನನ್ನಲ್ಲಿ ಸುಳ್ಳು ಹೇಳಿ ಹೊರಟುಹೋದನು. ಇದರಲ್ಲಿ ಕಿಂಚಿತ್ತೂ ಸಂಶಯವಿಲ್ಲ. ಆವನ ಅಣ್ಣನಿಂದ ಅವನಿಗಾವ ಟೆಲಿಗ್ರಾಮೂ ಬರಲಿಲ್ಲ. ಈ ಅರ್ಥವು ಈ ತಂತಿಯವರ್ತಮಾನದಿಂದಲೇ ಗೊತ್ತಾಗುವುದು. ಕದ್ದು ಓಡಿಹೋಗತಕ್ಕವನು, ತನ್ನ ಅಣ್ಣನ ಪರಿಚಯ, ಊರು ಮುಂತಾದ್ದನ್ನು ತಿಳಿಸಿಹೋಗಲು ಕಾರಣವೇನಿರುವುದು. ಇದಲ್ಲದೇ ಹಣವನ್ನು ಅಪಹರಿಸಿಕೊಂಡು ಹೋಗತಕ್ಕವನು ಸಂಶಯಕ್ಕೆ ಆಸ್ಪದವಿಲ್ಲದಂತೆ ಲೆಕ್ಕ ಬರದು ಪಲಾಯನವಾಗುವನೇ? ಮತ್ತು ಅನೇಕ ವರ್ಷಗಳಿಂದ ಕೇವಲ

ವಿಶ್ವಾಸಕ್ಕೆ ಪಾತ್ರನಾದವನು ತನ್ನ ಯಜಮಾನನಿಗೆ ಸರ್ವನಾಶವನ್ನುಂಟುಮಾಡಲು ಯತ್ನ ಮಾಡಬಲ್ಲನೇ? ಮನಸ್ಸು ತಾನೇ ಒಪ್ಪುವುದುಹೇಗೆ? ಬಹು ಮಾತಿನಿಂದೇನು? ಶರಚ್ಚಂದ್ರನು ಉಂಡಮನೆಗೆ ಎರಡುಬಗೆದು ಓಡಿಹೋದನು. ನನಗಾದರೋ ಸರ್ವನಾಶವಾಯಿತು. ಪೂರ್ಣವಿಶ್ವಾಸಕ್ಕೆ ಪೂರ್ಣಫಲವನ್ನೂ ನಾನು ಹೊಂದಿದೆನು.

ಅಮರನು ಈ ರೀತಿಯಾಗಿ ಯೋಚಿಸಿ ತನ್ನ ಕೈಯಲ್ಲಿದ್ದ ಕಾಗದವನ್ನು ತನ್ನ ಕೈ ಪೆಟ್ಟಿಗೆಯಲ್ಲಿಟ್ಟು, ಗಡಿಯಾರವನ್ನು ನೋಡಿದನು. ಗಂಟೆಯು ಐದು ಹೊಡೆದುಹೋಗಿದ್ದಿತು. ಎಷ್ಟು ಹೊತ್ತಾದರೂ ಯಾವ ಯೋಚನೆಯೂ ಬಗೆ ಹರಿಯದೇ ಹೋದ್ದರಿಂದ ಕಾಗದ ಪತ್ರಗಳೆಲ್ಲವನ್ನೂ ಬಂದೋಬಸ್ತು ಮಾಡಿ, ಅಮರನು ಮನೆಯೊಳಗೆ ಹೊರಟುಹೋದನು. ಯೋಚನೆಯಿಂದ ಶರೀರದಲ್ಲಿ ಉಷ್ಣವು ಅಧಿಕವಾಗಿ ವಿಶ್ರಾಂತಿಯನ್ನು ಹೊಂದಲು ಮಲಗುವ ಮನೆಗೆ ಹೋಗಿ ತನ್ನ ಹಾಸಿಗೆಯಮೇಲೆ ಮಲಗಿದನು. ಅಷ್ಟು ಹೊತ್ತಿಗೆ ಸರಿಯಾಗಿ ಅಮರನ ಮಗಳು ಅಲ್ಲಿಗೆ ಬಂದು—ಅಪ್ಪ, ನಿನ್ನ ಮುಖವು ಬಾಡಿರುವುದು; ನಿನ್ನ ಶರೀರವು ಸ್ವಸ್ಥವಾಗಿಲ್ಲವೆಂದು ತೋರುವುದು. ಅಕಸ್ಮಾತ್ತಾಗಿ ಹೀಗಾಗಲು ಕಾರಣವೇನು? ಎಂದು ಕೇಳಲಾಗಿ, ತಂದೆಯು—ಮಗು, ನಾನು ಅಪಾರವಾದ ಚಿಂತಾಸಾಗರದಲ್ಲಿ ಮುಳುಗಿರುವೆನು. ಆದುದರಿಂದ ನನ್ನ ಶರೀರದಲ್ಲಿ ಸಂತಾಪವು ಅಧಿಕವಾಗಿರುವುದು, ಎಂದು ಉತ್ತರವಿತ್ತನು.

ಮಗಳು—ಚಿಂತೆಗೆ ಕಾರಣವೇನು?

ತಂದೆ—ಅನೇಕ ಕಾರಣಗಳವೆಯಮ್ಮ.

ಮಗಳು—ಅಪ್ಪ, ನನಗೆ ಹೇಳು, ಕಾರಣವೇನು?

ತಂದೆ—ಮಗು, ಅದನ್ನು ಕಟ್ಟಿಕೊಂಡು ನೀನೇನು ಮಾಡುವೆ?

ಮಗಳು—ಅಪ್ಪ, ನಿನಗೆ ವ್ಯಸನವುಂಟಾದರೆ, ಅದು ನನಗೂ ಅಲ್ಲವೆ? ನಿನ್ನ ವ್ಯಸನಕ್ಕೆ ನಾನು ಭಾಗಿನಿಯಲ್ಲವೆಂದರೆ, ನಾನು ಜನ್ಮವನ್ನು ಧಾರಣಮಾಡಿ ಪ್ರಯೋಜನವೇನು?

ತಂದೆ—ನನ್ನ ವ್ಯಸನವಾದರೋ ಅಪರಿಮಿತವಾದುದು.

ಮಗಳು— ನಿನ್ನ ವ್ಯಾಪಾರದಲ್ಲಿ ಗಂಟೇನಾದರೂ ಬಿಳಕ್ಕೆ ಬಂದಿತೇ?

ತಂದೆ—ಹೌದಮ್ಮ ಹೌದು; ನನಗೆ ಬಹಳ ನಷ್ಟ.

ಈ ಮಾತನ್ನು ಕೇಳಿ ಮನಕರಗಿದ ಮಗಳು ಈ ರೀತಿಯಾಗಿ ಹೇಳತೊಡಗಿದಳು:—

ತಂದೆಯೆ! ಇದಕ್ಕಾಗಿ ಇಷ್ಟು ವ್ಯಸನಪಡುವುದೆ? ಐಶ್ವರ್ಯ ದಾರಿದ್ರ್ಯಗಳು ಎಂದಿಗೂ ನಂಬತಕ್ಕವುಗಳಲ್ಲ. ಇಂದು ಲಕ್ಷಾಧೀಶನು ನಾಳೆಯು ನ ಭಿಕ್ಷುಕನಾಗಬಹುದು; ಭಿಕ್ಷುಕನು ಎಂದಾದರೊಂದುದಿನ ಲಕ್ಷಾಧೀಶನಾಗಬಹುದು. ವಿಧಿಯ ನಿಯಮವ ಅರಿತವರಾರು? ಲಕ್ಷ್ಮಿಯು ಚಂಚಲಳೆಂದು ಅನೇಕರು ನುಡಿವರು. ಅವಳು ಬಂದು ಮನೆಯಲ್ಲಿ ಎರಡು ದಿನ ಪೂರ್ಣವಾಗಿರುವುದಿಲ್ಲ. ಲಕ್ಷ್ಮಿಯು ಬಂದುಕ್ಷಣ ಸೂಳೆಯಂತೆ ತುಂಬ ವಿಶ್ವಾಸವನ್ನು ತೋರಿಸಿ, ಮತ್ತೊಂದುಕ್ಷಣ ಹೊಸಬಳಂತೆ ಕಾಣಿಸಿಕೊಳ್ಳುವಳು. ಹಣ ಬರುವುದೂ ಹೋಗುವುದೂ ಅದೃಷ್ಟದ ವಿಷಯ. ಅದೃಷ್ಟವು ಕಡಿಮೆಯಾಗುವುದಾದರೆ, ಕೂಡಿಟ್ಟ ಹಣವೂ ಅಲ್ಲಿಯೇ ಮಾಯವಾಗುವುದು. ಕಳೆದುಹೋದದ್ದು ಮತ್ತೆ ಬರುವ ಯೋಗವಿದ್ದ

ರೆ, ನಮಗೆ ಗೋಚರವಿಲ್ಲದೆಯೇ ಬಂದುಬಿಡುತ್ತದು, ಅದ ಕ್ಕಾಗಿ ನಾವು ಚಿಂತಿಸಿ ಫಲವಿಲ್ಲ.

---

## ಇಪ್ಪತ್ತೊಂದನೆಯ ಅಧ್ಯಾಯ

ಅಮರನಾಥನು ತನ್ನ ಮಗಳ ಬಾಯಿಯಿಂದ ಈ ರೀತಿಯಾದ ಸಾರಗರ್ಭಿತವಾದ ಮಾತನ್ನು ಕೇಳಿ ಬಹಳ ಸಂತೋಷಪ ಟ್ಟನು. ಅಮರನು ತನ್ನ ಮಗಳಿಗೆ ಸಂಸ್ಕೃತ, ಇಂಗ್ಲೀಷು, ಮುಂತಾದ ಭಾಷೆಗಳಲ್ಲಿ ಗುರುಗಳಿಂದ ವಿಶೇಷ ಪರಿಚಯವ ನ್ನುಂಟುಮಾಡಿಸಿದ್ದನು. ಅಮರನು ತನ್ನ ಮಗಳಾಡಿದ ಮಾತನ್ನು ಕೇಳಿ ಅಚ್ಚರಿಗೊಳ್ಳದೆ, ಮಗು, ನಿನ್ನ ಹೃದ ಯವು ಉದಾರವಾದುದು. ನಿನ್ನನ್ನು ಈ ರೀತಿಯಾಗಿ ಬುದ್ಧಿ ವಂತಳನ್ನಾಗಿ ಮಾಡಲೋಸುಗ ಬಹು ದ್ರವ್ಯವನ್ನು ಖರ್ಚು ಮಾಡಿರುವೆನು. ನಿನಗಾಗಿ ಉಪಯೋಗಿಸಿದ ಹಣವು ನಿಷ್ಫ ಲವಾಗಲಿಲ್ಲ. ಕಷ್ಟಕಾಲದಲ್ಲಿ ನಿನಗಿರುವ ಸಹನೆಯು ಅಪರಿ ಮಿತವಾದುದು. ಮಗು, ಕೇಳು. ಒಂದು ಲಕ್ಷವಲ್ಲ-ಹತ್ತು ಲಕ್ಷ ರೂಪಾಯಿಗಳು ನಷ್ಟವಾಗಿದ್ದರೂ ನಾನು ವ್ಯಸನಪ ಡಲಾರೆ, ಆದರೆ ಮತ್ತೊಂದು ಸಂಗತಿಯು ನಡೆದಿರುವುದು. ಅದನ್ನು ಕೇಳಿದರೆ, ನಿನಗೂ ಇಲ್ಲದ ವ್ಯಸನವುಂಟಾಗುವುದು, ಎನಲಾಗಿ ಮಗಳು—ಅಪ್ಪ, ನಾನು ಹೆದರತಕ್ಕವಳಲ್ಲ. ನಡೆ ದಿರುವುದನ್ನು ನೀನು ಹೇಳು, ಎಂದು ನುಡಿದಳು. ಅಮರನು ಕೊಂಚ ಹೊತ್ತು ಯೋಚಿಸಿ—ಅಮ್ಮ! ನಿನ್ನೆಯ ರಾತ್ರಿಯೋ ಅಥವಾ ಈವತ್ತಿನ ಬೆಳಗಿನ ಜಾವದಲ್ಲಿಯೋ ನನ್ನ ಕಬ್ಬಿಣದ ಪೆಟ್ಟಿಗೆಯಿಂದ ಯಾರೋ ಒಂದು ಲಕ್ಷ ರೂಪಾಯಿಗಳನ್ನು ಕಳವು ಮಾಡಿಕೊಂಡು ಓಡಿ ಹೋಗಿರುವರು, ಎಂದನು.

ಮಗಳು—ಒಂದೇ ಗಂಟಿನಲ್ಲಿ ಒಂದು ಲಕ್ಷ ರೂಪಾಯಿಗಳು ಕಳುವಾದವೇ ! ನಮ್ಮ ಶರಚ್ಚಂದ್ರನು ಈ ಅಪರಾಧದಿಂದ ಅಪರಾಧಿಯಲ್ಲವಷ್ಟೆ ?

ಈ ಮಾತನ್ನು ಕೇಳಿದ ಕೂಡಲೆ ತಂದೆಯು ಸಂಕಟಕ್ಕೀಡಾದನು, ಕಾರಣವೇನೆಂದರೆ—ತನ್ನ ಮಗಳು ಶರಚ್ಚಂದ್ರನನ್ನು ತನ್ನ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುತಿದ್ದುದರಿಂದ, ಅವರಿಬ್ಬರಿಗೂ ವಿವಾಹವು ನಿಶ್ಚಯಿಸಲ್ಪಟ್ಟಿದ್ದಿತು. ಅಮರನಾಥನಿಗೆ ತನ್ನ ಮಗಳು ಹೊರತಾಗಿ ಮತ್ತಾವ ಸಂತತಿಯೂ ಇರಲಿಲ್ಲ. ಆದ್ದರಿಂದ ತನ್ನ ಮಗಳನ್ನು ಅನುರೂಪನಾದ ವರನಿಗೆ ಕೊಟ್ಟು ವಿವಾಹ ಮಾಡಿ, ಮಗಳು ಅಳಿಯ ಇವರಿಬ್ಬರನ್ನೂ ತನ್ನಲ್ಲಿಯೇ ಇಟ್ಟುಕೊಂಡು, ತನ್ನ ಅನಂತರ ಸರ್ವಸ್ವವನ್ನೂ ಶರಚ್ಚಂದ್ರನಿಗೆ ಕೊಟ್ಟು ಬಿಡಬೇಕೆಂದು ಅತನು ಸಂಕಲ್ಪಮಾಡಿದ್ದನು. ಆದುದರಿಂದಲೇ ಅಮರನು ಶರಚ್ಚಂದ್ರನ ವಿಷಯದಲ್ಲಿ ಅಷ್ಟು ವಿಶ್ವಾಸ ವಿಟ್ಟುಕೊಂಡಿದ್ದನು.

ತಾನು ಕೇಳಿದ ಪ್ರಶ್ನೆಗೆ ತಂದೆಯು ಇಷ್ಟು ಯೋಚಿಸುತ್ತಿರುವುದನ್ನು ನೋಡಿ, ಮಗಳು ಬಹಳವಾಗಿ ವಿಸ್ಮಿತಳಾದರೂ, ತಂದೆಯ ಮನೋಗತವು ಅವಳಿಗೆ ತಿಳಿಯಲು ಅವಕಾಶವಾಗಲಿಲ್ಲ.

ತಂದೆಯಾದವನು ಶರಚ್ಚಂದ್ರನ ವಿಶ್ವಾಸಘಾತುಕತೆಯನ್ನು ಕುರಿತು ತನ್ನ ಮಗಳ ಮುಂದೆ ಹೇಗೆ ಹೇಳಾನು? ಒಂದು ವೇಳೆ ಹೇಳಿದರೂ ಹೆಣ್ಣು ಮಗಳು ಕೇಳಿ ಸ್ಥಿರಳಾಗಿರಬಲ್ಲಳೆ? ವಿಷಯವಾದರೋ ತಿಳಿಸಲೇ ಬೇಕಾಗಿರುವುದು.

ತಂದೆಯು ಬಾಯಿಂದ ಹೊರಡುವ ಮಾತನ್ನು ಕೇಳಲೋಸುಗ ಮಗಳು ರಪ್ಪೆ ಹಾಕದೆ ನೋಡುತ್ತಿರುವಳು.

ಅಮರನು ಅನೇಕ ಸಂಕಟಕ್ಕೊಳಗಾಗಿ, ಈಗ ಯಾವುದೂ ಹೇಳುವುದಕ್ಕಾಗುವುದಿಲ್ಲ ವೆಂದನು.

ಮಗಳು—ಶರಚ್ಚಂದ್ರನ ಮೇಲೆ ಸಂಶಯವುಂಟೇನು?

ತಂದೆ—ಅದೇ ಇಷ್ಟು ಯೋಚನೆಗೆ ಕಾರಣವಾಗಿರುವುದು. ಇದರಲ್ಲಿ ಶರತ್ತನೂ ಸಿಕ್ಕಿ ಬೀಳುವಹಾಗಿದೆ.

ಮಗಳು—ಅದು ಹೇಗೆ?

ತಂದೆ—ಅದನ್ನು ಕಿವಿಯಿಂದ ಕೇಳಲಾಗುವುದಿಲ್ಲ. ಕೇಳಿದರೆ ಎಂತಹ ಕಲ್ಲೆದೆಯಾದರೂ ಪುಡಿಪುಡಿಯಾಗಿ ಹೋಗುವುದು.

ಮಗಳು—ಅದು ಹಾಗಿರಲಿ. ನೀನು ಹೇಳುವುದನ್ನು ಹೇಳು?

ತಂದೆ—ಶರತ್ತನು ಊರಲ್ಲಿಲ್ಲ.

ಮಗಳು—ಅದನ್ನು ನಾನು ಬಲ್ಲೆ.

ತಂದೆ—ಅದು ನಿನಗೆ ಹೇಗೆ ಗೊತ್ತು?

ಮಗಳು—ಆತನು ಹೋಗುವಾಗ ನನ್ನನ್ನು ಕಂಡು, ತನ್ನ ಅಣ್ಣನಿಗೆ ಸ್ವಸ್ಥವಾಗಿಲ್ಲವೆಂದೂ, ಆತನಿಂದ ತನಗೊಂದು ತಂತಿಯು ವರ್ತಮಾನ ಬಂದಿರುವುದೆಂದೂ ಅದಕ್ಕಾಗಿ ತಾನು ಹಠಾತ್ತಾಗಿ ಮಧುವನಕ್ಕೆ ಹೋಗಬೇಕೆಂದೂ ಹೇಳಿ ಹೋದನು.

ತಂದೆ—ಇದನ್ನು ನೀನು ನನಗೇಕೆ ಮೊದಲೇ ಹೇಳಲಿಲ್ಲ.

ಮಗಳು—ಆತನು ನಿನಗೆ ಮೊದಲೇ ತಿಳಿಸಿ ಹೋಗಿ

ರಬೇಕೆಂದು ನಾನು ನಿನಗೆ ಹೇಳಲಿಲ್ಲ.

ತಂದೆ—ಶರತ್ತು ನನ್ನ ಮುಂದೆ ಹಾಗೆ ಹೇಳಿಹೋದರೂ ಆತನು ಮಧುವನಕ್ಕೆ ಹೋಗಿಲ್ಲವೆಂದು ಪ್ರಮಾಣಾಂತರಗಳಿಂದ ತಿಳಿದು ಬಂದಿರುವುದು.

ಮಗಳು—ಅಪ್ಪ, ಶರಚ್ಚಂದ್ರನ ವಿಷಯದಲ್ಲಿಯೂ ಸಂಶಯವೇ ?

ತಂದೆ—ಮಗು, ಮೊದಲು ಮೊದಲು ಸಂದೇಹವಿರಲಿಲ್ಲ. ಈಗ ಸಂದೇಹಕ್ಕೆ ಆಸ್ಪದವುಂಟು.

ಮಗಳು—ಕಾರಣ ?

ತಂದೆ—ಶರಚ್ಚಂದ್ರನು ಹೇಳಿದ ಮಾತು ನಿಜವೋ ಸುಳ್ಳೋ ಎಂದು ತಿಳಿದುಕೊಳ್ಳುವುದಕ್ಕಾಗಿ, ನಾನು ಆತನ ಅಣ್ಣನಿಗೊಂದು ತಂತಿಯನ್ನು ಕಳುಹಿಸಿದೆನು. ಅದಕ್ಕೆ ಶರತ್ತು ಇಲ್ಲಿಗೆ ಬರಲಿಲ್ಲ. ನಾನು ಯಾವ ರೋಗದಿಂದಲೂ ಪೀಡಿತನಾಗಿಲ್ಲ. ಆತನನ್ನು ನಾನು ಇಲ್ಲಿಗೆ ಬರಬೇಕೆಂದೂ ಬರೆದವನಲ್ಲ, ಎಂದು ಉತ್ತರ ಬಂದಿರುವುದು. ಆದುದರಿಂದ, ಮಗು, ನೀನೇ ಹೇಳು, ನಾನು ಈ ವಿಷಯದಲ್ಲಿ ಸಂಶಯ ಪಡಬೇಕೋ ಬೇಡವೋ ?

ಮಗಳು ತಂದೆಯ ಮುಖವನ್ನು ದುರುದುರು ನೋಡುತ್ತಾ—ಅಪ್ಪ, ನೀನು ಹೇಳುವುದು ನನಗೆ ಅರ್ಥವೇ ಆಗುವುದಿಲ್ಲ. ಶರಚ್ಚಂದ್ರನು ನನ್ನಲ್ಲಿ ಹೇಗೋ, ನಿನ್ನಲ್ಲಿಯೂ ಹಾಗೆಯೇ ಸುಳ್ಳು ಹೇಳಿ ಹೊರಟುಹೋದನೆ ? ಎಂದು ನುಡಿದಳು.

ತಂದೆ—ಅಮ್ಮ ಇಂದಿರೆ ! ಆತನು ಸುಳ್ಳು ಹೇಳಿಯೇ ಹೋಗಿರಬೇಕೆಂದು ತೋರುವುದು.

ಇಂದಿರಾ—ನೀನು ಹೇಳುವುದೆಲ್ಲವೂ ನನಗೆ ಸ್ವಪ್ನದಂತಿದೆ. ನೀನು ಎಷ್ಟು ಹೇಳಿದರೂ ನನಗೆ ನಂಬುಗೆ ಸಾಲದು. ಶರತ್ತು ಒಂದು ಕಾಸನ್ನೂ ಕಳವು ಮಾಡಿಲ್ಲವೆಂದು ನನಗೆ ತೋರುವುದು. ದಯವಿಟ್ಟು ನಡೆದ ಸಂಗತಿಯೆಲ್ಲವನ್ನೂ ನನಗೆ ಬಿಚ್ಚಿ ಹೇಳು. ನನ್ನ ಹೃದಯವು ತತ್ತರಗುಟ್ಟುತ್ತಿರುವುದು.

ತಂದೆಯು ಉಪಾಯಾಂತರವನ್ನರಿಯದೆ ನಡೆದ ಸಂಗತಿಗಳನ್ನು ಒಂದೂ ಬಿಡದೆ ಹೇಳಿದನು. ಅದನ್ನು ಕೇಳಿ ಇಂದಿರೆಯು ಶರತ್ತಿನಮೇಲೆ ತಪ್ಪು ಆಪಾದನೆ ಮಾಡುವುದಕ್ಕೆ ಇದು ಹೊರತು ಬೇರೆ ಪ್ರಮಾಣಗಳಿವೆಯೋ? ಎಂದು ಕೇಳಿದಳು. ಅದಕ್ಕೆ ತಂದೆಯು—ಲೆಕ್ಕ ಪತ್ರಗಳೆಲ್ಲವೂ ಶರತ್ತಿನ ಅಕ್ಷರದಲ್ಲಿಯೇ ಸುಳ್ಳು ಸುಳ್ಳಾಗಿ ಖರ್ಚುಬಿದ್ದಿರುವುದು. ಇದಕ್ಕಿಂತಲೂ ಪ್ರಮಾಣವೇನಾಗಬೇಕು? ಹಾ ದೈವವೇ ! ಮನುಷ್ಯ ರೂಪದಲ್ಲಿರುವ ಕಾಲಸರ್ಪವನ್ನು ಇಷ್ಟುದಿನ ಅರಿಯದೇ ಹಾಲುಹಾಕಿ ಬಳೆಯಿಸಿದೆನಲ್ಲ! ಎಂದು ಹೇಳಿದ ಮಾತನ್ನು ಕೇಳಿ ಇಂದಿರೆಯು ಯಾವ ಮಾತನ್ನೂ ಆಡದೆ ಅಲ್ಲಿಯೇ ನಿಂತಿದ್ದವಳು,ನಿಲ್ಲಲು ಶಕ್ತಿ ಸಾಲದವಳಾಗಿ ಒಂದು ಚಾಪೆಯ ಮೇಲೆ ಕುಳಿತುಬಿಟ್ಟಳು. ತಂದೆಯು ಮಗಳ ದುರವಸ್ಥೆಯನ್ನು ನೋಡಿ ಮನಕರಗಿದವನಾಗಿ—ಮಗು, ನೀನು ಈ ದಾರುಣವಾದ ವರ್ತಮಾನವನ್ನು ಕೇಳಿದ ಕೂಡಲೆ ಎದೆಗೆಡುವೆಯೆಂದು ನಾನು ಮೊದಲೇ ಹೇಳಲಿಲ್ಲವೆ ? ಇಂತಹ ವರ್ತಮಾನವನ್ನು ಹೆಂಗಸರು ಸಹಿಸಲಾರರು, ಎಂದನು. ಅದನ್ನು ಕೇಳಿ ಇಂದಿರೆಯು-ಅಪ್ಪ, ಇದೆಲ್ಲವೂ ಮಿಥ್ಯಾಪವಾದವೆಂದು ನನಗೆ ಬೋಧೆಯಾಗುತ್ತಿರುವುದು. ' ನಾನಿದನ್ನು ಎಂದಿಗೂ ನಂಬ

ಲಾರೆನು, ಎಂದಳು.

ಅಮರ—(ಕೊಂಚ ರೇಗಿದವನಾಗಿ) ಹಾಗಾದರೆ ನಾನು ಹೇಳುವುದೆಲ್ಲವೂ ಸುಳ್ಳಷ್ಟೆ ?

ಇಂದಿರಾ—ನೀನು ಸುಳ್ಳು ಹೇಳಿದೆಯೆಂದು ನನ್ನ ಅಭಿಪ್ರಾಯವಲ್ಲ.

ಅಮರ-ಶರತ್ತು ನಿರ್ದೋಷಿಯೆಂದು ನಂಬುಗೆಯೋ?

ಇಂದಿರಾ—ಅಹುದು, ಶರತ್ತು ನಿರ್ದೋಷಿ; ಎಂದೂ ಪಾಪಕಾರ್ಯದಲ್ಲಿ ಲಿಪ್ತನಾಗದ ಶರಚ್ಚಂದ್ರನು ಇಂದು ಇಂತಹ ದುಷ್ಕಾರ್ಯದಲ್ಲಿ ಲಿಪ್ತನಾಗಲಿಕ್ಕಿಲ್ಲ.

ಈ ಮಾತನ್ನು ಕೇಳಿ ಅಮರನಾಥನು ಅವಾಕ್ಕಾದನು ಇಂದಿರೆಯೂ ಸುಮ್ಮನಾಗಿಬಿಟ್ಟಳು.

---

## ಇಪ್ಪತ್ತೆರಡನೆಯ ಅಧ್ಯಾಯ.

ಅಮರನು ಬಹಳ ಹೊತ್ತು ನೀರವನಾಗಿದ್ದು, ಮತ್ತೆ ಮಾತನಾಡಿದನು.

ಅಮರ—ಅಮ್ಮ ಇಂದಿರೆ! ಮಧುವನದಿಂದ ತಂತಿಯ ವರ್ತಮಾನ ಬರುವವರೆಗೂ ನಾನೂ ನಿನ್ನಂತೆಯೇ ತಿಳಿದಿದ್ದೆನು.

ಇಂದಿರಾ—ಈಗ ಆ ನಂಬುಗೆ ಇಲ್ಲವೇತಕೆ? ಎಂದಿಗೂ ನಿರ್ದೋಷಿಯಾಗಿದ್ದವನು ಈಗ ಮಾತ್ರ ದೋಷಿಯಾಗಿಬಿಟ್ಟನೋ? ಅನೇಕ ವರ್ಷಗಳಿಂದಲೂ ಮನುಷ್ಯನ ಸ್ವಭಾವವನ್ನು ತಿಳಿದುತಿಳಿದೂ ಇನ್ನೂ ಸಂಶಯ ವೇ?

ಅಮರ—ಇಲ್ಲವಮ್ಮ, ಮಗು, ನೀನು ಯೋಚಿಸಿದಂತೆ ನಾನು ಯೋಚಿಸಲಿಲ್ಲ. ಈಗ ನಾನೇನುಮಾಡಲಿ. ಅವನು

ದೋಷಿಯೆಂಬುದಕ್ಕೆ ಸಾಕಾದಷ್ಟು ಕಾರಣಗಳು ಸಿಕ್ಕಿರು ತ್ತವೆಯಾಗಲಿ, ಅವನು ನಿರ್ದೋಷಿಯೆಂಬುದಕ್ಕೆ ಯಾವ ಕಾ ರಣವೂ ಸಿಕ್ಕಿಲ್ಲ. ಮತ್ತೂ ಅವನಿಗೆ ಬತ್ತಾಸೆಯಾಗಿ ಮಾತ ನಾಡುವವರೂ ಯಾರೂ ಇಲ್ಲ.

ಇಂದಿರಾ—ಆತನಮೇಲೆ ಅಪರಾಧವನ್ನು ಹೊರಿಸುವು ದಕ್ಕೆ ಮತ್ತಾವ ಕಾರಣವೇನಾದರೂ ಉಂಟೆ?

ಅಮರ- ಉಂಟು.

ಇಂದಿರಾ—ಹಾಗಾದರೆ ಹೇಳು.

ಅಮರ—ಶರತ್ತು ಹಣವನ್ನು ಅಪಹರಿಸುವುದಕ್ಕೆ ಮ ತ್ತೊಂದು ಕಾರಣವಿರಬೇಕೆಂದು ನಾನು ಊಹಿಸುವೆನು.

ಇಂದಿರಾ—ಅದೆಂತಹದು?

ಅಮರ—ಅವನಿಗೆ ವಿಶೇಷವಾದ ಸಾಲವಿರುವುದಂತೆ. ಆತನು ಈ ನಡುವೆ ದುರ್ಮಾರ್ಗದಲ್ಲಿ ಪ್ರವರ್ತಿಸಿ ಜೂಜಿನ ಆಟವನ್ನು ಆಡುತ್ತಾ ದಿನೇ ದಿನೇ ಹಣವೆಲ್ಲವನ್ನೂ ಕಳೆಯು ತ್ತಿರುವನಂತೆ. ಸ್ವೇಚ್ಛೆಯಾಗಿ ಹಣವನ್ನು ಕಳೆಯುವವನಿಗೆ ಹಣ ಬೇಕಾಗಿರುವುದರಿಂದ ಈ ರೀತಿಯಲ್ಲಿ ಪ್ರವರ್ತಿಸಿರ ಬೇಕು.

ಅದನ್ನು ಕೇಳಿದ ಇಂದಿರೆಯ ಮುಖದಲ್ಲಿ ಕೆಂಪೇರಿತು. ನಾಳಗಳಲ್ಲಿ ರಕ್ತವು ಕುದಿಯಲಾರಂಭಿಸಿತು. ಆಕೆಯು ತಂ ದೆಯ ಮಾತನ್ನು ಇನ್ನು ಕೇಳಲಾರದವಳಾಗಿ ಆಸನದಿಂದೆದ್ದು, ಅಪ್ಪ, ಸಾಕುಸಾಕು ನಿನ್ನ ಮಾತು, ನಾನು ಕೇಳಲಾರೆ. ನಿ ನಗೆ ಯಾರೋ ಸುಳ್ಳು ಹೇಳಿ ನಿನ್ನನ್ನು ಭಯಪಡಿಸಿರಬೇಕು. ಮೂರು ಹೊತ್ತೂ ಮನೆಯಲ್ಲಿಯೇ ಇದ್ದು ಕೆಲಸವನ್ನು ಮಾ ಡಿಕೊಂಡಿರತಕ್ಕವನಿಗೆ ಜೂಜಾಡುವುದಕ್ಕೆ ಹೊತ್ತೆಲ್ಲಿಯದು?

ಜೂಜಿನ ವ್ಯಸನವು ತಲೆಗೆ ಹತ್ತಿದರೆ ಮನುಷ್ಯಮಾತ್ರದವನು ತನ್ನ ಕೆಲಸದಲ್ಲಿ ಆದರವುಳ್ಳವನಾಗಿರುವನೇ? ಮೋಸಗಾರರು ಹೇಳುವ ಸುಳ್ಳು ವರ್ತಮಾನವನ್ನು ನಂಬಿ ವ್ಯಸನಪಡುವುದು ನಿನ್ನಂತಹ ಧೀರನಿಗೆ ತಕ್ಕುದಲ್ಲ, ಎಂದಳು.

ಅಮರ—ನನಗೆ ಹೇಳಿದವರ ಮಾತನ್ನು ಕೇಳದಿರಲು ಕಾರಣವಿಲ್ಲ. ಜೂಜಿನಕಟ್ಟೆ ಮಾಲೀಕನೇ ಇಲ್ಲಿಗೆ ಬಂದು ಶರಚ್ಚಂದ್ರನಿಂದ ತನಗೆ ವಿಪರೀತವಾಗಿ ಹಣ ಬರಬೇಕೆಂದು ಹೇಳಿ ಹೋದನು.

ಇಂದಿರಾ—ಯಾರು ಚರಿತ್ರಹೀನರೋ, ಯಾವನ ಮಾತನ್ನು ಯಾರು ನಂಬುವುದಿಲ್ಲವೋ , ಯಾರ ದರ್ಶನವು ಮಹಾಪಾಪಕರವೆಂದು ಜನರು ತಿಳಿದಿರುವರೋ, ಯಾರಿಗೋಸ್ಕರವಾಗಿ ಬಂದೀಖಾನೆಯು ತನ್ನ ಬಾಗಿಲುಗಳನ್ನು ನಿತ್ಯವೂ ತೆರೆದಿಟ್ಟುಕೊಂಡಿರುವುದೋ, ವಿದ್ಯಾವಂತರು ಯಾರನ್ನು ತಪ್ಪೋಯೋಗ್ಯರೆಂದು ಪರಿಗಣಿಸಿರುವರೋ, ಅಂತಹ ದುರ್ಮಾರ್ಗರಲ್ಲಿ ಒಬ್ಬನಾದವನ ಮಾತು ನಿನಗೆ ಪ್ರಧಾನವಾಯಿತು ಅನೇಕ ತರದಲ್ಲಿ ಸಾಧುವೆನಿಸಿದ್ದ ಶರಚ್ಚಂದ್ರನು ಬಂದು ಕ್ಷಣಮಾತ್ರದಲ್ಲಿ ಗುಣ ಹೀನನಾಗಿ ಬಿಟ್ಟನಲ್ಲವೆ ?

ಅಮರ—(ಉತ್ತರವಿಲ್ಲ.)

ಇಂದಿರಾ—ತಂದೆಯೇ ! ಇತರರ ಮಾತಿನಿಂದ ಯೋಗ್ಯರಾದವರನ್ನು ಕೆಡಿಸಲೆಣಿಸಬೇಡ. ದೇವರು ಅನ್ಯಾಯಗಳನ್ನು ಸಹಿಸನು

ಅಮರ—ನಾನು ಯಾವ ಪ್ರಮಾಣದಿಂದ ಶರಚ್ಚಂದ್ರನನ್ನು ನಿರ್ದೋಷಿಯನ್ನಾಗಿ ಮಾಡಲಿ. ಈಗ ಸಿಕ್ಕಿರುವ ಪ್ರಮಾಣವೆಲ್ಲವೂ ಆತನಿಗೆ ವಿರೋಧವೇ ಆಗಿರುವುದು. ಈ ದ್ವೈವಿಧ್ಯದಲ್ಲಿ ನನಗೆ ದಿಕ್ಕೇ ತೋರುವುದಿಲ್ಲ.

ಇಂದಿರಾ—ನಮ್ಮ ಮನೆಯಲ್ಲಿ ನಡೆದ ವಿದ್ಯಮಾನವನ್ನು ಬಹಿರಂಗ ಪಡಿಸಿದೆಯು ?

ಅಮರ—(ಎದ್ದು ಕುಳಿತು) ಮಗು, ನನ್ನ ಹೃದಯ ದಲ್ಲಿ ಆಶಾ ಸಂಚಾರವಾದಂತಿದೆ. ನಮ್ಮ ಮನೆಯಲ್ಲಿ ನಡೆದ ಕಳುವಿನ ಪತ್ತೆಗಾಗಿ ಪ್ರಸಿದ್ಧ ಪತ್ತೇದಾರನಾದ ಅರಿಂದಮ ನೆಂಬುವನನ್ನು ನಿಯಮಿಸಿರುವೆನು. ಆತನನ್ನು ನೋಡಿ ಬಹಳ ಹೊತ್ತಾಯಿತು. ಆತನೇನಾದರು ಮನಸ್ಸು ಮಾಡಿದರೆ ಶರತ್ತು ನಿರ್ದೋಷಿಯಾಗಬಹುದು. (ಗಡಿಯಾರವನ್ನು ನೋಡಿ) ಅರಿಂದಮನು ಇಲ್ಲಿಗೆ ಬರುವ ಹೊತ್ತಾಯಿತು. ಆತನನ್ನು ನಿನ್ನಲ್ಲಿಗೆ ಕಳುಹಿಸುವೆನು. ನೀನು ಆತನೊಡನೆ ಇದಕ್ಕೆ ಸಂಬಂಧಪಟ್ಟ ಸಂಗತಿಗಳನ್ನು ಮಾತನಾಡಿ ಸೂಕ್ತ ವಾದುದನ್ನು ಸರಿಪಡಿಸು.

ಇಂದಿರಾ—ಹಾಗೆಯೇ ಆಗಲಿ, ಶರಚ್ಚಂದ್ರನು ನಿ ರ್ದೋಷಿಯೆಂದು ಆತನಿಗೆ ಒಪ್ಪಿಸುವೆನು.

ಅಮರನು ಮುಂದೆ ಯಾವ ಮಾತನ್ನೂ ಆಡಲಿಲ್ಲ. ಇಂದಿರೆಯೂ ನಾಚಿಕೆಯಿಂದ ಅನೇಕ ಸಂಗತಿಗಳನ್ನು ಹೇಳ ಲು ಸಮರ್ಥಳಾಗಲಿಲ್ಲ. ಲಜ್ಜೆಯೆಂಬುದು ಲೋಕದಲ್ಲಿ ಸ್ತ್ರೀ ಜಾತಿಗೆ ಸಾಮಾನ್ಯವಾದುದು. ಲಜ್ಜೆಯೊಡನೆ ಪ್ರಣಯವು ಸೇರಿದರೆ ಫಲಿತಾಂಶವು ಅನುಭವೈಕವೇದ್ಯವಾಗುವುದು. ತನ್ನ ಪ್ರಣಯಾಕಾಂಕ್ಷೆಯಾದ ಶರಚ್ಚಂದ್ರನಿಗೆ ಬಂದೊದಗಿರುವ ವಿಪತ್ತನ್ನು ಹೋಗಲಾಡಿಸುವುದಕ್ಕೆ ಇಂದಿರೆಯು ಮಾಡಿದ ಸಾಹಸವು ಇತರರಿಂದ ತೋರಿಸುವುದಕ್ಕೂ ಆಗುವುದಿಲ್ಲ; ನಮ್ಮಿಂದ ವರ್ಣಿಸುವುದಕ್ಕೂ ಆಗುವುದಿಲ್ಲ. ಪ್ರೀತಿಯೇ ಲೋಕದಲ್ಲಿ ಉತ್ತಮವಾದುದು, ಪ್ರೀತಿಯೇ ಎಲ್ಲವನ್ನೂ ಜ ಯಿಸುವುದು ಎಂಬುದು ನಮ್ಮಿಂದ ರಚಿತವಾಗಿರುವ ಪ್ರೀತಿವಿ ಜಯವೆಂಬ ಗ್ರಂಥದಲ್ಲಿ ವಿಶದವಾಗಿ ವರ್ಣಿತವಾಗಿರುವುದು.

## ಪ್ರಥಮ ಖಂಡ ಸಂಪೂರ್ಣ

ಜಯತು ಭಗವಾನ್.

# ಚೋರ ಚಕ್ರವರ್ತಿ

## ದ್ವಿತೀಯಖಂಡ.

### ಒಂದನೆಯ ಅಧ್ಯಾಯ.

ನಾವು ಪ್ರಥಮಖಂಡದಲ್ಲಿ ಅರಿಂದಮನನ್ನು ಜೀವಮೂತವಾದ ನಸ ನರಕೂಪವಂತಿರುವ ಮನೆಯಲ್ಲಿ ಬಿಟ್ಟು ಬಂದಿದ್ದೆವು. ಈಗ ಆತನ ಗತಿಯೇನಾಗಿರುವುದೆಂಬುದನ್ನು ವಿವರಿಸುವೆವು. ಎಲ್ಲರೂ ದಯವಿಟ್ಟು ಗಮನಿಸಬೇಕು.

ಯಾವ ಮಾಯಾವಾದಿಹೆಂಗಸು ಅರಿಂದಮನನ್ನು ತಪ್ಪಿಸಿಕೊಂಡು ಹೋಗುವುದಕ್ಕೆ ಅಸಾಧ್ಯವಾದ ಸ್ಥಳದಲ್ಲಿ ಕರೆದುಕೊಂಡುಹೋಗಿ ಬಳಿಕ ಮಾಯವಾದಳೋ, ಆ ಹೆಂಗಸಿನ ಹೆಸರು ಪ್ರತಾರಿಣಿ. ಪ್ರತಾರಿಣಿಯು ನೋಡುವುದಕ್ಕೆ ಬಹಳ ಸೌಮ್ಯಳು. ಮೇಲಿನ ಆಕಾರದಿಂದ ಆಕೆಯ ಅಂತರಂಗವು ಪ್ರಕಾಶಿತವಾಗುವಂತಿರಲಿಲ್ಲ. ಆಕೆಯನ್ನು ನೋಡಿದವರೆಲ್ಲರೂ ಪ್ರತಾರಿಣಿಯ ಬಹೀರೂಪದಿಂದ ಮೋಹಿತರಾಗುತ್ತಿದ್ದರು. ಅದರಂತೆಯೇ ಅರಿಂದಮನೂ ಮೋಸಹೋದನು.

ಅರಿಂದಮನು ಆ ಅಂಧಕಾರಪೂರ್ಣವಾದ ಸ್ಥಳದಲ್ಲಿ ನಿಂತು ಎರಡು ಮೂರು ಸಲ ಪ್ರತಾರಿಣಿಯನ್ನು ಕೂಗಿದನು. ಉತ್ತರ ಬರಲಿಲ್ಲ. ಪೋಲೀಸಿಗೆ ಕೊಡುವುದಾಗಿ ಹೆದರಿಸಿ ನೋಡಿದನು. ಉತ್ತರವಿಲ್ಲ. ಪ್ರತಾರಿಣಿಯಾದರೋ ಎಲ್ಲಿಯೋ ಮಾಯವಾಗಿ ಬಿಟ್ಟಿದ್ದಳು. 'ತನ್ನನ್ನು ಬಂಧಿಸುವುದಕ್ಕಾಗಿ ಪ್ರತಾರಿಣಿಯು ಈ ರೀತಿ

ಯಲ್ಲಿ ಉಪಾಯವನ್ನು ಹುಡುಕಿದಳೋ ? ಅಥವಾ, ನಾನಿರುವ ಸ್ಥ ವನ್ನು ಮನೆಯ ಯಜಮಾನನಾದ ಜೀಮೂತನಿಗೆ ತಿಳಿಸಲು ಹೊ ಟುಹೋಗಿರುವಳೋ ? ಯಾವುದೂ ಗೊತ್ತಾಗುವುದಿಲ್ಲ. ಯಾವರೀ ಯಲ್ಲಾದರೂ ನಾನು ಜೀಮೂತನೊಡನೆ ಘೋರವಾದ ಯುದ್ಧವನ ಮಾಡಲೇ ಬೇಕಾಗುವುದು ' ಎಂದು ಅರಿಂದಮನು ಯೋಚಿಸಿದನ

ಅರಿಂದಮನು ಇಂತಹ ಭಯಂಕರವಾದ ಸ್ಥಳದಲ್ಲಿದ್ದವ ದರೂ ನಿರಾಶನಾಗಲಿಲ್ಲ. ಯಾವ ರೀತಿಯಲ್ಲಾದರೂ ತಾನು ತಪ್ಪಿ ಕೊಂಡು ಹೋಗಲು ಉಪಾಯವನ್ನು ಯೋಚಿಸಿ, ತಾನು ಬಂ ದಾರಿಯಿಂದಲೇ ಹಿಂದಿರುಗಿ ಹೋಗಲು ಯತ್ನಮಾಡತೊಡಗಿದನ ಅರಿಂದಮನು ಹಿಂದಿರುಗಿದಾಗ ತನ್ನಲ್ಲಿದ್ದ ಕೈಲಾಂದ್ರುವನ್ನು ಹೊರ ತೆಗೆದು ನೋಡಲಾಗಿ, ತಾನು ನಿರ್ಜನವಾದ ಒಂದು ಕೋಣೆಯ ಆಬದ್ಧನಾಗಿರುವನೆಂದು ತಿಳಿದುಕೊಂಡನು. ಆ ಕೋಣೆಯಿಂದ ಹೆ ರಗೆ ಬರಲು ಎರಡುಬಾಗಿಲುಗಳಿದ್ದುವು. ಮಹಡಿಯಿಂದ ಇಳಿ ಬರಲು ಅನುಕೂಲಿಸತಕ್ಕ ಬಾಗಿಲೊಂದು ; ಬೇರೊಂದು ಕಡೆ ಹೊರಡಲು ಅನುಕೂಲವಾದ ಸಣ್ಣ ಬಾಗಿಲೊಂದು. ಮಹಡಿಯ ಕಡೆಯಿಂದ ಇಳಿದು ಬರುವುದಾದರೆ, ಶತ್ರುಗಳು ಎಲ್ಲಿ ಬಾದುಬಿಡ ವರೋ ಎಂಬ ಭಯ, ಆದ್ದರಿಂದ ಸಣ್ಣಬಾಗಿಲಿನಿಂದ ಬೇರೊಂದ ಕಡೆಗೆ ಪಲಾಯನವಾಗುವುದೇ ಲೇಸೆಂದು ಅರಿಂದಮನು ತಿಳಿದ ಅಲ್ಲಿಂದ ಹೊರಟನು. ಅಷ್ಟುಹೊತ್ತಿಗೆ ಲಾಂದ್ರದ ದೀಪವು ಎಣ್ಣೆಯ ಅಭಾವದಿಂದ ಆರಿಹೋಗಿದ್ದಿತಾದ್ದರಿಂದ, ಅರಿಂದಮನು ಅಂಧಕ ರದಲ್ಲಿಯೇ ಹೆಜ್ಜೆಯಮೇಲೆ ಹೆಜ್ಜೆಯನ್ನಿಟ್ಟುಕೊಂಡು ಸ್ವಲ್ಪದೂ ಹೋಗಿ ನೋಡಲಾಗಿ ಆಕಡೆಯ ದ್ವಾರವು ಬದ್ಧವಾಗಿದ್ದಿತು, ಆದರ ಆ ಬಾಗಿಲು ಕೀಟವಷ್ಟವಾಗಿ ಶೋಚನೀಯವಾದ ಅವಸ್ಥೆಯನ್ನ ಧಾರಣಮಾಡಿದ್ದಿತಾದ್ದರಿಂದ ಅರಿಂದಮನು ನಿರಾಶನಾಗಲು ಕಾರ

ಬೀಗಲಿಲ್ಲ. ಆ ಕೂಡಲೆ ಆತನು ಮುಂದರಿದು ಆ ಬಾಗಿಲನ್ನು ಕಾಲಿನಿಂದ ಒದ್ದನು. ಬಾಗಿಲು ಹಾರಿಬಿಟ್ಟಿತು. ಅರಿಂದಮನು ಅಲ್ಲಿಂದ ಮುಂದೆ ಹೋಗಿ ನೋಡಲಾಗಿ, ಅಲ್ಲಿಯೂ ಅಂಧಕಾರವು ಏಕಾಧಿಪತ್ಯವಮಾಡುತಿದ್ದಿತು. ಈ ಅಂಧಕಾರದಲ್ಲಿಯೇ ಆತನು ತಡಕಿತಡಕಿ ನೋಡಲಾಗಿ ಬಾದೆರಡು ಕಿಟಿಕಿಗಳಿರುವುದು ಕಂಡು ಬಂದಿತು. ಬಳಿಕ ಆತನು ಕಿಟಿಕಿಯೊಂದನ್ನು ತೆರೆದು ಹೊರಗೆ ನೋಡಿದನು. ಅಲ್ಲಿಂದ ಕೆಳಗಿಳಿಯುವುದಕ್ಕಾಗಿ ಹಾಕಿದ್ದ ಬಂದು ಏಣಿಯು ಗೋಚರಕ್ಕೆ ಬಂದಿತು. ಇದನ್ನು ನೋಡಿ ಅರಿಂದಮನು ಪರಮಾಶ್ಚರ್ಯಭರಿತನಾಗಿ ಆ ಏಣಿಯಮೂಲಕವಾಗಿ ಕೆಳಗಿಳಿದು ಮನೆಯ ಪಕ್ಕದಲ್ಲಿದ್ದ ಬಂದು ಗಲ್ಲಿಯಲ್ಲಿ ಬಂದು ಸೇರಿದನು. ಅನಂತರ ಅರಿಂದಮನು ಕೊಂಚಹೊತ್ತು ಸುತ್ತಲೂ ನೋಡಿ ಅಲ್ಲಿ ಮತ್ತಾರೂ ಸಂಚಾರಮಾಡದಿರುವದನ್ನು ಕಂಡು ನಿರಾತಂಕನಾಗಿ ತನ್ನಮನೆಗೆ ಬಂದು ಸೇರಿದನು. ಅನಂತರ ತನ್ನ ವೇಷವನ್ನು ತೆಗೆದುಹಾಕಿ ಭೋಜನಾದಿಗಳನ್ನು ತೀರಿಸಿಕೊಂಡು ಹಾಸಿಗೆಯ ಮೇಲೆ ಮಲಗಿದನು. ನಾನಾಯೋಚನೆಯಲ್ಲಿ ಆತನಿಗೆ ಬಹಳಹೊತ್ತು ನಿದ್ರೆಯೇ ಹತ್ತಲಿಲ್ಲ.

---

## ಎರಡನೆಯ ಅಧ್ಯಾಯ.

ಮನುಷ್ಯನಿಗೆ ನಿದ್ರೆಯು ಬಾರದಮಾತ್ರಕ್ಕೆ ರಾತ್ರಿಯು ಕಳೆದು ಬೆಳಗಾಗುವುದು ನಿಂತೀತೆ? ಯಥಾಕ್ರಮದಲ್ಲಿ ರಾತ್ರಿಯು ಕಳೆದು ಬೆಳಗಾಯಿತು. ಅರಿಂದಮನು ಎಂದಿನಂತೆ ಪ್ರಾತಃಕೃತ್ಯಗಳನ್ನು ತೀರಿಸಿಕೊಂಡು, ತಾನು ಮುಂದೆ ಮಾಡಬೇಕಾದ ವಿಷಯಗಳನ್ನು ಯೋಚಿಸಿ ಅಮರನಾಥನ ಮನೆಯಕಡೆಗೆ ತೆರಳಿದನು. ಅಮರನು ಅರಿಂದಮನ ಆಗಮನವನ್ನು ನೋಡಿ ಬಹಳ ಸಂತೋಷಗೊಂಡು ಅವನನ್ನು ತನ್ನ ಬಳಿಯಲ್ಲಿ ಕುಳ್ಳಿರಿಸಿದ ಬಳಿಕ, ಅರಿಂದಮನು ಅಮರ

ನನ್ನ ನೋಡಿ-ಸ್ವಾಮಿ, ನಾನು ತಮ್ಮನ್ನು ನೋಡಿ ಬಹಳ ಕಾಲ ವಾಯಿತು. ಈ ಅಪರಾಧವನ್ನು ಕ್ಷಮಿಸಬೇಕು, ಎಂದನು. ಅವ ರನು ಈ ಮಾತಿಗೆ ಏನೊಂದುತ್ತರವನ್ನೂ ಕೊಡದೆ, ಶರಚ್ಚಂದ್ರನ ಕಣ್ಣಿನಿಂದ ಬಂದ ತಂತಿಯುವರ್ತಮಾನವನ್ನು ಆತನ ಕೈಗೆಕೊಟ್ಟು- ಇದರಿಂದ ತಮಗ ಏನುತಿಳಿಯುಬರುವುದೋ ನೋಡಿರಿ, ಎಂದನು. ಅರಿಂದಮನು ಆ ವರ್ತಮಾನವನ್ನು ಓದಿದನು. ಅವನ ಮುಖದಲ್ಲಿ ವಿಷಾದರೇಖೆಯೊಂದು ಕಾಣಿಸಲಾಗಿ, ಅಮರನು ಅದರ ಕಾರಣವನ್ನು ತಿಳಿಯಲು ಬಹಳ ಆತುರನಾದನು.

ಅರಿಂದಮನು ಕಾಗದವನ್ನುಓದಿ- ಇದರಿಂದ ಸ್ಪಷ್ಟವಾಗಿ ಯೇ ಗೊತ್ತಾಗುವುದು, ಎನಲಾಗಿ, ಅಮರನು- ನನಗೂ ಹಾಗೆಯೇ ತೋರುವುದು. ಇದನ್ನು ನೋಡಿದಾಗಿನಿಂದಲೂ ನನಗೇನೋ ಬಹ ಳ ವ್ಯಸನವುಂಟಾಗಿರುವದು, ಎಂದನು.

ಅರಿಂದಮ- ವ್ಯಸನವೇತಕೆ ? ಶರಚ್ಚಂದ್ರನು ಅಪರಾಧಿಯೆಂ ಬುದನ್ನು ಕೇಳುವುದು ನಿಮಗೆ ಇಷ್ಟವಿಲ್ಲವೇನೋ ?

ಅಮರ—ನನ್ನ ಇಷ್ಟಾನಿಷ್ಟಗಳು ಕೆಲಸಕ್ಕೆ ಬಾರವು. ಅಪ ರಾಧಿಯಾರೆಂಬುದನ್ನು ತಾವೇಕಂಡುಹಿಡಿಯಬೇಕು. ಬಂದುವೇಳೆ ಶರತ್ತೇ ಅಪರಾಧಿಯಾಗುವುದಾದರೆ, ನನ್ನ ಹೃದಯವು ತತ್ತರಗುಟ್ಟು ವುದು.

ಅರಿಂದಮ—ಈ ವರ್ತಮಾನದಿಂದ ತಮಗೆ ತೋರಿಬರು ವುದೇನು ?

ಅಮರ—ಇಷ್ಟಾದರೂ ಶರಚ್ಚಂದ್ರನು ನಿರ್ದೋಷಿಯೆಂಬು ದೇ ನನ್ನ ಅಭಿಪ್ರಾಯ.

ಅರಿಂದಮ—ಶರಚ್ಚಂದ್ರನು ನಿರ್ದೋಷಿಯೆಂಬುದಕ್ಕೆ ಪ್ರಮಾ ಣಬೇಕಾಗಿರುವುದೇನೋ ?

ಅಮರ—ಅಹುದು, ತಾವು ಆತನನ್ನು ನಿರ್ದೋಷಿಯನ್ನಾಗಿ ಮಾಡುವಿರಿ.

ಅರಿಂದಮ—ತಾವು ಆತನ ವಿಷಯದಲ್ಲಿ ಇಷ್ಟು ವಿಶ್ವಾಸವಿಡಲು ಕಾರಣವೇನು ?

ಅಮರ—ನಾನು ಆತನನ್ನು ಮೊದಲಿನಿಂದಲೂ ಪ್ರೀತಿಸುತ್ತಿರುವುದೇ ಕಾರಣ.

ಅರಿಂದಮ—ಪ್ರೀತಿಗೆ ಕಾರಣ ?

ಅಮರ—ಆತನಿಗೆ ನನ್ನ ಮಗಳನ್ನು ಕೊಟ್ಟು ವಿವಾಹಮಾಡಬೇಕೆಂದು ಸಂಕಲ್ಪಮಾಡಿರುವೆನು.

ಅರಿಂದಮ—ನೀವು ನಿಮ್ಮ ಮಗಳನ್ನು ಆತನಿಗೆ ಕೊಡಬೇಕೆಂದಿರುವಕಾರಣ, ಆತನು ನಿರ್ದೋಷಿಯಾಗಬೇಕೆಂದಲ್ಲವೇ ನಿಮ್ಮ ಅಭಿಪ್ರಾಯವಿರುವುದು ?

ಅಮರ—ಶರತ್ತು ದೋಷಿಯಾಗುವುದಾದರೆ ನನ್ನ ಮಗಳು ಜೀವದಿಂದಿರಳು.

ಅರಿಂದಮ—ತಮ್ಮ ಮಗಳಿಗೆ ಇದೆಲ್ಲವೂ ಗೊತ್ತಿರುವುದೇ ?

ಅಮರ—ಗೊತ್ತಿರುವುದು. ನಿನ್ನೆಯದಿನ ನಾನು ಆಕೆಗೆ ಎಲ್ಲವನ್ನೂ ತಿಳಿಸಿದೆನು.

ಅರಿಂದಮ—ಈ ವರ್ತಮಾನವನ್ನೂ ತಿಳಿಸಿದಿರಾ ?

ಅಮರ—ತಿಳಿಸಿದೆನು.

ಅರಿಂದಮ—ಇದನ್ನು ಕೇಳಿ ಆಕೆಯು ಹೇಳಿದುದೇನು ?

ಅಮರ—ಶರತ್ತು ಸರ್ವಥಾ ನಿರ್ದೋಷಿಯೆಂಬುದೇ.

ಅರಿಂದಮ—ಹಾಗಾದರೆ ತಮ್ಮ ಮಗಳ ಅಭಿಪ್ರಾಯವೇ ಫಲಿಸುವುದು.

ಅಮರ—(ವಿಸ್ಮಿತನಾಗಿ) ತಾವು ಹೇಳುವುದಾವುದೂ ನನಗೆ ಅರ್ಥವೇ ಆಗುವುದಿಲ್ಲ.

ಅರಿಂದಮ—ತಮ್ಮ ಮಗಳು ಸರ್ವಮಂಗಳಸ್ವರೂಪಳು. ಆಕೆಯು ಸತೀಸಾಧ್ವೀಪತಿವ್ರತಾ. ಆಕೆಯು ಮಾತೆಂದಿಗೂ ನಿಷ್ಫಲವಾಗಲಾರದು.

ಅಮರ—ನಿಮ್ಮ ಮಾತಿನಂತೆಯೇ ಆಗಲಿ. ದೇವರು ನಿಮಗೆ ನಿತ್ಯಮಂಗಳವನ್ನುಂಟುಮಾಡಲಿ.

ಅರಿಂದಮ—ಶರಚ್ಚಂದ್ರನು ನಿರಪರಾಧಿಯೆಂದು ನನಗೆ ತೋರುತ್ತದೆ. ತಮಗೆ ಸಮ್ಮತವಾಗಿರುವುದಾದರೆ, ನಾನೊಂದುಸಲ ತಮ್ಮ ಮಗಳನ್ನು ನೋಡಬೇಕೆಂದಿರುವೆನು. ಆಕೆಯೊಡನೆ ಬಂದೆ‍ರಡು ಮಾತುಗಳನ್ನಾಡಬೇಕೆಂದು ನನಗೆ ತುಂಬ ಆಸೆಯಿರುವುದು.

ಅಮರ—ನೀವು ಮಾತನಾಡಲು ಯಾವ ಅಡ್ಡಿಯೂ ಇರುವುದಿಲ್ಲ. ನಾನು ವಿಶೇಷ ಹಣವನ್ನು ಖರ್ಚುಮಾಡಿ, ಆಕೆಗೆ ವಿದ್ಯೆಯನ್ನು ಹೇಳಿಸಿರುವೆನು. ಆಕೆಗೆ ಇಂಗ್ಲೀಷು, ಕನ್ನಡ, ಸಂಸ್ಕೃತ, ತೆಲಗು, ತಮಿಳು, ಮಹಾರಾಷ್ಟ್ರ, ಹಿಂದಿ, ಬಂಗಾಳಿ ಮುಂತಾದ ಭಾಷೆಗಳೆಲ್ಲವೂ ಚೆನ್ನಾಗಿ ಬರುವುವು. ಆದುದರಿಂದ ಆಕೆಯನ್ನುವಿದ್ಯಾವತಿಯರ ಮಂಡಳಿಯಲ್ಲಿ ಅಗ್ರಗಣ್ಯಳನ್ನಾಗಿ ಪರಿಗಣಿಸಬಹುದು.

ಅರಿಂದಮ—ಆಕೆಯನ್ನು ಯಾವಾಗ ನೋಡಬಹುದು ?

ಅಮರ—ಕೊಂಚಕಾಲದೊಳಗಾಗಿಯೇ.

ಅರಿಂದಮ—ನಾನು ಅಲ್ಲಿನವರೆಗೂ ಇಲ್ಲಿಯೇ ಇದ್ದು, ಆಕೆಯನ್ನು ನೋಡಿಕೊಂಡು ಹೊರಡುವೆನು. ಅಲ್ಲಿನವರೆಗೂ ನಿನ್ನೆಯ ದಿನದ ಕೆಲವು ಸಂಗತಿಗಳನ್ನು ನಿಮಗೆ ತಿಳಿಸುವೆನು.

ಅಮರ—(ಆದರದಿಂದ) ಅದೇನು ಮಹಾಶಯ ?

ಅರಿಂದಮ—ಬಹಳ ಸಂಗತಿಗಳುಂಟು.

ಅಮರ—ಯಾರ ವಿಷಯವಾಗಿ.

ಅರಿಂದಮ—ಮೊದಲು ರಾಮರತ್ನನ ವಿಷಯವಾಗಿ ತಿಳಿಸುವೆನು.

ಅಮರ—ನಡೆದುದೆಲ್ಲವನ್ನೂ ತಿಳಿಸೋಣಾಗಲಿ.

ಅರಿಂದಮ—ನಿಮ್ಮ ರಾಮರತ್ನನಿಗೂ ಜೂಜಿನಕಟ್ಟೆ ಜೀಮೂತನಿಗೂ ವಿಶೇಷ ಸ್ನೇಹವಿರುವುದು. ಅದನ್ನು ನಾನು ಸಪ್ರಮಾಣವಾಗಿ ಕಂಡುಹಿಡಿದಿರುವೆನು.

ಅಮರ—ನನಗೂ ಕೊಂಚ ಕೊಂಚ ಸಂಶಯವಿದ್ದಿತು. ಅದನ್ನು ತಾವು ಕಂಡಬಗೆ ಹೇಗೆ ?

ಅರಿಂದಮನು ತಾನು ಹಿಂದಿನ ದಿನದಲ್ಲಿ ಮಾಡಿದ ಸಾಹಸವೆಲ್ಲವನ್ನೂ ಆದ್ಯೋಪಾಂತವಾಗಿ ತಿಳಿಸಿದನು.

ಅಮರನು ಅದೆಲ್ಲವನ್ನೂ ಕೇಳಿ—ತಮ್ಮ ಮಾತು ಕೇಳಿದಮೇಲೆ, ರಾಮರತ್ನನೇ ನಮ್ಮ ಸರ್ವನಾಶಕ್ಕೆ ಕಾರಣನೆಂದು ತೋರುತ್ತಿರುವುದು, ಎಂದನು.

ಅರಿಂದಮ—ಅದರಲ್ಲಿ ಆವವಿಧವಾದ ಸಂದೇಹವೂ ಇಲ್ಲ, ಆದರೆ ರಾಮರತ್ನನು ದೋಷಿಯೆಂಬುದಕ್ಕೂ, ಶರಚ್ಚಂದ್ರನು ನಿರ್ದೋಷಿಯೆಂಬುದಕ್ಕೂ ಯಾವ ಪ್ರಮಾಣವೂ ಸಿಕ್ಕಿಲ್ಲ. ನಾನು ಪ್ರಮಾಣವನ್ನು ಹುಡುಕುವುದಕ್ಕೆ ಯತ್ನಮಾಡಿದಷ್ಟೂ, ದೋಷವು ಶರಚ್ಚಂದ್ರನಮೇಲೆಯೇ ಬರೆಗುವುದು. ಒಂದೊಂದುವೇಳೆ ಶರಚ್ಚಂದ್ರನೇ ಅಪರಾಧಿಯೆಂದೂ, ಒಂದೊಂದುವೇಳೆ ಈ ಮೂರುಜನರೂ ಸೇರಿ ಅಪರಾಧಿಗಳಾಗಿರುವರೆಂದೂ, ಒಂದೊಂದುವೇಳೆ ಅಪರಾಧಿಯಾದ ರಾಮರತ್ನನಿಗೆ ಇವರಿಬ್ಬರೂ ಹಿಮ್ಮತ್ತಾಗಿರಬಹುದೆಂದೂ, ಒಂದೊಂದುವೇಳೆ ಜೀಮೂತನು ರಾಮರತ್ನ ಶರಚ್ಚಂದ್ರರ ಸಹಾಯದಿಂದ ಇಂತಹ ಮೋಸದಕಾರ್ಯದಲ್ಲಿ ಪ್ರವೃತ್ತನಾಗಿದ್ದು, ತನ್ನಮೇಲೆ ತಪ್ಪು ಬರಬಾರದೆಂದು ಯುಕ್ತಿಯಿಂದ ಅಪರಾಧವನ್ನು ಇತರರಮೇಲೆ ಬರಿಸಲು ಯತ್ನಮಾಡುತ್ತಿರುವನೆಂದೂ ಕಂಡುಬರುವುದು.

ಅಮರ—ಈ ಮೂವರೂ ಸೇರಿ ಕೆಲಸಮಾಡಿರುವುದಾದರೆ, ಇತರರು ಶರತ್ತಿನಮೇಲೆ ದೋಷವನ್ನು ಹಾಕಲು ಕಾರಣವೇನು ?

ಅರಿಂದಮ—ಈಗ ಯಾವುದೂ ನಿಶ್ಚಯವಾಗಿಲ್ಲ. ಸಿದ್ಧಾಂತವು ಇನ್ನೂ ಪಕ್ವಾವಸ್ಥೆಗೆ ಬಂದಿಲ್ಲ. ಜೀಮೂತನು ನಮ್ಮೆಲ್ಲರಿಗಿಂತಲೂ ಬುದ್ಧಿಶಾಲಿಯೆಂದು ತೋರುವುದು. ಕೆಟ್ಟಕೆಲಸಮಾಡಿದರೂ, ತಪ್ಪನ್ನು ಯಾರುತಾನೇ ಒಪ್ಪುವರು ! ಸಾಧ್ಯವಾದಷ್ಟುಮಟ್ಟಿಗೂ ಇತರರನ್ನು ತಪ್ಪಿಗೆ ಗುರಿಮಾಡಿ, ತಾನು ತಪ್ಪಿಸಿಕೊಳ್ಳಬೇಕೆಂಬುದೇ ಮಾನವನ ಸ್ವಭಾವ. ಈಗ ತಪ್ಪಿಸಿಕೊಳ್ಳುವುದಕ್ಕೆ ಸರಿಯಾದ ಕಾಲವೂ ಬಂದೊದಗಿತು. ಶರಚ್ಚಂದ್ರನು ಊರುಬಿಟ್ಟು ಹೊರಟನು. ಇದೇ ಸಮಯವೆಂದು ಅವರಿಬ್ಬರೂ ತಪ್ಪಿಸಿದ ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನಮಾಡುತ್ತಿರುವರು.

ಅಮರ—(ಯೋಚಿಸಿ) ಹಾಗಾದರ ವ್ಯಾಪಾರವು ಗುರುತರವಾಗಿ ಪರಿಣಮಿಸುವುದು.

ಅರಿಂದಮ—ನಿಜ; ಆದರೆ ನಾನು ಈಗ ಹೇಳುವುದೆಲ್ಲವೂ ಅನುಮಾನಮಾತ್ರದಿಂದ ಸಾಧಿಕವಾಗಿರುವುದು. ನನ್ನ ಪ್ರಯತ್ನದಲ್ಲಿ ಇಲ್ಲಿನವರೆಗೂ, ಶರಚ್ಚಂದ್ರನು ಸರ್ವಪ್ರಕಾರದಲ್ಲಿಯೂ ನಿರ್ದೋಷಿಯೆಂದು ಗೊತ್ತಾಗುತ್ತಿರುವುದು.

ಅಮರ—(ಸಂತೋಷಭರಿತನಾಗಿ) ತಮಗೆ ಸರ್ವತ್ರ ಜಯವಾಗಲಿ. ಲೋಕದಲ್ಲಿ ಖ್ಯಾತಿಯೂ ಎಲ್ಲೆಲ್ಲಿಯೂ ಹರಡಲಿ, ದೇವರು ನಿಮಗೆ ದೀರ್ಘಾಯುರಾರೋಗ್ಯವನ್ನು ಕೊಟ್ಟು ಕಾಪಾಡಲಿ.

ಅರಿಂದಮ—ಈಗಲೇ ತಾವು ಆಶೀರ್ವಾದ ಮಾಡಬೇಡಿರಿ. ನಾನೂ ಮನುಷ್ಯಮಾತ್ರದವನೇ ಅಹುದು. ನನ್ನ ಊಹೆಯೆಲ್ಲವೂ ನಿಜವೆಂದು ನಂಬಲಾಗುವುದಿಲ್ಲ. ನಾನು ದೇವರಮೇಲೆ ಭಾರಹಾಕಿ ಕೆಲಸ ಮಾಡುವೆನು. ಬಳಿಕ ದೈವಯತ್ನದಲ್ಲಿದ್ದಂತಾಗಲಿ. ಪ್ರಕೃತ

ತನ್ನ ಮಗಳೊಡನೆ ಮಾತನಾಡಿ ಕೆಲವಂಶಗಳನ್ನು ಸ್ಥಿರಪಡಿಸಿಕೊಳ್ಳುವೆನು.

ಇಷ್ಟುಮಾತುಗಳಾದಮೇಲೆ, ಅಮರನು ಅರಿಂದಮನನ್ನು ತನ್ನ ಜತೆಯಲ್ಲಿ ಕರೆದುಕೊಂಡು ಮನೆಯೊಳಗೆ ಪ್ರವೇಶಮಾಡಿದನು. ದಾರಿಯಲ್ಲಿ ಇವರಿಬ್ಬರಿಗೂ ರಾಮರತ್ನನ ಭೇಟಿಯಾಯಿತು. ರಾಮರತ್ನನು ಅಮರನಿಗೆ ಪ್ರಾತಃಪ್ರಣಾಮವನ್ನು ಸಲ್ಲಿಸಿ ತನ್ನ ಕೆಲಸಕ್ಕೆ ಹೊರಟನು. ಅರಿಂದಮ ರಾಮರತ್ನರು ಪರಸ್ಪರ ನೋಡಲು ಸಾಹಸಪರರಾಗಲಿಲ್ಲ. ಅದರ ಕಾರಣವೇನೋ ನಮಗೆ ತಿಳಿಯದು.

ಅಮರನು ಅರಿಂದಮನನ್ನು ಕರೆದುಕೊಂಡು ಮನೆಯೊಳಗೆ ಪ್ರವೇಶಮಾಡಿ ತನ್ನ ಮಗಳನ್ನು ಕೂಗಿದನು. ಆಕೆಯು ತಂದೆಯ ಇದಿರಿಗೆ ಬಂದು ನಿಲ್ಲಲು, ಅರಿಂದಮನು ಆಕೆಯ ಮುಖಮಂಡಲವು ಮ್ಲಾನವಾಗಿದ್ದುದನ್ನು ನೋಡಿ ಬಹಳವಾಗಿ ವ್ಯಸನಪಟ್ಟನು.

ಅಮರನು ಮಗಳನ್ನು ನೋಡಿ—ಮಗು! ಈ ದೊಡ್ಡಮನುಷ್ಯರು ಅರಿಂದಮ ಮಹಾಶಯರು. ಇವರು ಶರಚ್ಚಂದ್ರನು ನಿರ್ದೋಷಿಯೆಂಬುದನ್ನು ಸಾಧಿಸುವುದಕ್ಕಾಗಿ ಯತ್ನಮಾಡುತ್ತಿರುವರು. ಇವರು ನಿನ್ನಿಂದ ಕೆಲವು ವಿಷಯಗಳನ್ನು ತಿಳಿಯಲೋಸುಗ ಇಲ್ಲಿಗೆ ದಯಮಾಡಿರುವರು. ಇವರು ಕೇಳುವ ಪ್ರಶ್ನೆಗಳಿಗೆಲ್ಲ ನೀನು ಸಂಕೋಚವಿಲ್ಲದೆ ಉತ್ತರವನ್ನು ಕೊಡು. ಏತಕೆಂದರೆ—ಶರಚ್ಚಂದ್ರನು ಅಪರಾಧಿಯಲ್ಲವೆಂದು ಸಾಧಿಸುವುದರಲ್ಲಿ ಇವರು ತಕ್ಕ ಪ್ರಮಾಣಗಳನ್ನು ಸಂಗ್ರಹಮಾಡುವುದರಲ್ಲಿರುವರು, ಎಂದು ಹೇಳಿ ಅಲ್ಲಿಂದ ಬೇರೊಂದು ಸ್ಥಳಕ್ಕೆ ಹೊರಟುಹೋದನು.

## ಮೂರನೆಯ ಅಧ್ಯಾಯ.

ಅಮರನು ಹೊರಟುಹೋದಮೇಲೆ, ಅರಿಂದಮನು ಕೊಂಚಹೊತ್ತು ಇಂದಿರೆಯನ್ನು ದೃಷ್ಟಿಹಾಕದೆ ನೋಡಿದನು. ಪತ್ತೇದಾರ

ರಲ್ಲಿ ಇತರವಿಧವಾದ ಗುಣಗಳಿರಲಿ, ಇಲ್ಲದಿರಲಿ, ಪರರ ಮುಖಭಾವ ದಿಂದಲೇ ಅವರ ಹೃದಯಸ್ಥವಾದ ಅಭಿಪ್ರಾಯಗಳನ್ನರಿವ ಅದ್ಭುತ ವಾದ ಶಕ್ತಿಯು ಸದಾ ಜಾಗರಿಕವಾಗಿರುವುದು. ಅರಿಂದಮನಾದ ರೋ ಪರರ ಮನೋಭಿಪ್ರಾಯಗಳನ್ನರಿವುದರಲ್ಲಿ ಅದ್ವಿತೀಯ ಪಾಡಿ ತನೆನಿಸಿದ್ದನು. ಅವನು ಇಂದಿರೆಯ ಹೃದಯವನ್ನು ಬಂದು ವಿಧವಲ್ಲಿ ಅರಿತವನಾಗಿ, ಆಕೆಯನ್ನುದ್ದೇಶಮಾಡಿ—ಅಮ್ಮ, ಈಗ ನಾನು ಗುರು ತರವಾದ ಕಾರ್ಯದಲ್ಲಿ ಪ್ರವೃತ್ತನಾಗಿ ನಿನ್ನನ್ನು ನೋಡಲು ಬಂದಿರು ವೆನು. ನಿನಗೆ ತಿಳಿದಂಶವನ್ನು ವಿಶದವಾಗಿ ತಿಳಿಸಬೇಕು. ನಾನು ಶರಚ್ಚಂದ್ರನನ್ನು ನಿರ್ದೋಷಿಯನ್ನಾಗಿ ಮಾಡಲು ಕೆಲಸಮಾಡುತ್ತಿ ರುವೆನು. ಈ ವಿಷಯದಲ್ಲಿ ನೀನು ಯೋಚಿಸಬೇಕಾದ್ದಿಲ್ಲ. ನಾನು ಕೇಳುವ ಒಂದೆರಡು ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ನೀನು ಕೊಡಬೇಕು, ಎಂದನು.

ಈ ಮಾತನ್ನು ಕೇಳಿದ ಕೂಡಲೆ ಇಂದಿರೆಯು ಸಂತೋಷಭರಿ ತಳಾಗಿ—ತಾವು ಕೇಳುವ ಪ್ರಶ್ನೆಗಳಿಗೆಲ್ಲ ತಿಳಿದಮಟ್ಟಿಗೂ ಸರಿಯಾದ ಉತ್ತರವನ್ನೇ ಕೊಡುವೆನು, ಎಂದಳು.

ಅರಿಂದಮ—ಶರಚ್ಚಂದ್ರನಿಗೆ ನಿನ್ನನ್ನು ಕೊಟ್ಟು ವಿವಾಹವಾ ಗಬೇಕೆಂದು ನಿಶ್ಚಯಿಸಿ ಎಷ್ಟುದಿನಗಳಾದುವು ?

ಇಂದಿರಾ—ಸುಮಾರು ಒಂದು ವರ್ಷವಾಗಿರಬಹುದು.

ಅರಿಂದಮ—ಶರಚ್ಚಂದ್ರನು ಪದೇ ಪದೇ ನಿನ್ನನ್ನು ನೋಡು ತ್ತಿದ್ದನೋ ?

ಇಂದಿರಾ—ಪ್ರಾಯಃ ಪ್ರತಿನಿತ್ಯವೂ ನೋಡುತಿದ್ದನು.

ಅರಿಂದಮ—ಪ್ರಾಯಃ ಅಂದರೆ ?

ಇಂದಿರಾ—ನನ್ನ ಗುರುವಿನಲ್ಲಿ ಆತನೂ ವಿದ್ಯಾಭ್ಯಾಸಂಗ ಮಾ ಡುತಿದ್ದನು. ಒಂದೊಂದು ದಿನ ಮಾತ್ರ ಆತನು ಓದುವುದಕ್ಕೆ ಬರು

ತ್ತಿರಲಿಲ್ಲ. ಅಂದು ನಾನು ಆತನನ್ನು ನೋಡುವ ಸಂಭವವಿರುತ್ತಿರಲಿಲ್ಲ.

ಅರಿಂದಮ—ಆತನು ಬಾರದಿರುವುದಕ್ಕೆ ಕಾರಣ ನಿನಗೆ ಗೊತ್ತಿಲ್ಲದಿರಬಹುದು.

ಇಂದಿರಾ—ಗೊತ್ತಿಲ್ಲದೇ ಏನು? ಆತನು ಕಾರ್ಯಗೌರವದಿಂದ ಒಂದೊಂದು ದಿನ ಓದುವುದಕ್ಕೆ ಬರುತ್ತಿರಲಿಲ್ಲ.

ಅರಿಂದಮ—ಆತನು ರಾತ್ರಿಯ ವೇಳೆಯಲ್ಲಿ ಹೊರಗೆ ಎಲ್ಲಿಯಾದರೂ ಹೋಗಿ, ಬಹಳ ಹೊತ್ತಿನ ಮೇಲೆ ಮರಳಿ ಮನೆಗೆ ಬರುತ್ತಿದ್ದನೋ?

ಇಂದಿರಾ—ಆತನು ರಾತ್ರಿಯ ವೇಳೆಯಲ್ಲಿ ಹೊರಗೆ ಹೊರಟವನೇ ಅಲ್ಲ, ಇದನ್ನು ನಾನು ಖಂಡಿತವಾಗಿಯೂ ಬಲ್ಲೆ.

ಅರಿಂದಮ—ಒಳ್ಳೆಯದು. ನಿನ್ನ ಮಾತನ್ನು ಕೇಳಿದರೆ, ಶರಚ್ಚಂದ್ರನು ನಿನ್ನ ತಂದೆಯ ವಿಷಯದಲ್ಲಿ ವಿಶ್ವಾಸಘಾತುಕನಾಗಲು ಕಾರಣವೇನೂ ಇರುವುದಿಲ್ಲವೆಂದು ಗೊತ್ತಾಗುವುದು. ಪ್ರಕೃತದಲ್ಲಿ ಒಂದು ಲಕ್ಷರೂಪಾಯಿಗಳು ಗೈರ್‌ವಿಲೆಯಾದ್ದರಿಂದಲೂ, ಶರಚ್ಚಂದ್ರನು ಅದೇ ಕಾಲದಲ್ಲಿ ಹಠಾತ್ತಾಗಿ ಪರಸ್ಥಳಕ್ಕೆ ತೆರಳಿದ್ದರಿಂದಲೂ, ಸಂಶಯವು ಆತನ ಮೇಲೆಯೇ ವಾಲುವುದು. ಇದೊಂದು ಹೊರತಾಗಿ ಮತ್ತಾವ ದೋಷವೂ ಆತನಿಗೆ ಲಗತ್ತಾಗುವುದಿಲ್ಲ.

ಇಂದಿರಾ—ಆತನು ಎಲ್ಲಿಗೆ ಹೋಗಿರುವನು? ಇದನ್ನು ತಾವು ಕಂಡುಹಿಡಿದಿರಾ?

ಅರಿಂದಮ—ಇಲ್ಲ.

ಇಂದಿರಾ—ಯಾರೋ ದ್ರೋಹಿಜನಗಳು ಈ ದುಷ್ಕೃತ್ತಿಯನ್ನು ಮಾಡಿ, ಸಾಧುವಾದ ಶರತ್ತಿನ ಮೇಲೆ ದೋಷವನ್ನು ಆರೋಪಿಸಬೇಕೆಂದೆಣಿಸಿರುವರೆಂದು ನನಗೆ ತೋರುವುದು.

ಅರಿಂದಮ—ನನಗೂ ಹಾಗೆಯೇ ತೋರುವುದು.

ಇಂದಿರಾ—ತಮಗೆ ದೇವರು ಶ್ರೇಯಃಪರಂಪರೆಗಳನ್ನು ದಯಪಾಲಿಸಲಿ. ಈಗ ಶರಚ್ಚಂದ್ರನು ಎಲ್ಲಿರುವನೆಂಬುದು ಅವಶ್ಯವಾಗಿ ತಿಳಿಯಬೇಕು. ತಂತಿಯ ವರ್ತಮಾನವೊಂದನ್ನೇ ಆಧಾರವಾಗಿಟ್ಟುಕೊಂಡು ನಂಬುವುದಕ್ಕಾಗುವುದಿಲ್ಲ. ಆತನ ಹೆಸರಿನಲ್ಲಿ ಈ ಮೋಸಗಾರರು ತಂತಿಯ ವರ್ತಮಾನವನ್ನು ಕಳುಹಿಸಿದ್ದರೂ ಕಳುಹಿಸಿರಬಹುದು.

ಅರಿಂದಮ—ನಾನು ಈ ವಿಷಯದಲ್ಲಿ ವಿಚಾರಮಾಡಿ ನೋಡುವೆನು.

ಅರಿಂದಮನು ಈ ರೀತಿಯಲ್ಲಿ ಇಂದಿರೆಯೊಡನೆ ಮಾತನಾಡಿ, ಆಕೆಯ ಅಪ್ಪಣೆಯನ್ನು ತೆಗೆದುಕೊಂಡು ಅಲ್ಲಿಂದ ಹೊರಗೆ ಹೊರಟು ಹೋದನು.

---

## ನಾಲ್ಕನೆಯ ಅಧ್ಯಾಯ.

ಇಂದಿರೆಯ ಅಪ್ಪಣೆಯನ್ನು ತೆಗೆದುಕೊಂಡು, ಅರಿಂದಮನು ತನ್ನ ಮನೆಯ ಕಡೆಗೆ ತೆರಳಿದನು. ಸಾಯಂಕಾಲವಾಗುವವರೆಗೂ ಮನೆಯಲ್ಲಿಯೇ ಇದ್ದು, ಬಳಿಕ ಅರಿಂದಮನು ವೃದ್ಧನ ವೇಷವನ್ನು ತಾಳಿ ಅಮರನಾಥನ ಮನೆಯ ಕಡೆಗೆ ಹೊರಟನು. ಅಲ್ಲಿ ರಾಮರತ್ನನು ತನ್ನ ಕೆಲಸವನ್ನು ತೀರಿಸಿಕೊಂಡು ಹೊರಗೆ ಹೊರಡುವುದರಲ್ಲಿದ್ದನು. ಅರಿಂದಮನು ಆತನನ್ನು ಹಿಂಬಾಲಿಸಿ ಹೋಗುವುದರಲ್ಲಿ ಗುಣವಿದೆಯೆಂದು ತಿಳಿದು, ರಾಮರತ್ನನ ಹಿಂದೆ ಹಿಂದೆಯೇ ಹೊರಟನು.

ರಾಮರತ್ನನು ಸಾಯಂಕಾಲದ ಹೊಬ್ಬಿನಲ್ಲಿ ದೊಡ್ಡಬೀದಿಯಲ್ಲಿ ಹೊರಟು, ಅಲ್ಲಿಂದ ಶೀರ್ನಾಬಿಯ ಗಲ್ಲಿಯೊಳಗೆ ಪ್ರವೇಶ

ಮಾಡಿ, ಅಲ್ಲಿ ಒಂದು ಸಾಮಾನ್ಯವಾದ ಮುದುಕಿಯು ಮನೆಯೊಳಗೆ ಪ್ರವೇಶಮಾಡಿದನು. ಅರಿಂದಮನೂ ಅಲ್ಲಿಗೆ ಬಂದು ಸೇರಿದನು. ಗಲ್ಲಿಯಲ್ಲಿ ದುರ್ವಾಸನೆಯು ತುಂಬಿ ತುಳುಕಾಡುತ್ತಿದ್ದಿತು. ದಾರಿಯುದ್ದಕ್ಕೂ ಕೊಚ್ಚೆ ರೊಚ್ಚೆಗಳು ದಾರಿಹೋಕರಿಗೆ ಅಸಹ್ಯವನ್ನುಂಟುಮಾಡುತ್ತಿದ್ದುವು. ಈ ತೊಂದರೆಗಳೆಲ್ಲವನ್ನೂ ದೂರಮಾಡಿ, ಅರಿಂದಮನು ಆ ಮನೆಯೊಳಗೆ ಗೋಪ್ಯವಾಗಿ ಪ್ರವೇಶಮಾಡಿದನು. ನೋಡಲು ನೋಡಲು ಆ ಮನೆಯಲ್ಲಿ ಯಾರೂ ವಾಸವಾಗಿದ್ದಂತೆ ಕಾಣುತ್ತಿರಲಿಲ್ಲ. ಅರಿಂದಮನು ಕೊಂಚಹೊತ್ತು ಹುಡುಕಿನೋಡಿದನು. ಕಣ್ಣಿಗೆ ಯಾರೂ ಬೀಳದಿರಲು, ಆತನು ಮಹಡಿಯ ಮೇಲೆ ಹತ್ತಿದನು. ಅಲ್ಲಿ ಬಹಳ ಹೊತ್ತು ಹುಡುಕಿದ ಮೇಲೆ, ಒಂದು ಕೋಣೆಯೊಳಗೆ ಒಂದು ದೀಪವು ಉರಿಯುತ್ತಿದ್ದಿತು. ಅಲ್ಲಿ ಯಾರಾದರೂ ಇರಬಹುದೆಂದು, ಅರಿಂದಮನು ಕಿಟಿಕಿಯಿಂದ ಇಣಿಕಿ ನೋಡಿದನು. ಅಸಾಧ್ಯ ಜನಮನೋಹರವಾದ ರೂಪವುಳ್ಳ ತ್ರಿಪುರಸುಂದರಿಯೊಬ್ಬಳು ಅಲ್ಲಿ ಕುಳಿತಿದ್ದುದನ್ನು ನೋಡಿ ಅರಿಂದಮನು ಬಾಗಿಲನ್ನು ತಟ್ಟಿದನು. ಆ ಹೆಂಗಸು ಬೇಗನೆ ಬಂದು ಬಾಗಿಲನ್ನು ತೆರೆದಳು. ಅರಿಂದಮನು ಆಕೆಯನ್ನು ಕಣ್ಣುತುಂಬ ನೋಡಿ, ' ಇಂತಹ ಜಘನ್ಯವಾದ ಸ್ಥಳದಲ್ಲಿಯೂ ಅಮೂಲ್ಯವಾದ ರತ್ನವು ಉದ್ಭವಿಸಿರುವುದುಂಟೆ ! ದೈವಮಾಯೆಯನ್ನು ಕಂಡವರಾರು ! ಎಂದು ತನ್ನಲ್ಲಿ ತಾನು ಯೋಚಿಸುತ್ತಾ ರೆಪ್ಪೆಹಾಕದೆ ಆ ಹೆಂಗಸನ್ನು ಒಂದು ಕ್ಷಣಕಾಲನೋಡಿದನು. ಆ ಹೆಂಗಸು ವಿಸ್ಮಿತಳಾಗಿ ಆಗಂತುಕನನ್ನು ಕುರಿತು ಯಾವ ಮಾತನ್ನೂ ಆಡಲು ಸಾಹಸಿಯಾಗಲಿಲ್ಲ. ಇದನ್ನು ತಿಳಿದ ಅರಿಂದಮನು ತಾನೇ ಆಕೆಯನ್ನು ಕುರಿತು—ನನ್ನನ್ನು ನೋಡಿ ನೀನು ಹೆದರಬೇಕಾದ್ದಿಲ್ಲ, ಎಂದನು.

ಆ ಹೆಂಗಸು ಈ ಮಾತನ್ನು ಕೇಳಿ—ತನ್ನನ್ನು ನೋಡಿ ಹೆದರಲು ಕಾರಣವೇನಿರುವುದು ? ಎಂದು ಪ್ರತ್ಯುತ್ತರ ಕೊಟ್ಟಳು.

ಅರಿಂದಮನು ಆಕೆಯ ಧೈರ್ಯವನ್ನು ನೋಡಿ ಆಶ್ಚರ್ಯಗೊಂಡವನಾಗಿ 'ಅವರು ಇಲ್ಲಿ ಇಲ್ಲವೆಂದು ಕಾಣುವುದು. ನಾನೇನಾದರೂ ಭ್ರಾಂತಿ ಪಟ್ಟೆನೆ!' ಎಂದು ಗಟ್ಟಿಯಾಗಿ ತನ್ನಲ್ಲಿ ತಾನು ಮಾತನಾಡಿಕೊಂಡನು.

ಇದನ್ನು ಕೇಳಿದ ಆ ಹೆಂಗಸು—ತಾವು ಭ್ರಾಂತರಾಗಿರಬೇಕು. ತಾವು ಯಾರು? ತಾವು ಯಾರನ್ನು ಹುಡುಕಿಕೊಂಡು ಇಲ್ಲಿಗೆ ಬಂದಿರುವಿರಿ? ಎಂದು ಕೇಳಿದಳು.

ಅರಿಂದಮ—ನಾನು ಇಲ್ಲಿಗೆ ಹೊಸಬನು. ಇಲ್ಲಿ ನನಗೆ ಯಾರೂ ಪರಿಚಿತರಿಲ್ಲ. ನನ್ನ ಸೋದರಳಿಯನೊಬ್ಬನು ಇಲ್ಲಿರುವುದಾಗಿ ಕೇಳಿ ನಾನಿಲ್ಲಿಗೆ ಬಂದೆನು.

ಹೆಂಗಸು—ಆತನ ಹೆಸರೇನು?

ಅರಿಂದಮ—ರಾಮರತ್ನ.

ಹೆಂಗಸು—(ವಿಸ್ಮಿತಳಾಗಿ) ಏನು? ರಾಮರತ್ನನೇ?

ಅರಿಂದಮನು ಆಕೆಯ ಬಾಡಿದ ಮುಖವನ್ನೂ, ವಿಸ್ಮಯದಿಂದ ವಿಕಸಿತವಾದ ಕಣ್ಣುಗಳನ್ನೂ, ಕೊಂಚಹೆದರಿದ ಭಾವವನ್ನೂ ನೋಡಿ—ಮಗು, ರಾಮರತ್ನನ ಹೆಸರನ್ನು ಕೇಳಿದ ಕೂಡಲೆ ನೀನು ಹೆದರಲು ಕಾರಣವೇನು? ಅವನು ನಿನಗೇನಾಗಬೇಕು? ಎಂದನು.

ಹೆಂಗಸು—ಆತನು ನನಗೇನೂ ಆಗಬೇಕಾದ್ದಿಲ್ಲ. ಯಾರೋ ಸುಳ್ಳು ಹೇಳಿ, ತಮ್ಮನ್ನು ಇಲ್ಲಿಗೆ ಕಳುಹಿಸಿರುವರು. ಇಲ್ಲಿ ರಾಮರತ್ನನೆಂಬುವನೇ ಇಲ್ಲ.

ಈ ರೀತಿಯಲ್ಲಿ ಆ ಹೆಂಗಸು ಆಗಂತುಕನ ಕಣ್ಣುಗಳಲ್ಲಿ ಮಣ್ಣನ್ನು ಎರಚುವುದಕ್ಕಾಗಿ ಸುಳ್ಳನ್ನು ಹೇಳಿದಳು. ಎಂಥೆಂಥಹ ಘಟಾನುಘಟಿಗಳ ಹೃದಯವನ್ನೂ ಲೀಲಾಜಾಲವಾಗಿ ಅರಿಯಬಲ್ಲವನಾದ ಅರಿಂದಮನಿಗೆ, ಪ್ರಪಂಚವನ್ನರಿಯದ ಬಾಲಿಕೆಯ ಹೃದಯವ

ನ್ನರಿವುದು ಅಸಾಧ್ಯವಾಗಿಲ್ಲವಾದರೂ, ಆತನು ಅಜ್ಞಾನಾತೆ ತೋರ್ಪ ಡಿಸಿಕೊಳ್ಳುತ್ತಾ—ಇದ್ದರೂ ಇರಬಹುದು ; ಮುದುಕನಾದ ನನಗೆ ಅರುಳು ಮರುಳು ಸಹಜವಾದುದೇ, ಆದರೆ ಪ್ರಕೃತದಲ್ಲಿ ನನಗೆ ಭ್ರಾಂತಿಯುಂಟಾಗಿಲ್ಲವೆಂದು ನಂಬುಗೆಯುಂಟು. ರಾಮರತ್ನನು ಇಲ್ಲಿಗಾಗಲಿ, ಇದರ ಪಕ್ಕದ ಮನೆಗಾಗಲಿ ಪದೇಪದೇ ಬರುತ್ತಿ ರುತ್ತಾನೆಂದು ನನಗೆ ಅನುಭವಬಾರರು ತಿಳಿಸಿರುವರು. ನಾನು ಸು ಳ್ಳಾದರೂ ಅವರು ಸುಳ್ಳೇ ? ನಿನ್ನ ಮುಖವನ್ನು ನೋಡಿದರೆ, ನಿನಗೆ ರಾಮರತ್ನನ ವಿಷಯವು ಚೆನ್ನಾಗಿಯೂ ಗೊತ್ತಿರುವುದೆಂದು ತೋರು ವುದು. ಅನ್ಯಾಯವಾಗಿ ಮುದುಕನಾದ ನನ್ನನ್ನು ಏತಕೆ ಸಂಕಟ ಪಡಿಸುವೆ ? ಆತನ ವಿಷಯದಲ್ಲಿ ನಿನಗೆ ತಿಳಿದಂಶವನ್ನು ನನಗೆ ತಿಳಿಸ ಬಾರದೇತಕೆ ? ಹೇಳು ಈಗಲಾದರೂ ಹೇಳು, ರಾಮರತ್ನನೆಲ್ಲಿ ? ನನಗೆ ವೃಥಾ ಮೋಸಮಾಡುವುದರಿಂದ ನಿನಗೆ ಬಂದ ಭಾಗ್ಯವೇನು? ಹೆಂಗಸರಿಗೆ ಹುಟ್ಟುತಬಂದ ಚಾಲಾಕನ್ನು ದೂರತಳ್ಳಿ ನಿಜವನ್ನು ಹೇಳು, ಎಂದು ಕೇಳಲಾಗಿ, ಹೆಂಗಸು ಕೋಪಗೊಂಡು—ಸ್ವಾಮಿ, ತಾವು ಈರೀತಿಯಲ್ಲಿ ಮಾತನಾಡಲು ಕಾರಣವೇನು ? ಎಂದಳು.

ಅರಿಂದಮ—ಮುದುಕರನ್ನು ಕಂಡರೆ ಹುಡುಗರಿಗೆ ಹಾಸ್ಯ ಮಾಡುವುದು ಸ್ವಭಾವವಾದ್ದರಿಂದ, ನಾನು ಹೀಗೆಲ್ಲ ಕೇಳಬೇಕಾ ಯಿತು.

ಹೆಂಗಸು—ನಾನಲ್ಲವೇ ನಿಮಗೆ ಮೋಸಮಾಡುವಳು ? ನೀವು ಅಸಭ್ಯರಾದ ಮನುಷ್ಯರಂತೆ ಕಾಣಿಸುವಿರಿ. ನನ್ನ ಮನೆಗೆ ಬಂದು ಮನಬಂದಂತೆ ಮಾತನಾಡಿ ನನ್ನನ್ನು ಅಪಮಾನಪಡಿಸುವಿರಿ. ನೀವೀಗ ನಮ್ಮ ಮನೆಯನ್ನು ಬಿಟ್ಟು ಹೊರಟುಹೋಗಬಾರದೇತಕೆ ?

ಅರಿಂದಮ—ರಾಮರತ್ನನು ಇಲ್ಲಿರುವನೇ ಇಲ್ಲವೇ ನನಗೆ ಮೊದಲು ಹೇಳು. ನಿನ್ನ ಮಾತುಗಳಲ್ಲಿ ನನಗೆ ವಿಶ್ವಾಸಹುಟ್ಟಲಿಲ್ಲ.

ಹೆಂಗಸು—ಅದೇನು ನಾನು ಮಾಡಿದ ಅಪರಾಧ? ನೀವು ನನ್ನಲ್ಲಿ ಸಂದೇಹಪಡಲು ಕಾರಣವೇನು ?

ಅರಿಂದಮ—ಕಾರಣವೇ ? ರಾಮರತ್ನನು ಇಲ್ಲಿ ಪ್ರವೇಶ ಮಾಡಿ ಇನ್ನೂ ಹತ್ತುನಿಮಿಷಗಳಾಗಲಿಲ್ಲ. ಅವನು ಇಲ್ಲಿಗೆ ಬಂದುದನ್ನು ನಾನು ಕಣ್ಣಾರೆನೋಡಿದೆನು. ಹೀಗಿರುವಲ್ಲಿ ನೀನು ಇಲ್ಲವೆಂದು ಸಾಧಿಸುವೆ. ಇದಕ್ಕಿಂತಲೂ ಬೇರೆ ಕಾರಣವೇನು ?

ಪತ್ತೇದಾರನ ಬಾಯಿಂದ ಈ ಮಾತುಹೊರಟಮಾತ್ರದಿಂದಲೇ ಹೆಂಗಸು ಸ್ತಂಭಿತಳಾಗಿ, ಮುಂದೆ ಯಾವ ಉತ್ತರವನ್ನೂ ಕೊಡಲಾರದೇ ಹೋದಳು. ತನ್ನ ಮಾತು ಸುಳ್ಳಾಯಿತೆಂದು ನಾಚಿಕೆಯಿಂದ ಹೆಂಗಸು ಬಾಗಿಲನ್ನು ಹಾಕಿಕೊಳ್ಳುವ ಯತ್ನಮಾಡುತ್ತಿರಲು, ಅರಿಂದಮನು ನಾಲ್ಕಾರು ಹೆಜ್ಜೆ ಮುಂದರಿದು—ಈ ಮನುಕನನ್ನು ಸಾಧಾರಣವೆಂದು ತಿಳಿಯಬೇಡ. ನಾನು ನಿನ್ನ ಅಭಿಪ್ರಾಯವನ್ನು ತಿಳಿಯಲೋಸುಗ ಇಲ್ಲಿಗೆ ಬಂದಿರುವೆನು, ಎಂದು ನುಡಿದನು.

ಹೆಂಗಸು—(ಸಿಡುಕಾಯಳಾಗಿ) ತಾವು ಯಾರೆಂಬುದನ್ನು ಮೊದಲು ತಿಳಿಸೋಣಾಗಲಿ. ತಮ್ಮ ನಡೆನುಡಿಗಳನ್ನು ನೋಡಿದರೆ ನನಗೆ ಸಂಶಯವಾಗಿರುವುದು.

ಅರಿಂದಮ—(ನಸುನಕ್ಕು) ನಿನಗೆ ಸಂಶಯವಾಗದೇ ಏನು ? ನನ್ನಿಂದ ನಿನಗೆ ಯಾವ ಅನಿಷ್ಟವೂ ಆಗುವುದಿಲ್ಲ. ನನ್ನನ್ನು ನೋಡಿ ನೀನು ಹೆದರಬೇಕಾದುದೂ ಇಲ್ಲ. ನಾನೊಬ್ಬ ಸರ್ಕಾರದ ಪತ್ತೇದಾರನು. ಯಾವುದೋ ಒಂದು ಕೆಲಸದಲ್ಲಿ ನಿಯುಕ್ತನಾಗಿ, ಕೆಲವಂಶಗಳನ್ನು ತಿಳಿಯಲೋಸುಗ ಇಲ್ಲಿಗೆ ಬಂದಿರುವೆನು.

ಹೆಂಗಸು—ಹಾಗಾದರೆ, ಅಸಹಾಯಳಾಗಿರುವ ಒಬ್ಬ ಹೆಂಗಸಿನ ಮನೆಗೆ ನಿಷ್ಕಾರಣವಾಗಿ ನುಗ್ಗಿ ಹೀಗೆ ಅಪಮಾನ ಪಡಿಸಬೇಕೆಂದು ನಿಮಗೆ ಅಧಿಕಾರಕೊಟ್ಟವರಾರು ?

ಅರಿಂದಮ—ನಿನಗೆ ಅಪಮಾನ ಮಾಡಲು ನನಗೆ ಯಾವ ಅಧಿಕಾರವೂ ಇಲ್ಲವೆಂಬುದೇನೋ ನಿಜ. ರಾಮರತ್ನನು ಇಲ್ಲಿರುವನೋ ಇಲ್ಲವೋ ಎಂಬುದನ್ನು ನಾನೂ ತಿಳಿಯಬೇಕಾಗಿರುವುದು.

ಹೆಂಗಸು—ಇಲ್ಲ, ಇಲ್ಲಿರುವುದಿಲ್ಲ.

ಅರಿಂದಮ—ಈಗತಾನೇ ರಾಮರತ್ನನು ಇಲ್ಲಿಗೆ ಬಂದನು.

ಹೆಂಗಸು—ಬಂದಿರಬಹುದು, ನಾನು ಇಲ್ಲವೆನ್ನುವುದಿಲ್ಲ.

ಅರಿಂದಮ—ಈಗ ಆತನೆಲ್ಲಿ ?

ಹೆಂಗಸು—ಅದು ನನಗೆ ಗೊತ್ತಿಲ್ಲ.

ಅರಿಂದಮ—ಹಾಗಾದರೆ ಅವನು ಇಲ್ಲಿಂದ ಓಡಿಹೋದನೋ?

ಹೆಂಗಸು—ಇರಬಹುದು.

ಅರಿಂದಮ—ಬೀದಿಯ ಬಾಗಿಲಿನಿಂದ ಆತನು ಓಡಿಹೋಗಿಲ್ಲವೆಂದು ನಾನು ಖಂಡಿತವಾಗಿಯೂ ಬಲ್ಲೆನು.

ಹೆಂಗಸು—ಮತ್ತೊಂದು ಬಾಗಿಲಿನಿಂದ ಓಡಿಹೋಗಿರಬೇಕು.

ಅರಿಂದಮ—ಅವನು ಎಲ್ಲಿಗೆ ಓಡಿಹೋದನು ?

ಹೆಂಗಸು—ಅದು ನನಗೇನು ಗೊತ್ತು?

ಅರಿಂದಮ—ಅವನು ಇಲ್ಲಿಗೆ ಬರಲು ಕಾರಣವೇನು ?

ಈ ಮಾತನ್ನು ಕೇಳಿ ಆ ಹೆಂಗಸಿಗೆ ಕೊಂಚ ನಾಚಿಕೆಯಾಯಿತು. ನಾಚಿಕೆಯಿಂದ ಹೆಂಗಸು ಯಾವ ಉತ್ತರವನ್ನೂ ಕೊಡಲಾರದೇ ಹೋದಳು. ಉತ್ತರವು ಬಾರದ್ದನ್ನು ನೋಡಿ, ಅರಿಂದಮನು ಗಂಭೀರಧ್ವನಿಯಿಂದ—ನನ್ನ ಪ್ರಶ್ನೆಗೆ ಉತ್ತರ ಕೊಡು, ಇಲ್ಲವಾದರೆ ನಿನ್ನನ್ನು ದಸ್ತಗಿರಿ ಮಾಡುವೆನು, ಎಂದನು.

ಹೆಂಗಸು—ದಸ್ತಗಿರಿ !

ಅರಿಂದಮ—ಅಹುದು, ನೀನು ಅಪರಾಧಿಯೊಬ್ಬನಿಗೆ ಸಹಾಯಳಾಗಿರುವೆಯಾದಕಾರಣ, ನಿನ್ನನ್ನು ನಾನು ದಸ್ತಗಿರಿ ಮಾಡುವೆನು.

ಹೆಂಗಸು—ಅಪರಾಧವೆಂದರೇನು ? ಅಪರಾಧಿಗಳಾರು? ನಾನು ಯಾರಿಗೆ ಸಹಾಯಳು ?

ಅರಿಂದಮ—ಎಲ್ಲವನ್ನೂ ನಿನಗೆ ಹೇಳಲು ಕಾರಣವಿಲ್ಲ. ನಿನ್ನನ್ನು ದಸ್ತಗಿರಿ ಮಾಡಿ ಕಾರಣವನ್ನು ತಿಳಿಸುವೆನು. ಈಗ ರಾಮರತ್ನನು ಎಲ್ಲಿರುವನು, ಹೇಳು ?

ಆ ಹೆಂಗಸು ನಾಚಿಕೆಯಿಂದ ತಲೆಯನ್ನು ಬಗ್ಗಿಸಿಕೊಂಡು— ಸ್ವಾಮಿ, ರಾಮರತ್ನನು ನನ್ನಲ್ಲಿಯೇ ಇರುವನು, ಎಂದಳು.

ಅರಿಂದಮ—ನೀನು ಆತನಿಗೆ ವಿವಾಹಿತಳಾದವಳೇನು ?

ಹೆಂಗಸು—ಅಲ್ಲ, ಆತನು ನನ್ನನ್ನು ವಿವಾಹ ಮಾಡಿಕೊಳ್ಳಬೇಕೆಂದಿರುವನು.

ಅರಿಂದಮ—ಇದು ನಿನ್ನ ಸ್ವಂತಮನೆಯೋ ?

ಹೆಂಗಸು—ಅಲ್ಲ, ಇದು ನನ್ನ ತಾಯಿಯ ಮನೆ. ನನ್ನ ತಾಯಿಗೆ ನಾನೊಬ್ಬಳೇ ಮಗಳು.

ಅರಿಂದಮ—ನೀನೇನು ಕೆಲಸ ಮಾಡಿಕೊಂಡಿರುವೆ ?

ಹೆಂಗಸು—ನಾನೇನು ಮಾಡಿಕೊಂಡಿರಲಿ ?

ಅರಿಂದಮ—ಜೀವನ ನಡೆವುದು ಹೇಗೆ ?

ಹೆಂಗಸು—ನಾನೊಂದು ನಾಟಕದಲ್ಲಿ ನರ್ತಕಿಯು. ಅದಕ್ಕಾಗಿ ನನಗೆ ಸಂಬಳವಿರುವುದು.

ಅರಿಂದಮ—ನಿನಗೂ ರಾಮರತ್ನನಿಗೂ ಪ್ರಥಮಪರಿಚಯವಾದುದು ಹೇಗೆ ?

ಹೆಂಗಸು—ನಾಟಕಮಂದಿರದಲ್ಲಿಯೇ.

ಅರಿಂದಮ—ನಿನ್ನನ್ನು ಮಾತನಾಡಿಸಲು ಆತನಿಗೆ ಧೈರ್ಯವುಂಟಾದ ಬಗೆ ಹೇಗೆ ?

ಹೆಂಗಸು—ನಾಟಕದ ನರ್ತಕಿಯರನ್ನು ಮಾತನಾಡಿಸುವುದಕ್ಕೆ

ಧೈರ್ಯವೂ ಬೇಕೆ ?—ಎಂದು ಹೇಳಿ ಒಂದು ಮೃದುಮಧುರವಾದ ನಗೆಯನ್ನು ನಕ್ಕಳು.

ಅರಿಂದಮನು ಈ ನಗೆಯನ್ನು ನೋಡಿ ಕೊಂಚ ಲಜ್ಜಿತನಾದನು. ಈ ವಿಧವಾದ ಮಾತನ್ನು ಬದಲಾಯಿಸಬೇಕೆಂದು ಅರಿಂದಮನು—ನಿಮ್ಮ ತಾಯಿ ಇರುವುದೆಲ್ಲಿ ? ಎಂದು ಕೇಳಿದನು.

ಹೆಂಗಸು—ಪಕ್ಕದ ಮನೆಯಲ್ಲಿ ಆಕೆಯಿರುವಳು ; ಈ ಮನೆಯಲ್ಲಿ ನಾನಿರುವೆನು.

ಅರಿಂದಮ—ನಿನ್ನ ಹೆಸರೇನು ?

ಹೆಂಗಸು—ನನ್ನ ಹೆಸರು ಶಶಿರೇಖೆಯೆನ್ನುವರು.

ಅರಿಂದಮ—ಶಶಿರೇಖೆ ! ಇದೇನು ಇಂತಹ ದುಷ್ಟವಾದ ಸ್ಥಳದಲ್ಲಿ ವಾಸವಾಗಿರುವೆ ? ನಿನ್ನ ಹೆಸರು ನೋಡಿದರೆ ಪ್ರಪಂಚವೆಲ್ಲಾ ಹರಡಿಕೊಂಡಿರುವುದು.

ಹೆಂಗಸು—ಅದರಿಂದಲೇ ನಾನು ಭಯಪಟ್ಟು ಇಂತಹ ಅಪ್ರಶಸ್ತವಾದ ಸ್ಥಳದಲ್ಲಿ ವಾಸವಾಗಿರುವೆನು.

ಅರಿಂದಮ—ಬೇರೊಂದು ಪ್ರಶಸ್ತವಾದ ಸ್ಥಳದಲ್ಲಿ ನೀನು ವಾಸವಾಗಿರುತಿದ್ದರೆ, ಹಣದ ಮಳೆಯೇ ನಿನ್ನಮೇಲೆ ಸುರಿಯುತ್ತಿತ್ತು.

ಹೆಂಗಸು—ನನಗೆ ಅದು ಇಷ್ಟವಿಲ್ಲ. ಹಣಕ್ಕಾಗಿ ನಾನು ವಾರವಿಲಾಸಿನಿ (ಸೂಳೆ) ಯಾಗಲು ಇಷ್ಟಪಡಲಾರೆನು. ಹತ್ತಾರು ಜನರ ಅತ್ಯಾಚಾರವು ನನಗೆ ಸರಿಬೀಳದು. ಒಬ್ಬ ಪುರುಷನನ್ನು ಕೈಹಿಡಿದು ನಾನು ಸುಖಪಡಬೇಕೆಂದಿರುವೆನು. ಆದುದರಿಂದಲೇ ನಾನು ರಾಮರತ್ನನಿಗೆ ನನ್ನ ಪರಿಚಯವನ್ನು ಕೊಟ್ಟೆನು. ಏತತ್ಕ್ಷಣಪರ್ಯಂತವಾಗಿಯೂ ನಾನು ಪುರುಷನ ಸಹವಾಸವನ್ನೇ ಮಾಡಿಲ್ಲ. ನನ್ನನ್ನು ಯಾರಾದರೂ ಶಾಸ್ತ್ರಕ್ಕನುಸಾರವಾಗಿ ವಿವಾಹವಾಗುವವರೆಗೂ ಪುರುಷನ ಸಂಸರ್ಗವನ್ನು ಮಾಡುವುದಿಲ್ಲವೆಂದು ವೀರಪ್ರತಿಜ್ಞೆಯನ್ನು

ಮಾಡಿರುವೆನು. ಅದು ಸಾಧ್ಯವಾಗದೇ ಹೋಗುವಪಕ್ಷದಲ್ಲಿ, ನಾನು ಈರೀತಿಯಲ್ಲಿಯೇ ಈ ಜನ್ಮವನ್ನು ಕಳೆದುಕೊಳ್ಳುವೆನು.

ಅರಿಂದಮ—ನೀನು ಇಂತಹ ಹೊಲಸಾದ ಮನೆಯಲ್ಲಿ ವಾಸವಾಗಿದ್ದರೂ, ನಿನ್ನ ಹೃದಯವು ಪರಿಶುದ್ಧವಾಗಿರುವುದನ್ನು ನೋಡಿ, ನಾನು ಬಹಳ ಸಂತೋಷಪಡುವೆನು. ನಿನ್ನ ಮನೆಯು ಹೊರಗೆ ಅಂದವಾಗಿಲ್ಲದಿದ್ದರೂ, ಒಳಗೆ ಪರಿಷ್ಕಾರವಾಗಿರುವುದು ನೋಡಿದರೆ ನಿನ್ನ ರಸಿಕತೆಯು ಅದ್ವಿತೀಯವಾದುದೆಂದು ತೋರುವುದು.

ಶಶಿರೇಖಾ—ಈ ಸಾಮಗ್ರಿಗಳೆಲ್ಲವೂ ನನ್ನ ತಂದೆಯಿಂದ ಬಂದುವು. ನನ್ನ ತಂದೆಯು ಪ್ರಸಿದ್ಧನಾದ ಹಣಗಾರನಾಗಿದ್ದನು. ದೌರ್ಭಾಗ್ಯಕ್ರಮದಿಂದ ಎಲ್ಲವೂ ಕಾಡುಪಾಲಾದುವು. ನನ್ನ ತಂದೆಯು ನನಗಿಟ್ಟಿರುವ ಆಸ್ತಿಗಳಲ್ಲಿ, ನಾನು ಕಲಿತಿರುವ ಗಾನ, ನರ್ತನ, ಇವೆರಡೇ ಮುಖ್ಯವಾದುವು. ಇವೆರಡರ ಬಲದಿಂದಲೇ ನಾನು ಗೌರವದಿಂದ ಜೀವಿಸಿಕೊಂಡಿರುವೆನು. ನಾಟಕದ ಮುಖ್ಯಾಧಿಕಾರಿಯು ನನ್ನ ಗೌರವಕ್ಕೆ ಕುಂದುಬಾರದಂತೆ ಕಾಪಾಡಿಕೊಂಡು ಬರುತ್ತಿರುವುದರಿಂದ, ನಾನೊಬ್ಬ ಮನುಷ್ಯಳಾಗಿ ಪರಿಣಮಿಸಿರುವೆನು. ಹೀಗಿದ್ದರೂ ನೀಚರ ಬಾಧೆಯು ನನ್ನನ್ನು ಇರಗೊಳಿಸದು. ಅವರ ಹಾವಳಿಯನ್ನು ತಪ್ಪಿಸಿಕೊಳ್ಳುವುದಕ್ಕಾಗಿಯೇ, ನಾನು ವಿವಾಹಮಾಡಿಕೊಂಡಿರಬೇಕೆಂದು ಸಂಕಲ್ಪಮಾಡಿರುವೆನು. ನನ್ನ ಪ್ರಕೃತಾವಸ್ಥೆಯನ್ನು ನೋಡಿ, ನನ್ನ ಜಾತಿಯವರಾರೂ ನನ್ನನ್ನು ವಿವಾಹಮಾಡಿಕೊಳ್ಳಲು ಒಪ್ಪುವುದಿಲ್ಲ. ಹೆಂಗಸು ಋತುಮತಿಯಾಗಿ ಬಹಳ ಕಾಲದವರೆಗೂ ವಿವಾಹಮಾಡಿಕೊಳ್ಳದಿದ್ದರೆ, ಜನರು ಅಂಥವಳನ್ನು ದುಷ್ಟಳೆಂದು ದೂರಮಾಡುವರು. ನಮ್ಮ ಹೃದಯವು ದಿವ್ಯದೃಷ್ಟಿಯಿಲ್ಲದ ಪುರುಷರಿಗೆ ಹೇಗೆ ಗೊತ್ತಾದೀತು? ಆದರೂ ಹತ್ತು ಜನರ ಬಾಯಿಗೆ ಹೆದರಬೇಕು. ಲೋಕದ ಸ್ಥಿತಿಯು ಹೀಗಿರು

ವಲ್ಲಿ, ನನ್ನ ಸ್ಥಿತಿಯಾದರೋ ಬಹಳ ಶೋಚನೀಯವಾಗಿರುವುದು. ಅದನ್ನು ಇತರರಿಗೆ ಹೇಳಿಕೊಳ್ಳುವುದಕ್ಕೂ ಆಗುವುದಿಲ್ಲ; ಸ್ವತಃ ಅನುಭವಿಸುವುದಕ್ಕೂ ಆಗುವುದಿಲ್ಲ. ಆದರೂ ನಾನು ನಾಚಿಕೆಯನ್ನು ದೂರಮಾಡಿ ನನ್ನನ್ನು ಮರೆಮಾಡಿಕೊಳ್ಳುವುದಕ್ಕಾಗಿ ಅನೇಕರಲ್ಲಿ ಅಂಗಲಾಚಿಕೊಂಡೆನು. ನನ್ನ ದುರ್ದೃಷ್ಟದಿಂದ ಯಾರೂ ಒಪ್ಪದೇ ಹೋದರು. ಯಾರು ನೋಡಿದರೂ ನನ್ನಲ್ಲಿ ತತ್ಕಾಲಸುಖವನ್ನು ಬಯಸುವರೇ ವಿನಾ ವಿಧಿಬದ್ಧವಾದ ಸುಖವನ್ನು ಬಯಸರೆಂಬುದೊಂದೇ ನನ್ನನ್ನು ಸುಟ್ಟು ಬೂದಿಮಾಡುತ್ತಿರುವುದು. ಇದೂ ಅಲ್ಲದೆ ಅಜ್ಞಾತಕುಲಗೋತ್ರರನೇಕರು ನನ್ನಲ್ಲಿಗೆ ಬಂದುಹೋಗುತ್ತಾರೆ. ನನಗೆ ಅಸಂಭಾವ್ಯವಾದ ಆಸೆಯನ್ನು ತೋರಿಸುತ್ತಿರುವರು. ನಾನು ಆಸೆಗೆ ದಾಸಿಯಾಗಿಲ್ಲದ್ದರಿಂದ ಎಲ್ಲರೂ ಬೆದರುವರು. ಕಾಲವು ಒಂದೇಸಮನಾಗಿರುವುದಿಲ್ಲವಾದ್ದರಿಂದ ನಾನು ಕೂಡಿದಷ್ಟು ಬೇಗನ ಯಾರನ್ನಾದರೂ ವರಿಸಬೇಕೆಂದು ನಿರ್ಣಯಮಾಡಿ ರಾಮರತ್ನನನ್ನು ಗುರಿಯಲ್ಲಿಟ್ಟಿರುವೆನು. ವಿಚಾರಮಾಡಿದ್ದಲ್ಲಿ, ಆತನೂ ಒಪ್ಪಿಗೆಯನ್ನಿತ್ತಿರುವನು. ಇದಾದಂದಿನಿಂದಲೂ ಆತನು ನನ್ನ ಮನೆಗೆ ಪದೇ ಪದೇ ಬಂದುಹೋಗುವನು. ನಾನು ಬಹುವಿಧವಾಗಿ ಪರೀಕ್ಷಿಸಿದ್ದರಲ್ಲಿ, ಅವನು ಗುಣಾಢ್ಯನೇ ಹೊರತು ಗುಣಹೀನನಲ್ಲ.

ಅರಿಂದಮ — ಈಗ ಆತನು ಎಲ್ಲಿರುವನು, ಹೇಳಬಲ್ಲೆಯಾ?

ಶಶಿ — ಹೇಳಬಲ್ಲೆನು. ಅವನೇನೂ ಇಲ್ಲಿಗೆ ಬಂದಿದ್ದುಂಟು. ತಾವು ಆತನನ್ನು ಹಿಂಬಾಲಿಸಲು ಕಾರಣವೇನು?

ಅರಿಂದಮ — ಆತನಿಂದ ನನಗೆ ತುಂಬ ಕೆಲಸವಾಗಬೇಕಾಗಿದೆ. ಕೆಲವು ದಿನಗಳ ಹಿಂದೆ ಅಮರನಾಥರಾಜ ಹೊಗಾರದಲ್ಲಿ ಬಂದು ಲಕ್ಷ ರೂಪಾಯಿಗಳು ಕಳುವಾಗಿದೆ. ಆ ಕಳುವಿನಲ್ಲಿ ಅನೇಕರ ಮೇಲೆ ಸಂಶಯವು ತೋರಿಬರುತ್ತಿರುವುದು. ರಾಮರತ್ನನ ಮೇಲೆಯೂ ವಿಶೇ

ಷವಾದ ಸಂಶಯಕ್ಕೆ ಕಾರಣವಿರುವುದು. ನಿನ್ನ ಭಾವವನ್ನು ನೋಡಿದರೆ, ನೀನು ರಾಮರತ್ನನನ್ನು ಮುಚ್ಚುಮರೆ ಮಾಡಬೇಕೆಂದಿರುವುದಾಗಿ ಕಾಣುವುದು. ಶಶಿ, ಈಗಲಾದರೂ ಖಂಡಿತವಾಗಿ ಹೇಳು, ಈ ಕಳುವಿನ ವಿಚಾರದಲ್ಲಿ ನಿನಗೆ ಕೊಂಚವೂ ಗೊತ್ತಿಲ್ಲವೋ ?

ಈ ಮಾತನ್ನು ಕೇಳಿ ಶಶಿರೇಖೆಯ ಮುಖವು ಬಾಡಿತು, ಕಂಠಸ್ವರವು ರುದ್ಧವಾಯಿತು, ಕಣ್ಣುಗಳಲ್ಲಿ ನೀರು ತುಂಬಿತು, ತಲೆಯು ಬಾಗಿತು. ಆಕೆಯ ಶರೀರವೆಲ್ಲವೂ ನಡುಗಲಾರಂಭಿಸಿತು. ಅರಿಂದಮನು ಇದನ್ನು ನೋಡಿ, ಪೂರ್ವದಂತೆಯೇ ಮತ್ತೆ ಪ್ರಶ್ನೆಮಾಡಿದನು. ಅದಕ್ಕೆ ಶಶಿರೇಖೆಯು ಮೆಲ್ಲಮೆಲ್ಲನೆ—ನಾನು ಅದೆಲ್ಲವನ್ನೂ ಕೇಳಿರುವೆನು. ರಾಮರತ್ನನನ್ನು ಮರೆಮಾಡಲು ನಾನು ಯತ್ನಮಾಡಿದ್ದುಂಟು. ತಾವು ಆತನನ್ನು ದಸ್ತಗಿರಿ ಮಾಡುವಿರೆಂಬ ಭಯದಿಂದ ನಾನು ಹೀಗೆಲ್ಲ ಮಾಡಿದೆನು. ಆತನು ನನ್ನಲ್ಲಿ ಪ್ರಮಾಣವಾಗಿ ಹೇಳಿರುವುದರಿಂದ ಆತನು ನಿರ್ದೋಷಿಯೆಂದು ನಾನು ದೃಢವಾಗಿಯೂ ನಂಬಿರುವೆನು. ಆತನು ನನ್ನಲ್ಲಿ ಯಾವಾಗಲೂ ಸುಳ್ಳು ಹೇಳಿದವನಲ್ಲ, ಎಂದಳು.

ಅರಿಂದಮನು ಶಶಿಯ ಮಾತನ್ನು ಕೇಳಿ ಆಶ್ಚರ್ಯಪಟ್ಟನು. ಚಿರಕಾಲ ಜನರ ಸ್ವಭಾವವನ್ನು ಪರೀಕ್ಷಿಸಿ ತಿಳಿದುಕೊಂಡಿದ್ದರೂ, ಅರಿಂದಮನಿಗೆ ಶಶಿಯು ಹೇಳುವುದು ನಿಜವೋ ಸುಳ್ಳೋ ಎಂಬುದಾವುದೂ ಗೊತ್ತಾಗದೇ ಹೋಯಿತು. ' ಚತುರಸ್ತ್ರೀಯರ ಹೃದಯದ ಆಳವನ್ನು ಬಲ್ಲವರಾರು? ಪ್ರೀತಿಯೆಂಬುದು ದೋಷವನ್ನೇ ಮುಚ್ಚುವುದು. ಇಂದಿರೆಯು ಪ್ರೀತಿಯಿಂದ ಶರಚ್ಚಂದ್ರನನ್ನು ನಿರ್ದೋಷಿಯೆಂದು ಸಾಧಿಸಿದಳು ; ಶಶಿರೇಖೆಯೂ ಅದೇ ಪ್ರೀತಿಯಿಂದ ರಾಮರತ್ನನನ್ನು ನಿರ್ದೋಷಿಯೆಂದು ಸಾಧಿಸುತ್ತಿರುವಳು. ಈ ಅನಿರ್ವಚನೀಯವಾದ ತತ್ತ್ವದ ಅಂತರ್ಯವನ್ನು ನೋಡಿದರೆ, ಇದರಲ್ಲಿ ಆವು

ದೋ ನಿಜವಾದ ಅಂಶವು ಇದ್ದೇ ಇರಬೇಕು. ಅದು ಪ್ರಮಾಣಾಂತರಗಳಿಂದ ಸ್ಥಿರಪಡುವುದು ' ಎಂದು ಅರಿಂದಮನು ಬಹಳ ಹೊತ್ತು ಚಿಂತಾಸಾಗರದಲ್ಲಿ ತೇಲಿಮುಳುಗುತಿದ್ದನು.

## ಐದನೆಯ ಅಧ್ಯಾಯ.

ಅರಿಂದಮನು ಚಿರಕಾಲ ಯೋಚಿಸುತಿದ್ದು—ನೋಡು, ನಿರ್ದೋಷಿಯಾದವನಿಗೆ ಶಿಕ್ಷೆಮಾಡಬೇಕೆಂಬುದಾಗಲಿ, ಅಥವಾ ಒಬ್ಬನ ತಪ್ಪಿಗಾಗಿ ಮತ್ತೊಬ್ಬನನ್ನು ಶಿಕ್ಷಿಸಬೇಕೆಂದಾಗಲಿ ನನ್ನ ಇಷ್ಟವಲ್ಲ, ಎಂದನು.

ಶಶಿರೇಖಾ—ತಮ್ಮ ಮಾತನ್ನು ಕೇಳಿದರೆ, ತಾವು ಇತರ ಪೋಲೀಸಿನವರಂತೆ ಕಠಿಣರಲ್ಲವೆಂದು ತೋರುತ್ತದೆ. ತಮ್ಮಲ್ಲಿ ದಯಾರಸವು ಪೂರ್ಣವಾಗಿದೆಯೆಂದು ಭಾವಿಸಿ, ರಾಮರತ್ನನನ್ನು ನಿರ್ದೋಷಿಯನ್ನಾಗಿ ಮಾಡಬೇಕೆಂದು ಪ್ರಾರ್ಥಿಸುವೆನು. ಆತನು ನಿರಪರಾಧಿಯೆಂದು ನನಗೆ ಭರವಸೆಯುಂಟು. ಅಪರಾಧವು ತನ್ನ ತಲೆಯ ಮೇಲೆ ಎಲ್ಲಿ ಬೀಳುವುದೋ ಎಂದು ಭಯದಿಂದ ಆತನು ತಲೆಯನ್ನು ತಪ್ಪಿಸಿಕೊಂಡು ತಿರುಗುತ್ತಿರುವನು.

ಅರಿಂದಮ—ಆತನು ನಿರಪರಾಧಿಯೆಂದು ದೃಢವಾಗಿಯೂ ತಿಳಿದಿರುವುದಾದರೆ, ಹೀಗೆ ಭಯಪಡಲು ಕಾರಣವೇನಿರುವುದು? ನಿರ್ದೋಷಿಗೆ ಯಾವ ಭಯವೂ ಇರುವುದಿಲ್ಲವಷ್ಟೆ. ಅಂತಹವನು ನಡೆದ ಸಂಗತಿಯನ್ನು ನಡೆದಹಾಗೆ ಏತಕೆ ಬಹಿರಂಗಪಡಿಸಬಾರದು?

ಶಶಿರೇಖಾ—ಅದರ ಮರ್ಮವೇನೋ ನನಗೆ ತಿಳಿಯದು. ಆತನು ಪ್ರಕಾಶಪಡಿಸುವುದಕ್ಕೆ ಮತ್ತಾವ ಅಡಚಣೆಯಿರುವುದೋ, ಅದು ಮಾತ್ರ ನನಗೆ ಗೊತ್ತಿಲ್ಲ. ಆತನು ಎಲ್ಲವನ್ನೂ ತಿಳಿಸುವುದಾ

ದರೆ, ಆತನ ಮೇಲಿನ ಸಂದೇಹವು ನಿವೃತ್ತಿಯಾಗಿ ಆತನು ಸುಖವಾಗಿ ಇರಬಹುದು.

ಅರಿಂದಮ—ಶಶಿ, ನೀನು ಹೇಳುವುದು ಸತ್ಯವೆಂದು ನಾನು ನಂಬುವುದಾದರೂ, ನಾನು ಅವನನ್ನು ನೋಡಿ ಮಾತನಾಡಿದ್ದಲ್ಲದೆ ಯಾವುದನ್ನೂ ಸಿದ್ಧಾಂತ ಮಾಡಲಾಗುವದಿಲ್ಲ. ಆತನನ್ನು ನೀನು ನನ್ನೆದಿರಿಗೆ ಕರೆತರಲಾರೆಯೇತೆ ?

ಶಶಿರೇಖಾ—ನೀವು ಆತನನ್ನು ದಸ್ತಗಿರಿ ಮಾಡುವುದಿಲ್ಲವೆಂದು ನಂಬುಗೆ ಕೊಡುವುದಾದರೆ, ನಾನು ಆತನನ್ನು ಇಲ್ಲಿಗೆ ಕರೆದುಕೊಂಡು ಬರುವೆನು.

ಅರಿಂದಮ—(ಯೋಚಿಸಿ) ಒಳ್ಳೆಯದು, ಆತನಮೇಲೆ ಪ್ರಮಾಣಾಂತರಗಳಿಂದ ತಪ್ಪು ಸಾಬೀತಾಗುವವರೆಗೂ, ನಾನು ಆತನನ್ನು ದಸ್ತಗಿರಿ ಮಾಡುವುದಿಲ್ಲವೆಂದು ಮಾತು ಕೊಡುವೆನು.

ಶಶಿರೇಖಾ—ಹಾಗಾದರೆ ನಾಳೆಯ ಸಾಯಂಕಾಲ ಇಷ್ಟು ಹೊತ್ತಿಗೆ ತಾವು ಇಲ್ಲಿಗೆ ದಯವಿಟ್ಟು ಬರುವುದಾದರೆ, ರಾಮರತ್ನನಿಗೆ ತಮ್ಮ ಭೇಟಿಯನ್ನು ಮಾಡಿಸುವೆನು.

ಅರಿಂದಮನು ಇದನ್ನು ಕೇಳಿ ಶಶಿರೇಖೆಯಿಂದ ಅಪ್ಪಣೆಯನ್ನು ತೆಗೆದುಕೊಂಡು ಹೊರಟನು. ಅವನನ್ನು ಮನೆಯಬಾಗಲವರೆಗೂ ಬಿಟ್ಟುಬರಲು ಶಶಿಯೂ ಹಿಂದೆಹಿಂದೆಯೇ ಬಂದಳು. ಮನೆಯ ತಲೆಬಾಗಿಲಹತ್ತಿರ ಒಂದು ಕಾಗದದ ತುಂಡು ಬಿದ್ದಿದ್ದುದನ್ನು ಅರಿಂದಮನು ನೋಡಿ, ಅದನ್ನು ಬೇಗನೆ ಕೈಗೆ ತೆಗೆದುಕೊಂಡು ತನ್ನ ಜೇಬಿನಲ್ಲಿಟ್ಟುಕೊಂಡನು. ಶಶಿರೇಖೆಯು ಇದನ್ನು ನೋಡಿದರೂ ಯಾವ ಮಾತನ್ನೂ ಆಡಲಿಲ್ಲ. ಅರಿಂದಮನು ಅಲ್ಲಿಂದ ಮುಂದಕ್ಕೆ ತೆರಳಲು, ಶಶಿಯು ಮನೆಯಬಾಗಿಲನ್ನು ಹಾಕಿಕೊಂಡು ಒಳಗೆ ಹೊರಟು ಹೋದಳು.

ಅರಿಂದಮನು ದಾರಿಯಲ್ಲಿ ಬರುತ್ತಾ, ಆ ಕಾಗದವನ್ನು ಬಿಚ್ಚಿ ನೋಡಿದನು. ಅದನ್ನು ಹೇಗೆಹೇಗೆ ನೋಡಿದರೂ ಒಂದೂ ಅರ್ಥವಾಗಲಿಲ್ಲ. ಅದೇನಿರಬಹುದೆಂದು ಯೋಚಿಸುತ್ತಾ, ಅರಿಂದಮನು ಅಮರನಾಥನ ಮನೆಗೆ ಬಂದು ಸೇರಿದನು.

---

## ಆರನೆಯ ಅಧ್ಯಾಯ.

ಅರಿಂದಮನು ಅಮರನಾಥನ ಮನೆಯೊಳಗೆ ಹೋಗಿ ನೋಡಲಾಗಿ, ಯಜಮಾನನು ತನ್ನ ಕೋಣೆಯಲ್ಲಿ ಕುಳಿತುಕೊಂಡು ಏನನ್ನೋ ಯೋಚಿಸುತ್ತಿದ್ದನು. ಅರಿಂದಮನು ಒಳಗೆ ಬಂದಕೂಡಲೆ, ಅಮರನು ಆತನನ್ನು ಬರಮಾಡಿಕೊಂಡು ಆಸನದಮೇಲೆ ಕುಳ್ಳಿರಿಸಿ-ಹೊಸ ಸಮಾಚಾರವೇನೆಂದು ಕೇಳಿದನು.

ಅರಿಂದಮ—ಅಂತಹ ಹೊಸದೇನೂ ಕಾಣುವುದಿಲ್ಲ. ಈಗೀಗ ನಾನೊಂದು ಸೂತ್ರವನ್ನು ಕಂಡುಹಿಡಿದಿರುವೆನು. ಅದರಿಂದ ಪ್ರಕೃತ ಸಂದರ್ಭವು ಮತ್ತಷ್ಟು ತೊಡಕಾಗಿರುವುದು.

ಅಮರ—ತಾವು ಅದನ್ನು ನನಗೆ ತಿಳಿಸುವುದಾದರೆ, ನನಗೆ ತೋರುವ ಸಲಹೆಯನ್ನು ಕೊಡುವೆನು. ಅದರಿಂದಲೂ ತಮಗೆ ಪ್ರಯೋಜನವಾಗುವುದಾದರೆ ಆಗಲಿ.

ಅರಿಂದಮ—ನನ್ನ ಕಾರ್ಯಕಲಾಪವೆಲ್ಲವನ್ನೂ ನಾನು ತಮಗೆ ತಿಳಿಸಲಾರೆನು. ಹಾಗೆ ನಾನು ಹೇಳುವುದೂ ಯುಕ್ತಿಸಂಗತವಾಗಿಲ್ಲ.

ಅಮರ—ಒಳ್ಳೆಯದು, ನಿಷಿದ್ಧವಾದುದನ್ನು ಬಿಟ್ಟು ಯುಕ್ತಿಸಂಗತವಾದ್ದನ್ನು ತಿಳಿಸೋಣವಾಗಲಿ ; ನಾನು ಕೇಳಿ ಸಂತೋಷಪಡುವೆನು.

ಅರಿಂದಮ—ನಾನು ತಮ್ಮಿಂದ ಒಂದು ವಿಷಯವನ್ನು ಕೇಳಿ ತಿಳಿದುಕೊಂಡು ಹೋಗಬೇಕೆಂದು ಬಂದಿರುವೆನು.

ಅಮರ—ಅದೇನು ಹೇಳೋಣಾಗಲಿ.

ಅರಿಂದಮನು ತನ್ನ ಜೇಬಿನಲ್ಲಿದ್ದ ಕಾಗದವನ್ನು ಹೊರಗೆ ತೆಗೆದು—ಇದರಲ್ಲಿ ಬರೆದಿರುವುದೇನು ? ಎಂದು ಕೇಳಿದನು.

ಅಮರ—(ಕಾಗದವನ್ನು ಓದಿ) ಇದು ಅವಶ್ಯವಾಗಿ ತಿಳಿಯಬೇಕಾದುದೇ.

ಅರಿಂದಮ—ಅದೇನು ?

ಅಮರ—ಈ ಕಾಗದದಲ್ಲಿ ನನ್ನ ಕಬ್ಬಿಣದ ಪೆಟ್ಟಿಗೆಯನ್ನು ತೆರೆವ ವಿಧಾನವು ಲಿಖಿತವಾಗಿರುವುದು.

ಅರಿಂದಮ—ಸರಿಸರಿ.

ಅಮರ—ಇದು ತಮಗೆ ಎಲ್ಲಿ ಸಿಕ್ಕಿತು ?

ಅರಿಂದಮ—ಒಂದು ಮನೆಯ ಒಳಿಯಲ್ಲಿ.

ಅಮರ—ಇದು ಯಾರ ಜೇಬಿನಿಂದಲೋ ಬಿದ್ದಿರಬೇಕು ; ಆತನಾರೆಂಬುದು ತಮಗೆ ಗೊತ್ತೇ ?

ಅರಿಂದಮ—ಇಲ್ಲ, ಆತನನ್ನು ಕಂಡುಹಿಡಿಯಲು ನನಗೆ ಅವಕಾಶ ಸಾಲದು.

ಅಮರ—ಇದು ಯಾರ ಮನೆಯ ಒಳಿಯಲ್ಲಿ ಬಿದ್ದಿದ್ದಿತು ?

ಅರಿಂದಮ—ಪೀರಸಾಬಿಯ ಗಲ್ಲಿಯಲ್ಲಿರುವ ಒಬ್ಬರ ಮನೆಯ ಬಾಗಿಲಿನಲ್ಲಿ.

ಅಮರ—ತಾವು ಅಲ್ಲಿಗೆ ಹೋಗಲು ಕಾರಣವೇನು ?

ಅರಿಂದಮ—ನಾನೊಬ್ಬನನ್ನು ಹಿಂಬಾಲಿಸಿಕೊಂಡು ಹೋಗಿದ್ದೆನು.

ಅಮರ—ರಾಮರತ್ನನನ್ನೋ ?

ಅರಿಂದಮ—ಅಹುದು, ತಮಗೆ ಗೊತ್ತಾದದ್ದು ಆಶ್ಚರ್ಯವೇ ಸರಿ.

ಅಮರ—ಆಶ್ಚರ್ಯವೇನು ? ಯಾರಮೇಲೆ ಸಂಶಯವಿದ್ದರೋ, ಅವರು ಯಾವಾಗಲೂ ಕಣ್ಣಿಗೆ ಕಟ್ಟಿದಂತಿರುವರು.

ಅರಿಂದಮ—ಅದು ಹಾಗಿರಲಿ, ರಾಮರತ್ನನು ಈ ಉಪಾಯವನ್ನು ಕಾಗದದಲ್ಲಿ ಬರೆದಿಡಲು ಕಾರಣವೇನಿರಬಹುದು ? ಆತನಿಗೆ ತನ್ನ ಪೆಟ್ಟಿಗೆಯನ್ನು ತೆರೆವ ಉಪಾಯವು ಗೊತ್ತೇ ಇರುವುದೆಂದು ತಾವು ನನಗೆ ಮೊದಲೇ ತಿಳಿಸಿರುವಿರಿ. ಹಾಗಾದರೆ ಈ ಕಾಗದಕ್ಕೆ ಅರ್ಥವೇನು ?

ಅಮರ—ತಾವು ಹೇಳುವುದು ನಿಜ ; ನಾನು ಆ ಉಪಾಯವನ್ನು ಬರೆದಿಟ್ಟುಕೊಂಡಿಲ್ಲ.

ಅರಿಂದಮ—ಆ ಉಪಾಯವನ್ನು ಕಾಗದದಲ್ಲಿ ಬರೆದಿಟ್ಟರಬೇಕಾದರೆ ಕಾರಣವೇನೋ ಇದ್ದಿರಬೇಕು. ಈ ಕಾಗದದಿಂದ ನನಗೆ ಬಹಳದೂರ ಅರ್ಥವಾಗುವುದು. ಅಪರಿಚಿತನಾದವನು ಇದರ ಬಾಗಿಲನ್ನು ತೆರೆವ ಸಂದರ್ಭದಲ್ಲಿ ಈ ಉಪಾಯವು ಮರೆಯದಿರಬೇಕೆಂದು ಕಾಗದದಲ್ಲಿ ಬರೆದಿಟ್ಟಂತಿದೆ.

ಅಮರ—ಇದ್ದರೂ ಇರಬಹುದು.

ಅರಿಂದಮ—ನನಗೆ ತೋರುವುದೇನೆಂದರೆ—ಯಾರು ನಿಮ್ಮಲ್ಲಿ ಕೆಲಸ ಮಾಡುತ್ತಿಲ್ಲವೋ, ಯಾರಿಗೆ ಈ ಬೀಗ ತೆಗೆವ ಉಪಾಯವು ಗೊತ್ತಿಲ್ಲವೋ, ಅಂತಹವರ ಬಳಿಯಲ್ಲಿ ಈ ಕಾಗದವು ಇತ್ತೆಂದು ತೋರುವುದು.

ಅಮರ—(ತಲೆಯನ್ನು ಅಲುಗಾಡಿಸುತ್ತಾ) ಈಗ ತಾವು ಏನು ಸಿದ್ಧಾಂತ ಮಾಡೋಣಾಯಿತು ?

ಅರಿಂದಮ—ಸಿದ್ಧಾಂತವೆ ! ನಾನಿನ್ನೂ ಯಾವುದನ್ನೂ ಮಾ

ಡಿಲ್ಲ. ನಾನು ನಿಶ್ಚಯ ಮಾಡಿರುವುದೇನೆಂದರೆ—ತಮ್ಮಲ್ಲಿ ಕೆಲಸಕ್ಕೆ ಇರತಕ್ಕವರಿಂದ ಈ ಕಳ್ಳತನವು ನಡೆದಿಲ್ಲ. ಹೊರಗಿನವರಾರೋ ಈ ದುಷ್ಕಾರ್ಯವನ್ನು ಮಾಡಿರಬೇಕೆಂದು ನಾನು ಮುಕ್ತಕಂಠನಾಗಿ ಹೇಳುವೆನು.

ಅಮರ—ಹಾಗಾದರೆ ಕಳ್ಳನನ್ನು ಕಂಡುಹಿಡಿಯುವುದು ಅಸಾಧ್ಯ. ನಾವು ಮೊದಲು ಯೋಚಿಸಿದ್ದಕ್ಕೂ ಇದಕ್ಕೂ ಅಜಗಜ ನ್ಯಾಯವಾಗಿರುವುದು.

ಅರಿಂದಮ—ಈಗಿನ ಅಪರಾಧಿಯು ಚೌರ್ಯದಲ್ಲಿ ಸಿಷ್ಣಾತನಾಗಿರಬೇಕು. ಸಾಮಾನ್ಯರಿಗೆ ಇಂತಹ ಕೆಲಸವು ಸಾಧ್ಯವಲ್ಲ. ಕಳ್ಳನು ಸಿಕ್ಕುವುದಾದರೆ, ಮಹಾಸಾಹಸನೇ ಸರಿ. ನಾನಾದರೋ ಕೆಲಸ ಮಾಡುವುದಕ್ಕೆ ಬಂದಿರುವೆನು. ಸಾಧ್ಯವಾದಷ್ಟು ಕೆಲಸ ಮಾಡಿ ನೋಡುವೆನು. ಪ್ರಕೃತದಲ್ಲಿ ಫಲಾಫಲಗಳು ಸಂಪೂರ್ಣವಾಗಿ ಅಜ್ಞಾತವಾಗಿರುವುವು.

ಅಮರ—ತಮ್ಮ ಮಾತನ್ನು ಕೇಳಿ, ನನ್ನ ಆಸೆಯೆಲ್ಲವೂ ನಿರಾಶೆಯಾಯಿತು. ನನಗೆ ಸಮಸ್ತ ದಿಕ್ಕುಗಳೂ ಶೂನ್ಯವಾಗಿ ಕಾಣಬಾರಂಭಿಸಿರುವುವು.

ಅರಿಂದಮ—ನಿರಾಶನಾಗುವುದು ಧೀರನ ಲಕ್ಷಣವಲ್ಲ. ನಾನು ಕೈಗೊಂಡ ಕೆಲಸವನ್ನು ವಿಹಿತವಾಗಿಯೇ ಪೂರ್ತಿಗೊಳಿಸುವೆನು. ನಾನು ಕೈಹಾಕಿದ ಕೆಲಸವಾವುದೂ ಇಂದಿನವರೆಗೂ ವಿಫಲವಾಗಿಲ್ಲ. ಹೀಗಿರುವಲ್ಲಿ ಈ ಕೆಲಸದಲ್ಲಿ ಮಾತ್ರ ವಿಫಲವಾಗುವುದೆಂದರೇನು? ಒಂದೆರಡು ದಿನಗಳು ನಿರೀಕ್ಷಿಸಿಕೊಂಡಿರೋಣವಾಗಲಿ. ದೇವರು ಎಲ್ಲವನ್ನೂ ಸುಮುಖವಾಗಿಯೇ ನೆರವೇರಿಸಿ ಕೊಡುವನು.

---

# ಏಳನೆಯ ಅಧ್ಯಾಯ.

ಲೋಕದಲ್ಲಿ ಅನೇಕಜನ ಪತ್ತೇದಾರರು ಸರ್ಕಾರದ ಇಲಾಖೆಗಳಲ್ಲಿ ಕೆಲಸಕ್ಕೆ ಸೇರಿ, ತಮಗೋಸ್ಕರವಾಗಿ ನಿಯಮಿತವಾದ ಕೆಲಸಗಳನ್ನು ಮಾಡಿಕೊಂಡಿರುವರು. ದುಷ್ಟರನ್ನು ನಿಗ್ರಹಿಸಿ ಶಿಷ್ಟರನು ಪರಿಪಾಲಿಸಬೇಕೆಂಬುದೇ ಸರ್ಕಾರದವರ ಅಭಿಪ್ರಾಯವಾಗಿರುವುದರಿಂದ, ಅವರ ಉದ್ದೇಶವು ಸರ್ವಶ್ಲಾಘ್ಯವಾದುದು. ಅಧಿಕಾರಿಗಳೆಲ್ಲರೂ ಸರ್ಕಾರದ ಉದ್ದೇಶಕ್ಕೆ ಅವಿರೋಧವಾಗಿ ಕೆಲಸ ಮಾಡುವುದಾದರೆ, ಈ ಭೂಭಾಗವನ್ನೇ ಸ್ವರ್ಗಖಂಡವನ್ನಾಗಿ ಕರೆಯಬಹುದು. ಆದರೆ ಅನೇಕರು ಜೀವನಾಭಾವದಿಂದಲೋ, ಬರತಕ್ಕ ಸಂಬಳವು ಸಾಲದ್ದರಿಂದ ಉಂಟಾಗಿರುವ ಅತೃಪ್ತಿಯಿಂದಲೋ, ಅಥವಾ ನಿಜವಾಗಿಯೂ ಯೋಗ್ಯತೆಯಿಲ್ಲದ್ದರಿಂದಲೋ, ಕೈಗೊಂಡ ಕೆಲಸವನ್ನು ಮುಗಿಸಬೇಕೆಂದಿರುವರೇ ಹೊರತು ನ್ಯಾಯಾನ್ಯಾಯಗಳನ್ನು ವಿಚಾರಿಸಿ ಕೆಲಸ ಮಾಡುವುದಿಲ್ಲ. ಇಷ್ಟೇ ಅಲ್ಲದೆ, ಕೆಲಸ ಮಾಡದಿದ್ದರೆ ಸಮಾನಾಧಿಕಾರಿಗಳಲ್ಲಿ ಅಪಮಾನವು ಸಂಘಟಿಸುವುದೆಂಬ ಭೀತಿಯಿಂದ ಕೇಸಿಗೆ ಸಂಬಂಧಪಟ್ಟವರನ್ನೂ ಸಂಬಂಧಪಡದವರನ್ನೂ ಒಟ್ಟುಗೂಡಿಸಿ ಭಯೋತ್ಪಾದನೆಯಿಂದ ಮೊಕದ್ದಮೆಯನ್ನು ಒಂದು ವಿಧದಲ್ಲಿ ಇತ್ಯರ್ಥಮಾಡಿಬಿಡುವರು. ಇದರಿಂದ ಸರ್ಕಾರದ ಉದ್ದೇಶವು ನೆರವೇರಿ, ಜನಗಳಿಗೆ ಕ್ಷೇಮವುಂಟಾಗುವುದೆಂದು ಖಂಡಿತವಾಗಿಯೂ ಹೇಳುವುದಕ್ಕಾಗುವುದಿಲ್ಲ. ಭಯದಿಂದ ಜನರು ವಶರಾಗುವರೇ ಹೊರತು ನ್ಯಾಯವು ಹಸ್ತಗತವಾಗಲಾರದು. ನ್ಯಾಯವು ದೊರೆಯಬೇಕಾದರೆ ತಾಳ್ಮೆಯಿರಬೇಕು, ಲೋಕಾನುಭವವಿರಬೇಕು, ಚಟುವಟಿಕೆ ಇರಬೇಕು, ತಿಳುವಳಿಕೆಯಿಂದಿರಬೇಕು, ಪಾಪಭೀತಿ ಇರಬೇಕು, ದೈವಭಕ್ತಿಯಿರಬೇಕು, ಎಲ್ಲದರಮೇಲೂ ಧರ್ಮ

ವೆಂಬುದು ಹೃದಯದಲ್ಲಿ ಶಾಶ್ವತವಾಗಿ ತುಂಬಿ ತುಳುಕಾಡುತ್ತಿರಬೇಕು. ಇಂತಹ ಸರ್ವಗುಣಸಂಪನ್ನನಾದ ಮಹನೀಯನೇ ಸದಸದ್ವಿವೇಕಪೂರ್ಣನಾದಾತನು. ಇಂಥವನೊಬ್ಬನಿಂದಲೇ ಲೋಕದ ಸ್ಥಿತಿಗತಿಗಳು ಸರಿಪಡಿಸಲ್ಪಡಬೇಕೇ ವಿನಾ ಹೆಚ್ಚಾಗಿ ಸಂಬಳ ತಿಂಬುವನಿಂದಾಗಲಿ, ಜಬರ್ದಸ್ತಿಯಿಂದ ಭಯೋತ್ಪಾದನೆ ಮಾಡುವನಿಂದಾಗಲಿ, ವೇಷಭೂಷಣಗಳಿಂದಾಗಲಿ ಯಾವ ಕೆಲಸವೂ ನೆರವೇರಲಾರದು. ಪ್ರಕೃತಸ್ಥಿತಿಯು ಚಮತ್ಕಾರವೇನೆಂದರೆ—ನಿಜವಾಗಿಯೂ ಯೋಗ್ಯನಾಗಿ ಧರ್ಮದಲ್ಲಿ ದೃಷ್ಟಿಯುಳ್ಳವನಿಗೆ ಲೋಕದೃಷ್ಟಿಯ ವಳಿಗೆಯೆಂಬುದೇ ಇರುವುದಿಲ್ಲ. ಯೋಗ್ಯನಾದವನ ಹಣೆಯಲ್ಲಿ ಅದೃಷ್ಟರೇಖೆಯನ್ನು ಉದ್ದೇಶಪೂರ್ವಕವಾಗಿ ಬರೆಯದ ವಿಧಿಯನ್ನು ಎಷ್ಟು ನಿಂದಿಸಿದರೂ ಸಾಲದಾಗಿದೆ.

ಪ್ರಕೃತ ಅರಿಂದಮನು ಯೋಗ್ಯರಲ್ಲಿ ಅಗ್ರಗಣ್ಯನಾಗಿದ್ದುಕೊಂಡೇ ಕೆಲಸಮಾಡತಕ್ಕವನಾಗಿದ್ದನು. ಬೇಗಬೇಗನೆ ಕೈಗೊಂಡ ಕಾರ್ಯವನ್ನು ಮುಗಿಸಿಬಿಟ್ಟು ಹೆಚ್ಚಾದ ಸಂಬಳಕ್ಕೆ ಏಟುಹಾಕಬೇಕೆಂಬುದು ಅವನ ಉದ್ದೇಶವೇ ಅಲ್ಲ. ಯಾವ ಕೆಲಸ ಮಾಡಿದರೂ, ಅದು ಸಮರ್ಪಕವಾಗಿಯೇ ಇರಬೇಕೆಂಬುದೇ ಅವನ ಮೂಲಮಂತ್ರವು. ಇಂತಹ ಅರಿಂದಮನು ಅಮರನಾಥನ ಅಪ್ಪಣೆಯನ್ನು ತೆಗೆದುಕೊಂಡು ಮುಂದಿನ ಕೆಲಸಕ್ಕೆ ತೆರಳಿದನು.

* * *

ಮೊದಲೇ ನಿಶ್ಚಯವಾಗಿದ್ದಂತೆ ಅರಿಂದಮನು ಮಾರನೆಯ ದಿನ ಸಾಯಂಕಾಲ ಶಶಿರೇಖೆಯ ಮನೆಗೆ ಬಂದನು. ಅಲ್ಲಿ ಶಶಿರೇಖೆಯೂ ರಾಮರತ್ನನೂ ಆತನ ಆಗಮನವನ್ನೇ ನಿರೀಕ್ಷಿಸಿಕೊಂಡಿದ್ದರು.

ಅರಿಂದಮನು ಬಂದು ಕುಳಿತಕೂಡಲೆ, ರಾಮರತ್ನನು—

ಸ್ವಾಮಿ, ತಾವು ಏನು ಕೇಳಬೇಕೆಂದಿರುವಿರೋ, ಅದನ್ನು ಕೇಳೋಣಾಗಲಿ, ಎಂದನು.

ಅರಿಂದಮ—ತಮ್ಮ ಯಜಮಾನನ ಅರ್ಥಾಪಹರಣದಲ್ಲಿ ತಮಗೆ ಗೊತ್ತಿರುವ ವಿಶೇಷ ಸಂಗತಿಗಳನ್ನು ತಿಳಿಸಬೇಕೆಂದು ಕೇಳುವೆನು.

ರಾಮ—ನನಗೆ ವಿಶೇಷವೇನೂ ಗೊತ್ತಿಲ್ಲ.

ಅರಿಂದಮ—ಐನೂರನ ಒಂದುಲಕ್ಷ ರೂಪಾಯಿಗಳು ಕಳುವಾದದ್ದಾದರೂ ಗೊತ್ತಿದೆಯೋ ಇಲ್ಲವೋ ?

ರಾಮ—ಅದು ಯಾರಿಗೆತಾನೇ ಗೊತ್ತಿಲ್ಲ. ವೃತ್ತಾಂತಪತ್ರಿಕೆಗಳಲ್ಲೆಲ್ಲಾ ಆ ವರ್ತಮಾನವಿರುವುದು. ಅದನ್ನು ಓದಿದವರಿಗೆಲ್ಲರಿಗೂ ಗೊತ್ತೇ ಇರುವುದು.

ಅರಿಂದಮ—ಕಳುವಿನ ಮೊಕದ್ದಮೆಯಲ್ಲಿ ತಾವೂ ಲಿಪ್ತರಾಗಿರುವಿರಿ ಎಂಬುದಕ್ಕೆ ಅನೇಕ ಪ್ರಮಾಣಗಳು ದೊರತಿವೆ.

ರಾಮ—ನಾನು-ನಾನು-ನಾನು ಲಿಪ್ತನಾಗಿರುವೆನೇ ? ಅದೇ ಸುಳ್ಳು.

ಅರಿಂದಮ—ಶರಚ್ಚಂದ್ರನು ದೋಷಿಯೆಂದು ತಾವು ತಿಳಿದಿರುವಿರೋ ?

ರಾಮ—ಸಂದೇಹವೇನು ?

ಈ ಮಾತನ್ನು ಕೇಳಿ ಅರಿಂದಮನು ತನ್ನ ಜೇಬಿನಿಂದ ಹಿಂದೆ ಹೇಳಿದ ಕಾಗದದ ತುಂಡನ್ನು ಹೊರಗೆ ತೆಗೆದು ರಾಮರತ್ನನಿಗೆ ತೋರಿಸಿದನು. ಅದನ್ನು ನೋಡಿದಕೂಡಲೆ ರಾಮರತ್ನನು ಗಡಗಡ ನಡುಗಿದನು.

ಅರಿಂದಮ—ಈ ಕಾಗದವನ್ನು ತಾವು ಎಲ್ಲಿಯಾದರೂ ನೋಡಿದ್ದಿರಾ ?

ರಾಮರತ್ನನ ಮುಖವು ವಿವರ್ಣವಾಯಿತು, ಬಾಯಿ ಒಣಗಿ ಹೋಯಿತು, ಬಾಯಿಂದ ಮಾತೇ ಹೊರಡಲಿಲ್ಲ. ಇದನ್ನು ನೋಡಿ ಅರಿಂದಮನು ಮತ್ತೆ ಅದೇ ಪ್ರಶ್ನೆಯನ್ನು ಮಾಡಿದನು.

ರಾಮ—(ಕಂಪಿತಸ್ವರದಿಂದ) ಈ ಕಾಗದವು ತಮಗೆ ಎಲ್ಲಿ ಸಿಕ್ಕಿತು ?

ಅರಿಂದಮ—ಈ ಮನೆಯ ಬಾಗಿಲಿನಲ್ಲಿ.

ರಾಮ—ಯಾರು ಬೀಸಾಡಿದ್ದರೋ ನನಗೇನು ಗೊತ್ತು ?

ಅರಿಂದಮ—(ಉಚ್ಚಸ್ವರದಿಂದ) ನಿಮಗೆ ಗೊತ್ತಿಲ್ಲವೇ ? ನಿಮ್ಮ ಜೇಬಿನಿಂದಲೇ ಇದು ಕೆಳಗೆ ಬಿದ್ದಿರುವುದೆಂಬುದನ್ನು ನೀವು ಒಪ್ಪುವುದಿಲ್ಲವಷ್ಟೆ ?

ರಾಮ—ತಾವು ಈರೀತಿಯಲ್ಲಿ ಸಂದೇಹಪಡಲು ಕಾರಣ ವೇನು ?

ಅರಿಂದಮ—ತಾವು, ತಮ್ಮ ಯಜಮಾನರು, ಶಚೀಂದ್ರ, ಇವರು ಹೊರತಾಗಿ ಮತ್ತಾರಿಗೂ ಈ ಕಾಗದದ ಸಂಗತಿಯು ಗೊತ್ತಿಲ್ಲ. ನಿಮ್ಮನ್ನು ಬಿಟ್ಟರೆ, ಈ ಮನೆಗೆ ಅವರಿಬ್ಬರಲ್ಲಿ ಮತ್ತಾರು ಬರುವರು ?

ರಾಮರತ್ನನು ಸುಮ್ಮನಿದ್ದುಬಿಟ್ಟನು. ಅರಿಂದಮನು— ನೀವು ಸತ್ಯವಾಗಿ ಹೇಳಿರಿ, ಅದರಿಂದ ನಿಮಗೆ ಒಳ್ಳೆಯದಾಗುವುದು, ಎಂದು ಹೇಳಿದ್ದನ್ನು ಕೇಳಿ, ರಾಮರತ್ನನು ತಲೆಯನ್ನು ಬಗ್ಗಿಸಿ ಕೊಂಡು ಮೆಲ್ಲಮೆಲ್ಲನೆ—ಈ ಕಾಗದವು ನನ್ನ ಜೇಬಿನಿಂದಲೇ ಕೆಳಗೆ ಬಿದ್ದಿತು, ಎಂದನು.

ಶಶಿರೇಖೆಯು ಈ ಮಾತನ್ನು ಕೇಳಿ ಕೋಪವ್ಯಂಜಕವಾದ ನೋಟದಿಂದ ರಾಮರತ್ನನನ್ನು ನೋಡಿದಳು. ಅರಿಂದಮನು—ಈ

ವಿಷಯವನ್ನು ಈರೀತಿಯಾಗಿ ಕಾಗದದಲ್ಲಿ ಬರೆದಿಡಲು ಕಾರಣ ವೇನು ? ಎಂದು ಕೇಳಿದನು.

ರಾಮು—ನನಗೆ ತಿಳಿಯದು.

ಅರಿಂದಮು—ಅದೆಂತಹ ಮಾತು ? ಈ ಕಾಗದವನ್ನು ನೀವೇ ಬರೆದಿಟ್ಟುಕೊಂಡು, ಅದರ ಕಾರಣ ಗೊತ್ತಿಲ್ಲವೆಂದು ಹೇಳುವ ಮಾತು ಅದೆಂತಹದು ? ನಿಮಗೆ ತಿಳಿಯದೋ ?

ರಾಮು—ತಿಳಿಯದು.

ಅರಿಂದಮು—ಜ್ಞಾಪಿಸಿಕೊಳ್ಳಿರಿ. ಜ್ಞಾಪಿಸಿಕೊಂಡು ಹೇಳಿಯೇ ತೀರಬೇಕು.

ರಾಮು—ಹಾಗೆ ನಾನು ಹೇಳಿದರೂ ನೀವು ನಂಬುವುದಿಲ್ಲ.

ಅರಿಂದಮು—ಇದು ಯಾರ ಅಕ್ಷರ ? ನಿಮ್ಮದಲ್ಲವೇ ?

ರಾಮು—ಇದು ನನ್ನದಲ್ಲ, ಇದು ಯಾರು ಬರೆದಿದ್ದೋ ನನಗೆ ಗೊತ್ತಿಲ್ಲ.

ಅರಿಂದಮು—ಇದು ನಿಮ್ಮ ಅಕ್ಷರವಲ್ಲವೆಂದು ಪ್ರಮಾಣವಾಗಿ ಹೇಳುವಿರಾ ?

ರಾಮು—ಹೇಳುವೆನು. ಪರಮೇಶ್ವರನ ಆಣೆಗೂ ಇದು ನನ್ನ ಅಕ್ಷರವಲ್ಲ.

---

## ಎಂಟನೆಯ ಅಧ್ಯಾಯ.

ಅರಿಂದಮನು ಕ್ಷಣಕಾಲ ಯೋಚಿಸಿ—ತಾವು ಬರಿಯದೇ ಇದ್ದರೆ, ಇದನ್ನು ಬರೆದವರಾರು ? ತಮ್ಮ ಜೇಬಿನಲ್ಲಿರಲು ಕಾರಣ ವೇನು ? ಎಂದನು.

ರಾಮು—ನಾನು ಹೇಳುವುದನ್ನು ನಂಬುವುದಾದರೂ ನಂಬಿ, ಬಿಡುವುದಾದರೂ ಬಿಡಿ; ನಾನು ನಡೆದಿದ್ದನ್ನು ಹೇಳುವೆನು. ಇದು

ನನ್ನ ಜೇಬಿನಲ್ಲಿ ಹೇಗೋ ಬಂದಿತು. ನಿನ್ನೆಯ ದಿನ ನಾನು ಜೇಬಿನಲ್ಲಿ ಕೈಹಾಕಿ ನೋಡಿದಾಗ ಇದು ಸಿಕ್ಕಲು, ಇದನ್ನು ನೋಡಿ ಯಾರಾದರೂ ಕಂಡರೆ ಸಂದೇಹಪಟ್ಟಾರೆಂಬ ಭಯದಿಂದ ನಾನು ಹೊರಗೆ ಬೀಸಾಡಿದೆನು.

ಅರಿಂದಮ—ನಿನ್ನ ಜೇಬಿನಲ್ಲಿ ಇದು ಹೇಗೆ ಬಂದಿತು ?

ರಾಮ—ಅದು ಗೊತ್ತಾಗಿದ್ದರೆ ನಿಮಗೆ ನಾನು ಇಷ್ಟು ತೊಂದರೆ ಕೊಡುತ್ತಿರಲಿಲ್ಲ.

ಅರಿಂದಮ—ಒಳ್ಳೆಯದು, ಇಲ್ಲಿನವರೆಗೂ ನೀವು ಹೇಳಿದ್ದನ್ನು ನಾನು ಸತ್ಯವೆಂದು ನಂಬುವೆನು. ನನ್ನಿದಿರಿನಲ್ಲಿ ಸುಳ್ಳು ಹೇಳುವುದಾದರೆ, ನಿಮ್ಮ ಪ್ರಾಣವು ನಿಮ್ಮದಲ್ಲನೆಂದು ತಿಳಿಯಿರಿ. ನಾನು ಕೆಲವು ಪ್ರಶ್ನೆಗಳನ್ನು ಕೇಳುವೆನು. ಅದಕ್ಕೆಲ್ಲಾ ಸಮುತ್ತರವನ್ನು ಕೊಡಬೇಕು. ಅದರಲ್ಲಿ ಕಿಂಚಿತ್ತೂ ಸುಳ್ಳಿರಬಾರದು. ಪ್ರಮಾಣವಾಗಿ ಹೇಳಿರಿ.

ರಾಮ—ನಾನು ಪ್ರಮಾಣಮಾಡಿ ಕೊಡಲಾರೆನು.

ಅರಿಂದಮ—ಅದೇಕೆ ?

ರಾಮ—ಕೆಲವು ಪ್ರಕಾಶಕ್ಕೆ ಯೋಗ್ಯವು; ಕೆಲವು ಪ್ರಕಾಶಕ್ಕೆ ಯೋಗ್ಯವಲ್ಲವು. ಹೀಗಿರುವಲ್ಲಿ ನಾನು ಪ್ರಮಾಣವನ್ನು ಹೇಗೆ ಮಾಡಲಿ ?

ಅರಿಂದಮ—ಪ್ರಕಾಶಕ್ಕೆ ಯೋಗ್ಯವಲ್ಲದ್ದನ್ನು ಹೇಳಬೇಡಿರಿ, ಆದರೆ ಪ್ರಕೃತ ಸಂದರ್ಭದಲ್ಲಿ ಎಲ್ಲವನ್ನೂ ತಿಳಿಸುವುದು ಉಚಿತವಾದುದು. ನಾನು ಕೇಳುವುದಕ್ಕೆಲ್ಲಾ ನೀವು ಸರಿಯಾಗಿ ಉತ್ತರ ಕೊಡದೇ ಹೋದರೆ, ನಾನು ನಿಮ್ಮನ್ನು ದಸ್ತಗಿರಿ ಮಾಡುವೆನು

ರಾಮ—ಕೇಳೋಣಾಗಲಿ.

ಅರಿಂದಮ—ಜೀಮೂತವಾಹನನೊಡನೆ ತಮಗಿರುವ ಸಂಬಂಧವನ್ನು ನಾನು ಚೆನ್ನಾಗಿಯೂ ಬಲ್ಲೆನು.

ಈ ಮಾತಿಗೆ ಉತ್ತರ ಕೊಡಲು ದಿಕ್ಕೇ ತೋರದವನಾಗಿ, ರಾಮರತ್ನನು ಶಶಿರೇಖೆಯನ್ನು ನೋಡಿ ತಲೆಯನ್ನು ಬಗ್ಗಿಸಿಕೊಂಡುಬಿಟ್ಟನು. ಅರಿಂದಮನು ಇದನ್ನು ಕಂಡು, ಶಶಿಯ ಇದಿರಿಗೆ ಈ ವಿಷಯಗಳು ಬಹಿರಂಗಪಡಲಾರವೆಂದು ತಿಳಿದು, ಕಣ್ಣಿನ ಸಂಜ್ಞೆಯಿಂದ ಆಕೆಯನ್ನು ದೂರ ಹೋಗುವಂತೆ ತಿಳಿಸಿದನು. ಅದರಂತೆಯೇ ಆಕೆಯು ಆ ಕೂಡಲೆ ಎದ್ದು ಹೊರಟುಹೋದಳು.

## ಒಂಭತ್ತನೆಯ ಅಧ್ಯಾಯ.

ಶಶಿಯು ಹೊರಟು ಹೋದಮೇಲೆ, ಅರಿಂದಮನು ಮತ್ತೆ ಅದೇ ಪ್ರಶ್ನೆಯನ್ನೇ ಹಾಕಿದನು. ಅದಕ್ಕೆ ಉತ್ತರವಾಗಿ ರಾಮರತ್ನನು—ನಾನು ಆತನ ಜೂಜಿನ ಕಟ್ಟೆಗೆ ಆಗಿಂದಾಗ ಹೋಗುವುದುಂಟು, ಎಂದನು.

ಅರಿಂದಮ—ಜೂಜಾಡಿ ಬಹಳ ಹಣ ಹೋಗಿರಬೇಕು.

ರಾಮ—ಅಹುದು.

ಅರಿಂದಮ—ಯಾರೊಡನೆ ಜೂಜಾಡುವಿರಿ ?

ರಾಮ—ನಮ್ಮ ದೇಶಸ್ಥನಾದ ತಾರಾಪೀಡನೆಂಬ ಯುವಕನೊಡನೆ ನಾನು ಜೂಜಾಡಿ ಬಹಳ ಕಳೆದುಕೊಂಡಿರುವೆನು.

ಅರಿಂದಮ—ಎಷ್ಟು ?

ರಾಮ—ಐದು ಸಾವಿರ ರೂಪಾಯಿಗಳು.

ಅರಿಂದಮ—ಇದೇನಾಶ್ಚರ್ಯ ! ತಾವು ಸಣ್ಣ ನೌಕರಿಯಲ್ಲಿದ್ದು

ಇಷ್ಟು ಕಳೆದುಕೊಂಡ ಬಗೆ ಹೇಗೆ? ಇಷ್ಟು ಹಣವನ್ನು ತಾವು ತೀರಿಸುವ ಬಗೆ ತಾನೆ ಹೇಗೆ?

ರಾಮು—ನನಗೆ ಗೊತ್ತಿಲ್ಲ.

ಅರಿಂದಮ—ನೀವೇನು ಮಾಡುವಿರಿ?

ರಾಮು—ದೇವರೇ ಕಾಪಾಡಬೇಕು.

ಅರಿಂದಮ—ನಾನು ಜೀಮೂತನ ಮನೆಗೆ ಹೋಗಿದ್ದಾಗ, ನೀವು ಮುದುಕನಂತೆ ವೇಷವನ್ನು ಧಾರಣ ಮಾಡಿರಲಿಲ್ಲವೆ?

ರಾಮು—ತಮಗೆ ನಾನೇ ಎಂದು ಗೊತ್ತಾದುದು ಹೇಗೆ?

ಅರಿಂದಮ—ನಾನು ಮರೆಯಾಗಿದ್ದುಕೊಂಡೇ ನಿಮ್ಮಗಳ ಮಾತನ್ನು ಕೇಳಿದೆನು.

ರಾಮರತ್ನನು ಅರಿಂದಮನನ್ನು ದುರುದುರು ನೋಡಲಾರಂಭಿಸಿದನು.

ಅರಿಂದಮ—ಆದಿನ ನೀವಿಬ್ಬರೂ ಶರಚ್ಚಂದ್ರನ ಮೇಲೆ ದೋಷವನ್ನು ಆರೋಪಿಸುತ್ತಿರಲಿಲ್ಲವೆ?

ರಾಮು—ನಾನಲ್ಲ.

ಅರಿಂದಮ—ಸುಳ್ಳಾಡಬೇಡಿ. ನಾನೆಲ್ಲವನ್ನೂ ಬಲ್ಲೆನು.

ರಾಮು—ಜೀಮೂತನು ಶರಚ್ಚಂದ್ರನಿಗೆ ಸರ್ವನಾಶ ಮಾಡಬೇಕೆಂದಿರುವುದೇನೋ ನಿಜ, ಆದರೆ ಅವನಿಂದ ಇನ್ನೇನೂ ತಪ್ಪಿಲ್ಲ.

ಅರಿಂದಮ—ಶರತ್ತನ್ನು ಹಾಳುಮಾಡಬೇಕೆಂದು ಅವನಿಗೆ ಹಠವೇತಕೆ?

ರಾಮು—ಅದು ನನಗೆ ತಿಳಿಯದು.

ಅರಿಂದಮ—ನಿಮಗೆ ಎಲ್ಲವೂ ಗೊತ್ತು. ಅದನ್ನು ನಾನು ಬಲ್ಲೆ.

ರಾಮು—ನನಗೆ ಖಂಡಿತವಾಗಿಯೂ ಗೊತ್ತಿಲ್ಲ. ನನ್ನಮೇಲಿನ ಅಪವಾದವನ್ನು ತಪ್ಪಿಸಿಕೊಳ್ಳುವುದಕ್ಕಾಗಿ ನಾನು ಯತ್ನಮಾಡುತ್ತಿರುವೆನು. ಶರಚ್ಚಂದ್ರನೇ ದೋಷಿಯೆಂದು ಪ್ರಮಾಣಗಳು ಸಿಕ್ಕಿರುವುದಾಗಿ ತಿಳಿದುಬಂದದ್ದರಿಂದ, ಆತನೇ ದೋಷಿಯಾಗಿರಬೇಕು. ಆದರೆ ಒಬ್ಬನಿಂದಲೇ ಇಷ್ಟು ಕೆಲಸವು ನಡೆದಿರುವುದೆಂದು ಹೇಳುವುದಕ್ಕೂ ಆಗುವುದಿಲ್ಲ; ಹೇಳಿದರೆ ನಂಬುವುದಕ್ಕೂ ಆಗುವುದಿಲ್ಲ.

ಅರಿಂದಮನು ರಾಮರತ್ನನ ಬಾಯಿಂದ ಈ ರೀತಿಯಲ್ಲಿ ಮಾತು ಹೊರಟದ್ದನ್ನು ಕೇಳಿ ವಿಸ್ಮಿತನಾಗಿ, ಯಾವಮಾತು ನಂಬುವುದು, ಯಾವಮಾತು ನಂಬದಿರುವದು, ಎಂದು ದೋಲಾಯಮಾನ ಮಾನಸನಾದನು. ಅನಂತರ ಬಹಳ ಹೊತ್ತು ದಿಕ್ಕು ತೋರದವನಾಗಿ, ಅರಿಂದಮನು ಶರಚ್ಚಂದ್ರನಿಗೆ ಸುಮಿತ್ರಿಗಳಾರಾಗಿರುವರು? ಎಂದು ಕೇಳಿದನು.

ರಾಮು—ಅದು ನನಗೆ ಗೊತ್ತಿಲ್ಲ.

ಅರಿಂದಮ—ಶರಚ್ಚಂದ್ರನು ಮಧುವನಕ್ಕೆ ಹೋಗಿರುವನೇ ಇಲ್ಲವೇ? ಅದಾದರೂ ಗೊತ್ತುಂಟೆ?

ರಾಮು—ಗೊತ್ತಿಲ್ಲ.

ಅರಿಂದಮ—ಆ ದಿನ ನೀವೂ ಜೀಮೂತವಾಹನನೂ ಸೇರಿಕೊಂಡು ಮಾತನಾಡುತಿದ್ದದನ್ನು ನೋಡಿದರೆ, ಈ ಘೋರಕೃತ್ಯದಲ್ಲಿ ನೀವಿಬ್ಬರೇ ಕಾರಣರೆಂದು ಸ್ಥಿರಪಡುವುದು.

ರಾಮು—ಜೀಮೂತನಿಗೆ ಕೊಂಚಕೊಂಚ ತಿಳಿದಿದ್ದರೂ ತಿಳಿದಿರಬಹುದು.

ಅರಿಂದಮ—ತಮಗೆ ಗೊತ್ತಿಲ್ಲದಿರಲು ಕಾರಣವೇನು?

ರಾಮು—(ನಿರ್ಭಯದಿಂದ) ನನಗೆ ತಿಳಿದದ್ದನ್ನು ಬಿಂದುಮಾ

ತ್ರವೂ ಲೋಪವಿಲ್ಲದೆ ತಿಳಿಸಿರುವೆನು. ಶರಚ್ಚಂದ್ರನೇ ಈ ಕಾರ್ಯದಲ್ಲಿ ಪ್ರಮುಖನೆಂದು ನಾನು ನಂಬಿರುವೆನು.

ಅರಿಂದಮ—(ಯೋಚಿಸಿ) ನಿಮಗೆ ಈ ಸಂದರ್ಭದಲ್ಲಿ ಏನೂ ಗೊತ್ತಿಲ್ಲದಮೇಲೆ, ವೇಷಾಂತರವನ್ನು ಧಾರಣಮಾಡಿ ಜೀಮೂತನಲ್ಲಿಗೆ ಹೋಗಲು ಕಾರಣವೇನು ?

ರಾಮ—ತಾರಾಪೀಡನು ನನ್ನನ್ನು ಗುರುತಿಸಿ ಹಿಂಸೆಪಡಿಸುವನೆಂಬ ಭಯದಿಂದ ನಾನು ತಲೆಯನ್ನು ಮರೆ ಮಾಡಿಕೊಂಡು ತಿರುಗಾಡುವೆನು.

ಅರಿಂದಮ—ಜೀಮೂತನು ತನ್ನ ವೇಷಾಂತರಕ್ಕೆ ಕಾರಣವನ್ನು ಬಲ್ಲನೋ ?

ರಾಮ—ತಿಳಿಯದೆ ಏನು ? ಅವನೇ ನನಗೆ ವೇಷವನ್ನು ಬದಲಾಯಿಸುವಂತೆ ಹೇಳಿಕೊಟ್ಟಿರುವುದಲ್ಲದೆ, ನನ್ನ ಸಾಲವನ್ನೂ ಆತನೇ ತೀರಿಸುವುದಾಗಿಯೂ ಹೇಳಿರುವನು.

ಅರಿಂದಮ—ಗೊತ್ತಾಯಿತು, ಗೊತ್ತಾಯಿತು. ಆತನ ಉಪಕಾರಕ್ಕೆ ಪ್ರತ್ಯುಪಕಾರವಾಗಿ, ಶರಚ್ಚಂದ್ರನನ್ನು ನಾಶಪಡಿಸುವುದಕ್ಕೆ ತಾವು ಆತನಿಗೆ ಸಹಾಯರಾಗಿರುವಿರಿ. ಉಂಡಮನೆಗೆ ಎರಡು ಬಗೆಯುವುದು ಯಾವ ಧರ್ಮ!

ರಾಮ—ಹಾಗೆ ಹೇಳಿದರೂ ಹೇಳಬಹುದು, ಆದರೆ ಜೀಮೂತನು ಸುಳ್ಳು ಹೇಳಬೇಕೆಂದು ನನಗೆ ಉಪದೇಶ ಮಾಡಿಲ್ಲ. ಈ ಕಳುವಿನಲ್ಲಿ ಇತರರು ಯಾರಮೇಲೆ ಸಂದೇಹ ಪಡುವರೋ, ಜೀಮೂತನೂ ಆತನ ಮೇಲೆಯೇ ಸಂದೇಹ ಪಡುವನು. ನನ್ನ ಅಭಿಪ್ರಾಯವೂ ಅದೇ ಆಗಿರುವುದರಿಂದ, ನಾನು ಆತನಿಗೆ ಸಹಾಯನಾಗುವುದಾದರೆ ಬಾಧಕವೇನೂ ಇರಲಾರದಷ್ಟೆ ? ಇಷ್ಟು ಹೊರತಾಗಿ

ಮತ್ತಾವ ಸಂಗತಿಯೂ ನನಗೆ ಗೊತ್ತಿಲ್ಲ. ನಾನು ಯಾರ ವಿನಾಶಕ್ಕೂ ಬದ್ಧಕಂಕಣನಲ್ಲ.

ಅರಿಂದಮ—ರಾಮಭಕ್ತ ಮಹಾಶಯ! ನಾನು ತಮ್ಮಿಂದ ಕೇಳಿ ತಿಳಿಯಬೇಕೆಂದಿದ್ದುದನ್ನು ತಿಳಿದಿದ್ದಾಯಿತು. ತಮಗೆ ನಾನು ಮತ್ತಾವ ವಿಧವಾದ ತೊಂದರೆಯನ್ನೂ ಕೊಡಲಾರೆನು. ತಾವು ಅಪರಾಧಿಯೆಂಬ ಸಂಶಯವು ಈಗ ದೂರ ತೊಲಗಿತು. ತಾವು ಇನ್ನು ಯಾವುದಕ್ಕೂ ಹೆದರಬೇಕಾದುದಿಲ್ಲ. ನೀವು ಎಂದಿನಂತೆ ನಿಶ್ಚಿಂತರಾಗಿರಬಹುದು. ಆದರೆ ತಾವು ನನಗೆ ಪ್ರತಿಜ್ಞೆ ಮಾಡಿಕೊಡಬೇಕಾದ್ದೇನೆಂದರೆ—ನಾನು ಮತ್ತಾವಾಗಲಾದರೂ ಈ ವಿಧವಾದ ಪ್ರಶ್ನೆಯನ್ನು ಮಾಡಿದರೆ, ಅವಕ್ಕೆ ಇದೇ ರೀತಿಯಲ್ಲಿ ಉತ್ತರ ಕೊಡಬೇಕು.

ರಾಮ—ನಾನದರಂತೆಯೇ ಪ್ರತಿಜ್ಞೆ ಮಾಡುವೆನು.

ಅರಿಂದಮ—ಮತ್ತೊಂದು ವಿಷಯ. ನಾನು ತಮ್ಮಲ್ಲಿಗೆ ಬಂದು ಮೇಲ್ಕಂಡಂತೆ ಜಿಜ್ಞಾಸೆ ಮಾಡಿದ್ದನ್ನು ತಾವು ಮತ್ತಾರಲ್ಲಿಯೂ ಹೇಳಕೂಡದು. ಒಂದುವೇಳೆ ಹೇಳುವುದಾದರೆ ನನ್ನ ಕೆಲಸವೆಲ್ಲವೂ ಕೆಟ್ಟುಹೋಗುವ ಸಂಭವವುಂಟು.

ರಾಮ—ಅದರಂತೆಯೇ ನಡೆದುಕೊಳ್ಳುವೆನು.

ಅರಿಂದಮ—ನಾನು ತಮ್ಮಿಂದ ಅಪ್ಪಣೆಯನ್ನು ತೆಗೆದುಕೊಂಡು ಹೋಗುವುದಕ್ಕೆ ಮುಂಚೆ, ತಾವು ಮಾತ್ರ ಯಾವ ಕಾರಣದಿಂದಲೂ ತಾರಾಪೀಡನೊಡನೆ ಯಾವ ಮಾತನ್ನೂ ಆಡಕೂಡದೆಂದು ಕೇಳಿಕೊಳ್ಳುವೆನು. ತಮಗೆ ತೊಂದರೆಯುಂಟಾಗದಂತೆ ನೋಡಿಕೊಳ್ಳುವ ಭಾರ ನನ್ನದಾಗಿರುವುದು.

ಅರಿಂದಮನು ಈ ರೀತಿಯಲ್ಲಿ ಕಟ್ಟುಮಾಡಿ ಅಲ್ಲಿಂದ ಮುಂದಕ್ಕೆ ತೆರಳಿದನು. ಹೊರಗಡೆ ಶಶಿರೇಖೆಯು ಕಾದಿರಲು, ಆಕೆಗೆ

ಸಾಕ್ಷೇಪವಾಗಿ ನಡೆದ ಸಂಗತಿಗಳೆಲ್ಲವನ್ನೂ ಹೇಳಿ, ಅರಿಂದಮನು ಆ ಮನೆಯಿಂದ ಹೊರಗೆ ಹೊರಟುಹೋದನು.

## ಹತ್ತನೆಯ ಅಧ್ಯಾಯ.

ವಾಚಕ ಮಹಾಶಯರೆ ! ಹಿಂದಿನ ಅಧ್ಯಾಯದಲ್ಲಿ ಅರಿಂದಮನಿಗೂ ರಾಮರತ್ನನಿಗೂ ನಡೆದ ಸಂಭಾಷಣೆಯನ್ನು ತಾವು ಓದೋಣವಾಯಿತು. ಅರಿಂದಮನು ರಾಮರತ್ನನ ಮಾತನ್ನು ಸತ್ಯವೆಂದು ನಂಬಿ ಅವನಿಗೆ ಅಭಯವನ್ನು ಕೊಟ್ಟು ಹೊರಟುಹೋದನು. ಅಭಿಜ್ಞನಾದ ಅರಿಂದಮನು ಈ ರೀತಿಯಾಗಿ ಮಾಡಿದುದು ಯುಕ್ತವೆ? ತನ್ನನ್ನು ತಾನೇ ನಂಬದ ಮನುಷ್ಯನು ಇತರರನ್ನು ಈ ರೀತಿಯಲ್ಲಿ ನಂಬುವುದು ಯುಕ್ತವಾದುದೆಂದು ಯಾರುತಾನೇ ಹೇಳಬಲ್ಲರು. ಅಥವಾ ರಾಮರತ್ನನಿಗೆ ಪ್ರಲೋಭನೆಯನ್ನುಂಟುಮಾಡುವುದಕ್ಕಾಗಿ ಅರಿಂದಮನು ಹೀಗೆ ಪ್ರವರ್ತಿಸಿರುವನೆ? ಇದ್ದರೂ ಇರಬಹುದು. ಪತ್ತೇದಾರನಾದವನು ಬಗೆಬಗೆಯ ಜನರೊಡನೆ ಸಹವಾಸ ಮಾಡಬೇಕಾಗಿರುವುದು. ಬಗೆಬಗೆಯ ಜನರ ಮನೋಭಿಪ್ರಾಯಗಳು ಬಗೆಬಗೆಯಾಗಿರುವುದರಿಂದ, ಕಾರ್ಯಪರನಾದವನು ಇತರರಿಗೆ ಅವಿರೋಧವಾಗಿ ನಡೆಯುತ್ತಿದ್ದು ತನ್ನ ಕಾರ್ಯವನ್ನು ಸಾಧಿಸಿಕೊಳ್ಳುವನು. ಜನರ ಇಷ್ಟಾನುಸಾರವಾಗಿ ನಡೆದುಕೊಳ್ಳುತ್ತಾ, ತನ್ನ ಉದ್ದೇಶವನ್ನು ನಾಶಪಡಿಸಿಕೊಳ್ಳದಿರತಕ್ಕವನೇ ಈ ಲೋಕದಲ್ಲಿ ಧನ್ಯನು. ಅನೇಕರ ಸ್ವಭಾವವು ಇದಕ್ಕೆ ವಿಪರೀತವಾಗಿಯೇ ಕಂಡುಬರುವುದು. ಅಂತಹವರು ಚರಿತ್ರೆಯಲ್ಲಿ ಅಂಕಿತರಾಗುವುದಕ್ಕೆ ಯೋಗ್ಯರಾಗರು.

ಪ್ರಕೃತಪಕ್ಷದಲ್ಲಿ ಸತ್ಯೋದಾರನೆನಿಸಿದ ಅರಿಂದಮನು ರಾಮರತ್ನನ ಹೇಳಿಕೆಯನ್ನು ನಿಜವೆಂದು ನಂಬಿದವನಂತೆ ನಟನೆಮಾಡಿದರೂ, ಅವನಿಗೆ ಅಂತರ್ಯದಲ್ಲಿ ರಾಮರತ್ನನ ಮೇಲೆ ಸಂಶಯವು ಬಲವತ್ತರವಾಗಿಯೇ ಇದ್ದಿತು. ಆದುದರಿಂದ ರಾಮರತ್ನನು ಸಂಪೂರ್ಣವಾಗಿ ನಿರಪರಾಧಿಯೆಂದು ಅವನಿಗೆ ತೋರಿಬರಲಿಲ್ಲ. ಆದರೆ ಈ ಕಳುವಿನಲ್ಲಿ ರಾಮರತ್ನನು ಪ್ರಧಾನಸೂತ್ರಧಾರನಲ್ಲವೆಂದು ಮಾತ್ರ ದೃಢಪಟ್ಟಿತಾದ್ದರಿಂದ, ಅರಿಂದಮನು ಅವನನ್ನು ದಸ್ತಗಿರಿಮಾಡಲಿಲ್ಲ. ಒಂದು ವೇಳೆ ಆತನು ದಸ್ತಗಿರಿಮಾಡಿ ತನ್ನ ಕಾರಕರ್ದನ್ನು ಚಲಾಯಿಸಿದ್ದರೆ, ಕಾರ್ಯವೆಲ್ಲವೂ ಛಿನ್ನವಿಚ್ಛಿನ್ನವಾಗಿ ಹೋಗುತ್ತಿದ್ದಿತು. ಅರಿಂದಮನು ಇದನ್ನು ಚೆನ್ನಾಗಿ ತಿಳಿದೇ ರಾಮರತ್ನನಿಗೆ ಅಭಯವನ್ನು ಕೊಟ್ಟು ನಿರ್ದೋಷಿಯಂತೆ ಮನಬಂದಕಡೆ ತಿರುಗಬಹುದೆಂದು ಅಪ್ಪಣೆಮಾಡಿದನು. ಹೀಗೆ ಮಾಡುವುದರಿಂದ ನಿಜವಾದ ಅಪರಾಧಿಯು ಅವನ ಚಾಲ್‌ಚಲನಗಳಿಂದಲೇ ಸಿಕ್ಕುವನೆಂದು ಅವನಿಗೆ ಚೆನ್ನಾಗಿಯೂ ತಿಳಿದಿದ್ದಿತು.

ಅರಿಂದಮನು ಮತ್ತೆ ಎರಡು ದಿನಗಳು ನಾನಾಸ್ಥಳಗಳಲ್ಲಿ ಸಂಚಾರಮಾಡಿದನು. ಬಗಬಗೆಯ ವೇಷವನ್ನು ಧಾರಣಮಾಡಿ ತಾರಾಪೀಡ, ರಾಮರತ್ನ, ಜೀಮೂತ, ಇವರುಗಳ ಹಿಂದೆಹಿಂದೆಯೇ ತಿರುಗಾಡಲುಪಕ್ರಮಿಸಿದನು.

*　　*　　*　　*

ಒಂದು ದಿನ ಅಕಸ್ಮಾತ್ತಾಗಿ ಅರಿಂದಮನು ವಿಲಕ್ಷಣವೇಷವನ್ನು ಹಾಕಿಕೊಂಡು ಜೀಮೂತನ ಜೂಜಿನಕಟ್ಟೆಗೆ ಬಂದು— ಇಲ್ಲಿ ತಾರಾಪೀಡನಿರುವನೋ ? ಎಂದು ಕೇಳಿದನು.

ಜೀಮೂತ—ಆತನಿಂದೇನಾಗಬೇಕು ?

ಅರಿಂದಮ—ಆತನೊಡನೆ ಮಾತನಾಡಬೇಕು.

ಜೀಮೂತ—ಆತನಿಲ್ಲಿಗೆ ಬರಲಿಲ್ಲ.

ಅರಿಂದಮ—ಆತನನ್ನು ತಾವು ಬಲ್ಲಿರಾ ?

ಜೀಮೂತ—ಗೊತ್ತಿಲ್ಲದೇ ಏನು ! ಐದುಸಾವಿರ ರೂಪಾಯಿ-

ಅರಿಂದಮ—ಆತನಿಂದ ತಮಗೆ ಬರಬೇಕಾದುದೇ ?

ಜೀಮೂತ—ಅಹುದು, ಆತನು ಬೇಗನೆ ಸಾಲವನ್ನು ತೀರಿಸ ಬಲ್ಲವನಾಗಿರುವನು.

ಅರಿಂದಮ—ಐದುಸಾವಿರ ರೂಪಾಯಿ ! ಎದೆ ಒಡೆದುಹೋಗುವುದು.

ಜೀಮೂತ—ಒಬ್ಬನಾದರೆ ಎದೆಯೊಡೆಯುವುದೇ ನಿಜ.

ಅರಿಂದಮ—ಆತನ ಜತೆಗೆ ಮತ್ತಾರಿರುವರು ?

ಜೀಮೂತ—ರಾಮರತ್ನನೆಂಬೊಬ್ಬನಿರುವನು; ಇವರಿಬ್ಬರೂ ಸೇರಿ ಹಣವನ್ನು ತೀರಿಸಬೇಕು.

ಅರಿಂದಮ—ರಾಮರತ್ನ ! ಅಮರನಾಥನ ಬಳಿಯಲ್ಲಿ ಒಬ್ಬ ಸಾಮಾನ್ಯನಾದ ಗುಮಾಸ್ತನಾಗಿರುವನಲ್ಲವೇ ?

ಜೀಮೂತ—ಆದರೇನು ? ಪ್ರತಿನಿತ್ಯವೂ ಆತನು ಎಷ್ಟು ಹಣವನ್ನು ಚಲಾವಣೆಮಾಡುವನೆಂಬುದು ನಿಮಗೆ ಗೊತ್ತೇ ? ಆತನು ಹಣವನ್ನು ತೀರಿಸಲಾರನೆಂಬ ಭಯವೇನೂ ನನಗಿಲ್ಲ.

ಅರಿಂದಮ—ಏನು ? ರಾಮರತ್ನನು ಅಮರನಾಥನ ಸರ್ವಸ್ವವನ್ನೂ ಹಾಳುಮಾಡುವುದರಲ್ಲಿ ಉದ್ಯುಕ್ತನಾಗಿರುವನೇ ?

ಜೀಮೂತ—ಹಾಗೆ ಹೇಳಲು ನಾನು ಇಷ್ಟಪಡುವುದಿಲ್ಲ.

ಅರಿಂದಮನು ಈ ಮಾತನ್ನು ಕೇಳಿ ವಿಸ್ಮಿತನಾಗಲು, ಜೀಮೂತನು ಆತನನ್ನು ನೋಡಿ ವೇಷಧಾರಿಯಾದ ಪತ್ತೇದಾರನಿರಬಹುದೆಂದು ಸಂಶಯಗ್ರಸ್ತನಾಗಿ ಮುಂದೆ ಯಾವ ಮಾತನ್ನೂ ಆಡದೆ ಸುಮ್ಮನಾದನು. ಅರಿಂದಮನು ಇವನ ಮನೋಭಾವವನ್ನರಿತು—

ಮಹಾಶಯ ! ತಾವು ನನ್ನನ್ನು ವೇಷಧಾರಿಯೆಂದು ತಿಳಿಯೋಣಾ ಯಿತೆ ? ಎಂದನು.

ಜೀಮೂತ—ನಾನು ಹಾಗೆಯೇ ಯೋಚಿಸುತ್ತಿರುವೆನು.

ಅರಿಂದಮ—(ಭಯವನ್ನು ನಟಿಸಿ) ತಾವು ಯೋಚಿಸಿದ್ದು ನಿಜ. ನಾನು ತಮಗೆ ವಂಚಿಸಲು ಕಾರಣವೇನಿರುವುದು ? ನಾನು ದೊಡ್ಡ ವಿಪತ್ತಿನಲ್ಲಿ ಸಿಕ್ಕಿಬಿದ್ದು, ತಲೆಯನ್ನು ತಪ್ಪಿಸಿಕೊಂಡು ತಿರುಗಬೇಕಾಗಿರುವುದು.

ಅರಿಂದಮನು ಹೇಳಿದ ಭಯ ಚಕಿತವಾದ ಮಾತನ್ನು ಕೇಳಿ, ಜೀಮೂತನು ತನ್ನ ಸಂದೇಹವನ್ನು ಕಳೆದುಕೊಂಡನು. ಅರಿಂದಮನು, ತನ್ನ ಪ್ರಕೃತ ರೂಪದಿಂದ ವಂಚಿತನಾಗಿರುವನೆಂದು ತನ್ನಲ್ಲಿ ತಾನೇ ಆಶ್ಚರ್ಯಪಡುತ್ತಾ ನಿಂತಿದ್ದನು.

ಜೀಮೂತ—ತಮಗೆ ವಿಪತ್ತೆಂತಹದು ?

ಅರಿಂದಮನು ನಿಜವಾದ ಅಪರಾಧಿಯಂತೆ ಹಿಂದೆ ಮುಂದೆ ನೋಡುತ್ತಾ—ನಾನು ತಮಗೆ ಹೇಗೆ ತಿಳಿಸಲಿ ? ಎಲ್ಲಿ ನೋಡಿದರೂ ಪೋಲೀಸಿನವರ ಕಾಟ. ಅವರು ನನ್ನನ್ನು ನೋಡಿದ ಕೂಡಲೇ, ನನ್ನ ಪ್ರಾಣವು ಹಾರಿಹೋಗುವುದು. ಪೋಲೀಸಿನವರ ಕಾಟದಿಂದ ಪಾರಾಗುವುದಕ್ಕಾಗಿಯೇ ನಾನು ವೇಷಾಂತರವನ್ನು ಧರಿಸಿಕೊಂಡಿರುವುದು, ಎಂದನು.

ಜೀಮೂತ—ಹೀಗೆ ಹೇಳಿದ್ದರಿಂದ ತಮ್ಮ ವಿಪತ್ತು ಎಂತಹದೆಂಬುದು ಗೊತ್ತಾಗಲಿಲ್ಲ.

ಅರಿಂದಮ—ನನ್ನ ವಿಪತ್ತನ್ನು ಇತರರ ಮುಂದೆ ಹೇಳುವುದಕ್ಕೆ ನನಗೆ ಧೈರ್ಯವೇ ಉಂಟಾಗುವುದಿಲ್ಲ, ಆದರೆ ಒಬ್ಬನಿಗಾದರೂ ಹೇಳದೇ ಹೋದರೆ, ಮನಸ್ಸು ಸುಸ್ಥಿರವಾಗಿರುವುದಿಲ್ಲ. ನನಗೆ ಉಲ್ಲಾಸವನ್ನುಂಟುಮಾಡುವ ಮನುಷ್ಯನು ಒಬ್ಬನಾದರೂ ಇರ

ಬೇಕು. ನಾನು ನನ್ನ ಸಂಕಟವನ್ನು ತಮ್ಮ ಮುಂದೆಯಾದರೂ ಹೇಳಿಕೊಂಡು, ನನ್ನ ಮನಸ್ಸಿನ ಭಾರವನ್ನು ನೀಗಿಕೊಳ್ಳುವೆನು. ತಾವು ನನಗೆ ಅಭಯವನ್ನು ಕೊಡುವುದಾದರೆ, ನಾನು ಈ ಲೋಕದಲ್ಲಿ ಕೆಲವು ಕಾಲ ಬದುಕಿಕೊಳ್ಳುವೆನು.

ಜೀಮೂತ—ತಮ್ಮ ಸಂಕಟವನ್ನು ಮೊದಲು ತಿಳಿಸೋಣಾಗಲಿ.

ಅರಿಂದಮ—ನಾನು ಹೇಳಿಯೇ ಹೇಳುವೆನು. ಈ ಸುತ್ತಮುತ್ತಲೂ ಯಾರೂ ಇಲ್ಲವಷ್ಟೆ ?

ಅರಿಂದಮನು ಹೀಗೆ ಭಯದಿಂದ ಕೂಡಿದ ನೋಟದಿಂದ ಸುತ್ತಲೂ ಮತ್ತೊಂದು ಸಲ ನೋಡಿದನು. ದಗಲಬಾಜಿಯಾದ ಜೀಮೂತನೂ ಇದನ್ನು ನೋಡಿ, ಆತನು ನಿಜವಾಗಿಯೂ ಭಯಗ್ರಸ್ತನಾಗಿರುವನೆಂದು ತಿಳಿದನು. ಪತ್ತೇದಾರರಲ್ಲಿ ನಮ್ಮ ಪ್ರಾರ್ಥನೆಯೇನೆಂದರೆ—ಇಂತಹ ಕಾಲೋಚಿತವಾದ ಭಾವಭಾಗಗಳನ್ನು ಅಭ್ಯಾಸಮಾಡಿ, ಸಮಯದಲ್ಲಿ ಕಾರ್ಯಸಾಧನೆಗಾಗಿ ಉಪಯೋಗಿಸುವುದಾದರೆ, ದೂರದಲ್ಲಿರುವ ಸಿದ್ಧಿಯೂ ಕಲತಲಗತವಾಗುವುದರಲ್ಲಿ ಯಾವ ಸಂಶಯವೂ ಇರಲಾರದು.

## ಹನ್ನೊಂದನೆಯ ಅಧ್ಯಾಯ.

ಅರಿಂದಮ—ಮತ್ತಷ್ಟು ಜೀಮೂತನ ಪಕ್ಕಕ್ಕೆ ಬಂದು—ತಾವು ನನ್ನ ವಿಷಯವನ್ನು ಚೆನ್ನಾಗಿಯೂ ಕೇಳಬೇಕು, ಎಂದನು.

ಜೀಮೂತ—ಹೇಳೋಣಾಗಲಿ.

ಅರಿಂದಮ—ಅದನ್ನು ಹೇಳುವುದಕ್ಕಾಗಿಯೇ ಬಂದಿರುವೆನು. ತಾವು ಸಾವಧಾನವಾಗಿ ಕೇಳೋಣಾಗಲಿ.

ಜೀಮೂತ—(ಬೇಸರದಿಂದ) ನಾನು ಕೇಳುವುದಕ್ಕಾಗಿಯೇ ಸಿದ್ಧನಾಗಿರುವೆನು ; ಹೇಳುವುದಕ್ಕೇನು ಅಡ್ಡಿಯಿರುವುದು ?

ಅರಿಂದಮ—ತಾವು ಬೇಸರ ಪಡಬಾರದು. ತಮ್ಮ ವಿಷಯವನ್ನು ನಾನು ಮೊದಲೇ ಕೇಳಿ, ನಿಮ್ಮಲ್ಲಿ ಸಹಾಯವನ್ನು ಬೇಡುವುದಕ್ಕಾಗಿ ಬಂದಿರುವೆನು. ನನ್ನಲ್ಲಿ ನೀವು ವಿಶ್ವಾಸಘಾತುಕತೆಯನ್ನು ತೋರಿಸಬಾರದು.

ಜೀಮೂತ—(ಹುಬ್ಬನ್ನು ಗಂಟಿಕ್ಕಿ) ಆಶ್ರಿತರಲ್ಲಿ ವಿಶ್ವಾಸಘಾತುಕತೆಯೆಂದರೇನು ? ಹೇಳಹೇಳಾಗಲಿ.

ಅರಿಂದಮ —ಸ್ವಪ್ರಯೋಜನವಾಗುವುದಾದರೆ, ವಿಶ್ವಾಸಘಾತುಕತೆಯು ದೊಡ್ಡ ವಿಷಯುವಲ್ಲ ; ಇದನ್ನು ತಾವು ಚೆನ್ನಾಗಿಯೂ ಬಲ್ಲಿರಿ.

ಜೀಮೂತ—ಹಾಗೆಂದರೇನು ?

ಅರಿಂದಮ—ಹೇಳುವೆನು. ತಾವು ರತ್ನಾಕರದಲ್ಲಿ ದ್ರವ್ಯವನ್ನು ಸಂಪಾದಿಸುವುದಕ್ಕೋಸ್ಕರ, ಯಾವ ಬಲೆಯನ್ನು ಬೀರಿರುವಿರೋ, ಅದು ನಿಮಗೆ ಗೊತ್ತಿಲ್ಲವೆ ? ಅಮರನಾಥನ ಸ್ವಪ್ನಾಪಹರಣದಲ್ಲಿ ನೀವು ತೋರಿಸುತ್ತಿರುವ ಇಂದ್ರಜಾಲದ ವಿದ್ಯೆಯನ್ನು ಯಾರು ತಾನೇ ಕಾಣರು. ನಿಮ್ಮ ಬಲೆಯಲ್ಲಿ ಯಾರುಯಾರು ಸಿಕ್ಕಿಕೊಂಡು ನರಳುತ್ತಿರುವರೋ ನಾ ಕಾಣೆನು.

ಜೀಮೂತನು ಅರಿಂದಮನ ಮರ್ಮಭೇದಿಯಾದ ಮಾತನ್ನು ಕೇಳಿ ಚಕಿತನಾಗಿ, ಎರಡು ಮೂರು ಹೆಜ್ಜೆ ಹಿಂದಕ್ಕೆ ಹೋಗಿ ನಿಂತುಕೊಳ್ಳಲು, ಅರಿಂದಮನು ಮಂದಹಾಸವನ್ನು ತೋರ್ಪಡಿಸಿ—ತಾವು ಹೆದರಬೇಕಾದ್ದಿಲ್ಲ. ನೀವು ಯತ್ನ ವಿನಾ ಸಾಹಸ ಮಾಡಿರುವಿರಿ. ಮೊದಲು ನನ್ನ ವಿಷಯವನ್ನು ಕೇಳಿ, ಬಳಿಕ ಓಡಿಹೋಗಲು ಯತ್ನ ಮಾಡಿರಿ, ಎಂದನು.

ಜೀಮೂತನು ಯತ್ನವಿಲ್ಲದೆ—ಅದೇನು ? ಎಂದನು.

ಅರಿಂದಮ—ತಾವು ಅಮರನಾಥನ ಒಂದು ಲಕ್ಷ ರೂಪಾಯಿ ಗಳನ್ನು ಅಪಹರಿಸುವುದಕ್ಕೆ ಮಾಡಿದ ಉಪಾಯವನ್ನು ರಾಮರತ್ನನು ನನ್ನ ಮುಂದೆ ವಿಶದವಾಗಿ ಹೇಳಿದನು.

ಜೀಮೂತನು ಈ ಮಾತನ್ನು ಕೇಳಿದ ಕೂಡಲೆ ಅಲ್ಲಿ ನಿಲ್ಲದೆ ಮನೆಯೊಳಗೆ ವೇಗವಾಗಿ ಪಲಾಯನವಾದನು. ಅರಿಂದಮನೂ ಕೊಂಚವೂ ಯೋಚಿಸದೆ ಅವನ ಹಿಂದೆಯೇ ಓಡಿಹೋದನು.

ಜೀಮೂತನ ಮನೆಯು ಘೋರಾಂಧಕಾರದಿಂದ ತುಂಬಿಹೋ ಗಿದ್ದಿತೆಂದು ನಾವು ಮೊದಲೇ ತಿಳಿಸಿರುವೆವು. ಇಂತಹ ಮನೆಯಲ್ಲಿ ಜೀಮೂತನು ಕ್ಷಣಮಾತ್ರದಲ್ಲಿಯೇ ಮಾಯವಾಗಲು, ಹಿಂದೆಯೇ ಓಡಿಬರುತ್ತಿದ್ದ ಅರಿಂದಮನಿಗೆ, ಆ ಅಂಧಕಾರದಲ್ಲಿ ಅದು ಗೊತ್ತಾಗ ಲೇ ಇಲ್ಲ. ಎಲ್ಲೆಲ್ಲಿ ಹೋಗಿನೋಡಿದರೂ ದಾರಿಗಾಣದೆ ತಲ್ಲಣಿಸುತ್ತಿ ರುವ ಅರಿಂದಮನಿಗೆ, ತಾನು ಮತ್ತೆ ಬಲೆಯಲ್ಲಿ ಸಿಕ್ಕಿಬಿದ್ದೆನೆಂಬುದು ಮಾತ್ರ ಗೋಚರಕ್ಕೆ ಬಂದಿತು.

*　　*　　*　　*

ಅರಿಂದಮನು ದಿಕ್ಕು ತೋರದೆ ಯಾವ ಕೋಣೆಯಲ್ಲಿ ನಿಂತಿ ದ್ದನೋ, ಅದು ಕಾರಾಗೃಹದ ತೌರುಮನೆಯಾಗಿದ್ದಿತು. ಅರಿಂದ ಮನು ಅಲ್ಲಿರುವುದು ಸರಿಯಲ್ಲವೆಂದು ಬಂದ ದಾರಿಯನ್ನು ಹಿಡಿದು ಹಿಂದಿರುಗಲು ಯತ್ನಮಾಡಿದನು, ಆದರೆ ಕತ್ತಲೆಯಲ್ಲಿ ಆ ದಾರಿಯೇ ಗೊತ್ತಾಗಲಿಲ್ಲ. ಬಳಿಕ ಅರಿಂದಮನು ಶೂನ್ಯಮನಸ್ಕನಾಗಿ ನಿಂತಿ ರಲು, ತಾನಿದ್ದ ಪಕ್ಕದ ಕೋಣೆಯಲ್ಲಿ ಜೀಮೂತನು ಯಾರೊಡ ನೆಯೋ ಮಾತನಾಡುತಿದ್ದಂತೆ ಕೇಳಿ ಬಂದಿತು. ಅದೇನೆಂದರೆ :—

ಜೀಮೂತ—ನೋಡಿದೆಯಾ, ಎಂತಹ ಭಯಂಕರವಾದ ವಿಷ ಯ ! ನನ್ನೊಡನೆ ಮಾತನಾಡುತಿದ್ದವನು ತನ್ನ ವಿಪತ್ತನ್ನು ಹೇಳುವ ವ್ಯಾಜದಲ್ಲಿ ನನ್ನಮರ್ಮವನ್ನೇ ಕತ್ತರಿಸಲಾರಂಭಿಸಿದನು.

ಜೀಮೂತ—ಅವನು ಅರಿಂದಮನೇ ಎಂದು ನಾನು ಪ್ರಮಾಣಮಾಡಿ ಹೇಳುವೆನು.

ಅಜ್ಞಾತ—ನಿಜವಾಗಿ ?

ಜೀಮೂತ—ನಿಜವಾಗಿಯೂ. ನಾನು ಸಿಕ್ಕಿ ಬೀಳುವುದು ಇನ್ನು ಸಾವಕಾಶವಾಗಲಾರದು. ಈಗಲೇ ಮನೆಯನ್ನು ಬಿಟ್ಟು ಎಲ್ಲಿಗಾದರೂ ಹೊರಟು ಹೋಗೋಣ ನಡೆ.

ಅಜ್ಞಾತ—ಶರಚ್ಚಂದ್ರನನ್ನು ಏನು ಮಾಡೋಣ ?

ಜೀಮೂತ—ಮಾಡುವುದೇನು ? ಅವನು ಇಲ್ಲಿಯೇ ಹೊಟ್ಟೆಗಿಲ್ಲದೆ ಸಾಯಲಿ, ಅದನ್ನು ಕಟ್ಟಿಕೊಂಡು ನಮಗಾಗುವುದೇನು ?

ಅರಿಂದಮನು ಈ ಮಾತನ್ನು ಕೇಳಿ ಪರಮಾನಂದ ಭರಿತನಾದನು. ಅವನ ಪ್ರಯತ್ನವೆಲ್ಲವೂ ಸಾರ್ಥಕವಾಗುವ ಕಾಲವು ಬಳಿಗೆ ಬಂದಿತೆಂದು ಅವನ ಸಂತೋಷಕ್ಕೆ ಪಾರವೇ ಇರಲಿಲ್ಲ. ಅವನು ತನ್ನ ಮನದಲ್ಲಿ ' ಶರಚ್ಚಂದ್ರನು ಈ ಮನೆಯಲ್ಲಿಯೇ ಬಂದಿಯಾಗಿರುವನೇ ! ನಾನು ಒಳ್ಳೆಯ ಮುಹೂರ್ತದಲ್ಲಿಯೇ ಈ ಮನೆಯೊಳಗೆ ಕಾಲಿಟ್ಟೆನು. ಈಗ "ಒಂದು ಕಲ್ಲಿಗೆ ಎರಡು ಹಣ್ಣುಗಳು ಉದುರಿದಂತಾಯಿತು" ಎಂದು ಯೋಚಿಸುತ್ತಿರುವಲ್ಲಿ, ಪುನಃ ಸಂಭಾಷಣೆಯು ಜರುಗಿತು.

ಜೀಮೂತ—ದೀನೇಂದ್ರ ಚಂದ್ರ ! ನಿನ್ನ ಪರಾಮರ್ಶದಂತೆ ಇಲ್ಲಿನವರೆಗೂ ಸುಮುಖವಾಗಿ ನಡೆಯಿತು. ಇನ್ನು ಮುಂದೆ ನಡೆಯಲಾರದೆಂದು ತೋರುತ್ತದೆ.

' ದಿನೇಂದ್ರ ಚಂದ್ರ ! ' ಈ ಹೆಸರು ಮೊದಲು ಎಲ್ಲಿಯೋ ಕೇಳಿದ್ದಂತಿದೆ. ಈತನೇ ಆತನಿರಬಹುದೇ ! ಪಾಠಕ ಮಹಾಶಯರಿಗೆ ಜ್ಞಾಪಕದಲ್ಲಿರಬಹುದು. ಈ ಗ್ರಂಥದ ಪ್ರಥಮ ಖಂಡದ ಐದನೆಯ ಅಧ್ಯಾಯದಲ್ಲಿ, ದೀನೇಂದ್ರಚಂದ್ರನೆಂಬೊಬ್ಬ ದೊಡ್ಡಮನು

ಷ್ಯನಾದ ವ್ಯಾಪಾರಿಯು ಅಮರನಾಥನ ಹತ್ತಿರ ಬಂದು, ತನಗೆ ಬರಬೇಕಾಗಿದ್ದ ಹಣವನ್ನು ವಾಪಸು ಕೊಡಬೇಕೆಂದು ಕೇಳಿದನು. ಈತನು ಅಮರನನ್ನು ನೋಡುವುದಕ್ಕೆ ಕೊಂಚ ಮುಂಚೆ ಜೀಮೂತನಾದನನೂ ಅಮರನ ಬಳಿಗೆ ಹೋಗಿದ್ದನು.

ಅಮರನಿಗೂ ಜೀಮೂತನಿಗೂ ಪರಸ್ಪರ ಸಂಭಾಷಣೆಯು ನಡೆದದ್ದು ವಾಚಕರ ಅನಗಾಹನೆಯಲ್ಲಿರಬಹುದು. ಅಮರನಾಥನಿಗೆ ಶರಚ್ಚಂದ್ರನ ಮೇಲೆ ಸಂಶಯ ಉಂಟಾಗುವಾತೆ ಮಾಡಬೇಕೆಂಬುದೇ ಜೀಮೂತನ ಪರಮೋದ್ದೇಶವಾಗಿದ್ದಿತು. ಜೀಮೂತನು ವಿಷಬೀಜವನ್ನು ಅಮರನ ಹೃದಯದಲ್ಲಿ ಬಿತ್ತಿ ಹೊರಟುಬಂದ ಮೇಲೆ, ದೀನೇಂದ್ರ ಚಂದ್ರನು ಅಮರನ ಬಳಿಗೆ ಬಂದು ಸೇರಿದನು. ಅಂತೂ ಇವರಿಬ್ಬರೂ ಸೇರಿ ಅಮರನ ಬುಡಕ್ಕೆ ತಂವಿಟ್ಟರು. ಶರಚ್ಚಂದ್ರನು ಬೇರೊಂದು ಸ್ಥಳಕ್ಕೆ ಹೋಗದಿದ್ದರೆ, ತನ್ನ ಕೆಲಸವು ನೆರವೇರುವುದಿಲ್ಲವೆಂದು ತಿಳಿದು, ಇವರಿಬ್ಬರೂ ಕಲೆತು, ಮಧುವನದಲ್ಲಿರುವ ಅವನ ಅಣ್ಣನಿಂದ ಬಂದ ಹಾಗೆ ಬಂದು ಸುಳ್ಳಿನ ತಂತಿಯ ವರ್ತಮಾನವನ್ನು ಕೊಟ್ಟರು. ಬಳಿಕ ಶರಚ್ಚಂದ್ರನು ಮಧುವನಕ್ಕಾಗಿ ಹೊರಟನು. ಮುಂದೆ ನಡೆದಿದ್ದನ್ನು ವಾಚಕರೇ ಊಹಿಸಿಕೊಳ್ಳಬಹುದು.

ಪುನಃ ಸಂಭಾಷಣೆಯು ಕೇಳಬಂದಿತು.

ದೀನೇಂದ್ರ—ಜೀಮೂತ, ನೀನು ಬಹಳವಾಗಿ ಹೆದರಿದಂತೆ ಕಾಣುವುದು. ನೀನು ಹೆದರದಿದ್ದರೆ, ನಾನು ಸಿಕ್ಕಿಬೀಳುವ ಸಂಭವವಿರುತ್ತಿರಲಿಲ್ಲ. ಮೊದಲು ಮೊದಲು ನೀನು ಮಹಾಸಮರ್ಥನೆಂದು ತಿಳಿದಿದ್ದೆನು. ಈಗಲಾದರೋ ನಾನು ಮುಳುಗಿಹೋಗುವ ಹೊತ್ತು ಬಂದಿತು.

ಜೀಮೂತ—ನಾನು ಸಿಕ್ಕಿಬಿದ್ದ ಮಾತ್ರಕ್ಕೆ, ನಿನಗೂ ಅಪಾಯವಾಗುವುದೆಂದು ತಿಳಿಯಬೇಡ. ನನ್ನ ಸಹಾಯವು ನಿನಗಿಲ್ಲದಿದ್ದರೆ, ಅಮರನ ಪೆಟ್ಟಿಗೆಯನ್ನು ನೀನು ಹೇಗೆ ತಾನೇ ತೆಗೆಯಬಲ್ಲವನಾಗುತಿದ್ದೆ ?

ಮಿನೇಂದ್ರ—ರಾಮರತ್ನನಿಗೆ ನೀನು ಸಲಿಗೆ ಕೊಟ್ಟದ್ದೇ ಇಷ್ಟು ಅನರ್ಥಕ್ಕೆ ಕಾರಣವಾಯಿತು.

ಜೀಮೂತ—ಆತನಿಗೆ ಸಲಿಗೆ ಕೊಡದಿದ್ದರೆ, ಕಬ್ಬಿಣದ ಪೆಟ್ಟಿಗೆಯನ್ನು ತೆಗೆಯುವ ವಿಧಾನವು ಯಾರಿಗೆ ಗೊತ್ತಾಗುತ್ತಿತ್ತು ?

ಮೀನೇಂದ್ರ—ಯುಕ್ತಿಮಾಡಿ ಆತನಿಂದ ವಿಷಯವನ್ನು ತಿಳಿದುಕೊಂಡಿದ್ದರೆ ಸಾಕಾಗಿತ್ತು. ಅವನಿಗೆ ನಮ್ಮ ಅಂತರ್ಯವನ್ನು ತಿಳಿಸುವುದಕ್ಕೆ ಕಾರಣವೇನಿದ್ದಿತು ?

ಜೀಮೂತ—ನಮ್ಮ ಅಂತರ್ಯವು ಆತನಿಗೆ ಕೊಂಚವೂ ಗೊತ್ತಿಲ್ಲ. ನಾನು ನಮ್ಮ ಗುಟ್ಟನ್ನು ಇತರರ ಮುಂದೆ ಹೇಳುವಷ್ಟು ದಡ್ಡನಲ್ಲ.

ಮೀನೇಂದ್ರ—ಹಾಗಾದರೆ ಅವನಿಗೆ ಗೊತ್ತಾದ ಬಗೆ ಹೇಗೆ ?

ಜೀಮೂತ—ಅವನಿಗೆ ಗೊತ್ತೆಂದು ನಿನಗೆ ಹೇಳಿದವರಾರು ?

ಮೀನೇಂದ್ರ—ಅರಿಂದಮ ಪತ್ತೇದಾರನು ರಾಮರತ್ನನಿಂದ ಎಲ್ಲವನ್ನೂ ತಿಳಿದುಕೊಂಡನೆಂದು ಆತನು ಹೇಳಿದ ಮಾತನ್ನು ಈಗ ನೀನೇ ನನಗೆ ಹೇಳಲಿಲ್ಲವೇ ?

ಜೀಮೂತ—ಆತನು ಹೇಳಿದನೆಂದ ಮಾತ್ರಕ್ಕೆ ನಾವು ನಂಬುವುದಕ್ಕಾಗಿದೆಯೇ ?

ಮೀನೇಂದ್ರ—ಅರಿಂದಮನಿಗೆ ನಿಜವಾದ ಸಂಗತಿ ಗೊತ್ತಾಗಿಲ್ಲದಿದ್ದರೆ, ಅವನು ಇಲ್ಲಿಗೆ ಹೇಗೆ ಬರುತಿದ್ದನು ?

ಜೀಮೂತ—ಅವನು ಇಲ್ಲಿಗೆ ಹೇಗೆ ಬಂದನೋ, ಅದು

ನನಗೆ ಗೊತ್ತಿಲ್ಲ. ಅನೇಕವೇಳೆ ಸತ್ತೇಹೋದವನು ಇತರರು ನೋಡುವ ಹಾಗೆ ಕಾಲೋಚಿತವಾದ ಸುಳ್ಳುಗಳನ್ನಾಡುವುದುಂಟು. ಇದರಿಂದಲೇ ರಾಮು ತನ್ನನು ಜರಿಂದವನಿಗೆ ತಿಳಿಸಿರುವನೆಂದು ನಂಬುವುದಕ್ಕಾಗುವುದಿಲ್ಲ.

ದೀನೇಂದ್ರ—ಹೇಗಾದರೂ ಆಗಲಿ, ನನಗೆ ಮಾಂಗಳನೇನೂ ಆಗುವಂತಿಲ್ಲ.

ಜೀಮೂತ—ಹೃದಯದಲ್ಲಿ ಭಯವೆಂಬುದು ಸದಾ ಸಂಚಾರಮಾಡಿದರೆ, ಯಾವ ಕೆಲಸ ತಾನೇ ಮಾಡುವುದಕ್ಕಾಗೀತು? ಆದರೂ ನಾನು ಸಾಧ್ಯವಾದಷ್ಟು ಕದ್ದ ಹಣವನ್ನು ವಿಲೇವಾರಿ ಮಾಡಿ, ಕಾಗದಪತ್ರಗಳನ್ನು ಬೇರೆಂದು ಸ್ಥಳದಲ್ಲಿ ಗೋಪ್ಯವಾಗಿಟ್ಟಿರುವೆನು.

ದೀನೇಂದ್ರ—ಹಣದ ವಿಲೇವಾರಿ! ಹಾಗೆಂದರೇನು?

ಜೀಮೂತ—ನನಗೂ ಲೇಣೆ ದೇಣೆ ಯುಂಟು.

ದೀನೇಂದ್ರ—ನಿನಗೆ ಲೇಣೆಯೆಂದರೇನು? ದೇಣೆಯೆಂದರೇನು? ಈಗ ಇಬ್ಬರೂ ಸಂಪಾದಿಸಿದ ಹಣವನ್ನು ನುಂಗುತಿರುವುದಕ್ಕೋಸ್ಕರ ಏನು ಉಪಾಯ ಮಾಡಿರುತ್ತಿದೆ.

ಜೀಮೂತ—ಹಣವನ್ನು ನುಂಗುವುದು ಹೇಗೆ?

ದೀನೇಂದ್ರ—ಅದು ಹೋಗಲಿ, ನಿನ್ನ ದೇಣೆಯೆಷ್ಟು?

ಜೀಮೂತ—ಲಕ್ಷ ರೂಪಾಯಿಗಳಿಗ ಜಾಸ್ತಿಯಾಗಿರುವುದು.

ದೀನೇಂದ್ರ—ಅಬ್ಬಬ್ಬ! ಲೇಣೆಯೆಷ್ಟಿರುವುದು?

ಜೀಮೂತ—ಅದೇನೂ ವಿಶೇಷವಿಲ್ಲ. ನನಗೆ ಐದು ಸಾವಿರ ರೂಪಾಯಿಗಳು ಮಾತ್ರ ಬರಬೇಕಾಗಿರುವುದು.

ದೀನೇಂದ್ರ—ಲೇಣೆಗಿಂತಲೂ ದೇಣೆ ಜಾಸ್ತಿಯಾದ ಮೇಲೆ ನಾವು ಮಾಡಿದ ಕಷ್ಟವೆಲ್ಲವೂ ನೀರಿನಲ್ಲಿ ಹೋಮ ಮಾಡಿದಂತಾ

ಯಿತು. ವ್ರತ ಕೆಟ್ಟರೂ ಸುಖವಿಲ್ಲದೇ ಹೋಯಿತು ಮುಂದೆ ನಮ್ಮ ಗತಿ ?

ಜೀಮೂತ—ನೀನು ಯೋಚಿಸಬೇಡ, ನಾನಿರುವೆನು. ನನಗೆ ಬಂತಕ್ಕ ಹಣದಿಂದ ನಾವು ಸುಖವಾಗಿ ಬದುಕಬಹುದು. ನಾವಿಬ್ಬರೂ ಎಲ್ಲಿಗಾದರೂ ಓಡಿಹೋಗಿ ಜೀವನವನ್ನು ಮಾಡಿಕೊಳ್ಳೋಣ.

ಅರಿಂದಮನು ಈ ರೀತಿಯಾದ ಸಂಭಾಷಣೆಯನ್ನು ಕೇಳಿದನು. ಅನಂತರ ಆ ಸಂಭಾಷಣೆಯು ಕೇಳಿಸದೇ ಹೋಗಲು, ಅವರಿಬ್ಬರೂ ಬೇರೊಂದು ಸ್ಥಳಕ್ಕೆ ಹೊರಟು ಹೋಗಿರಬಹುದೆಂದು ಅರಿಂದಮನು ತಿಳಿದುಕೊಂಡನು.

## ಹನ್ನೆರಡನೆಯ ಅಧ್ಯಾಯ.

(ಅರಿಂದಮನ ಹೇಳಿಕೆ)

ನಾನು ಆ ಅಂಧಕೂಪದಿಂದ ಹೊರಗೆ ಬರಲು ಯತ್ನ ಮಾಡತೊಡಗಿದೆನು. ಆ ಕೋಣೆಯು ಒಂದು ಮೂಲೆಯಲ್ಲಿ ಮರದ ಹಲಗೆಯೊಂದು ಹಾಸಿದ್ದುದನ್ನು ಕಂಡು ಅದರ ಮೇಲೆ ಕುಳಿತುಕೊಂಡೆನು. ಅದು ನೆಲಮಾಳಿಗೆಗೆ ಹೋಗುವ ದಾರಿಯಾಗಿರಬೇಕೆಂದು ತಿಳಿದು ಸುತ್ತಲೂ ತಡಕಿ ನೋಡಲಾಗಿ, ಬಾಗಿಲಿಗೆ ಹಾಕಿದ್ದ ಕಬ್ಬಿಣದ ಉಂಗುರವು ಕೈಗೆ ಸಿಕ್ಕಿತು. ನಾನು ಆ ಉಂಗುರವನ್ನು ಹಿಡಿದುಕೊಂಡು ಬಾಗಿಲನ್ನು ಜೋರಿನಿಂದ ಮೇಲಕ್ಕೆ ಎತ್ತಿದೆನು. ಕೆಳಗಡೆ ಬೆಳಕೊಂದು ಕಾಣಿಸಿತು. ಅದರೊಡನೆಯೇ ಒಂದು ಕಂಪಿತ ಧ್ವನಿಯೂ ಕೇಳಬಂದಿತು. ಅದೇನಿರಬಹುದೆಂದು ನಾನು ಆಲಿಸಿ ಕೇಳಿದೆನು. 'ಪ್ರಾಣವು ಹೋಗುವುದು, ಯಾರಾದರೂ ಕೊಂಚ

ನೀರು ಕೊಡಬಾರದೇ ! ಇಂದಿರೆ ! ಈಗ ನೀನೆಲ್ಲಿರುವೆ ? ಅಯ್ಯೋ. ಅಮ್ಮ ! ಪ್ರಾಣಹೋಗುವುದಿಲ್ಲ !' ಎಂಬ ಧ್ವನಿಯು ಮತ್ತೆ ಕೇಳಿಸಿತು.

'ಇದೇನು ! ಇದಾರ ಕಂಠಸ್ವರ ! ಇಂತಹ ಹೃದಯ ವಿದಾರಿಣಿಯಾದ ಕಾತರೋಕ್ತಿಯನ್ನು ಹೇಳುವರಾರು !' ಎಂದು ಭಾವಿಸಿ ಕಾಲಹರಣಕ್ಕೆ ಅವಕಾಶ ಕೊಡದೆ, ನಾನು ಆ ಕೂಡಲೆ ನೆಲಮಾಳಿಗೆಯೊಳಗೆ ಇಳಿದೆನು. ಅಲ್ಲಿ ಕೈಕಾಲು ಕಟ್ಟಿ ಹಾಕಿದ ಒಬ್ಬ ಯುವಕನು ಮಣ್ಣಿನ ಮೇಲೆ ಬಿದ್ದು ಹೊರಳಾಡುತ್ತಿದ್ದನು. ನಾನು ಆತನ ಬಳಿಗೆ ಬಂದು, ಈತನೇ ತಪ್ಪಿಸಿಕೊಂಡಿರುವನೆಂದು ತಿಳಿದು. ಆತನನ್ನು ಕುರಿತು—ಅಯ್ಯಾ, ನೀನಲ್ಲವೇ ಶರತ್ಚಂದ್ರನೆಂಬುವನು' ಎಂದು ಕೇಳಿದೆನು. ಆತನು ಕೊಂಚಕಾಲ ಸುಮ್ಮನಿದ್ದು ಬಳಿಕ- ಅಹುದು ಮಹಾಶಯ ! ಎಂದುತ್ತರವಿತ್ತನು.

ನಾನು—ಹಾಗಾದರೆ ಒಳ್ಳೆಯದಾಯಿತು. ನಾನು ನಿನ್ನನ್ನು ಹುಡುಕಿಕೊಂಡೇ ಇಲ್ಲಿಗೆ ಬಂದೆನು. ನನ್ನ ಹೆಸರು ಅರಿಂದಮ. ನಾನೊಬ್ಬ ಪತ್ತೇದಾರನು. ನಿನ್ನನ್ನು ಹುಡುಕುವುದಕ್ಕಾಗಿಯೇ ಅಮರನಾಥನು ನನ್ನನ್ನು ನಿಯಮಿಸಿಕೊಂಡಿರುವನು.

ನಾನು ಹೀಗೆ ಹೇಳಿ ಅವನ ಬಂಧನವನ್ನು ಕತ್ತರಿಸಿ ಅವನ ಯೋಗಕ್ಷೇಮವನ್ನು ಕೇಳಿದೆನು. ಅವನು ಅದಕ್ಕೆ ಉತ್ತರ ಕೊಡದೆ—ಮಹಾಶಯ, ನಾನಿನ್ನೆಷ್ಟು ದಿವಸ ಈ ನರಕ ಕೂಪದಲ್ಲಿ ಬಿದ್ದಿರಬೇಕು ? ಎಂದನು. ಅದಕ್ಕೆ ನಾನು—ನನ್ನನ್ನು ಹಿಂಬಾಲಿಸಲು ನಿನಗೆ ಶಕ್ತಿಯಿರುವುದಾದರೆ, ನಾನು ಈಗಲೇ ನಿನ್ನನ್ನು ಈ ಮನೆಯಿಂದ ಪಾರುಮಾಡುವೆನು, ಎಂದೆನು. ಆತನು ನನ್ನ ಮಾತನ್ನು ಕೇಳಿ—ಸ್ವಾಮಿ, ತಾವು ನನ್ನನ್ನು ಉದ್ಧಾರ ಮಾಡುವುದಾದರೆ, ನಾನು ಸಿದ್ಧನಾಗಿರುವೆನು. ಆದರೆ ನನ್ನ ತಲೆಯು ಬಹಳ

ಭಾರವಾಗಿರುವುದು. ಆ ಸೇಟನು ನನಗೆ ವಿಷವನ್ನು ಹಾಕಿರುವ ರೆಂದು ತೋರುವುದು, ಎಂಬುದನ್ನು ಕೇಳಿ, ನಾನು—ಆತನನ್ನು ಹಿಡಿದು ನಿಲ್ಲಿಸಿದೆನು. ಅನಂತರ ಮಿಣಿಮಿಣಿ ಉರಿಯುತ್ತಿದ್ದ ದೀಪವನ್ನು ಬಲದ ಕೈಯಲ್ಲಿ ಹಿಡಿದುಕೊಂಡು, ಎಡದ ತೋಳನ್ನು ಶಾಸ್ತ್ರಿಯ ಸೊಂಟಕ್ಕೆ ಸುತ್ತಿಹಾಕಿ, ಆತನನ್ನು ಬೀಳದಂತೆ ಹಿಡಿದುಕೊಂಡು, ಅತಿ ಪ್ರಯಾಸದಿಂದ ಮೆಟ್ಟಿಲುಗಳನ್ನು ಹತ್ತಿ ನಾನು ಮಲಗಿದ್ದ ಕೋಣೆಗೆ ಬಂದೆನು. ಆಗ ದೀಪದ ಬೆಳಕಿನಲ್ಲಿ ಕೋಣೆಯೊಳಗಿದ್ದ ಯಜ್ಞಯಾಜ್ಞ ಗೋಚರಕ್ಕೆ ಬಂದಿತು. ಆ ಬಳಿಕ ನಾನು ದೀಪವನ್ನು ಬಂದು ಕಡೆಯಿಟ್ಟು, ಎರಡು ಕೈಗಳಿಂದಲೂ ಶರಚ್ಚಂದ್ರನನ್ನು ಹಿಡಿದು ಎತ್ತಿಕೊಂಡು ಸ್ವಲ್ಪವೂ ಶಬ್ದವಾಗದೆ ಮನೆಯಿಂದ ಹೊರಟು ರಸ್ತೆಗೆ ಬಂದು ಸೇರಿದೆನು. ರಸ್ತೆಯಲ್ಲಿ ಒಬ್ಬ ಪೋಲೀಸಿನವನು ಪಹರೆಯನ್ನು ಕೊಡುತ್ತಿರಲು, ನಾನು ಆತನನ್ನು ಕರೆದು, ಬಾಡಿಗೆಗೆ ಗಾಡಿಯೊಂದನ್ನು ಸಿದ್ಧಪಡಿಸಿ ಕೊಡುವಂತೆ ತಿಳಿಸಿದೆನು.

ಆತನು ಸಿಕ್ಕಿದವರು ಹೇಳಿದ ಮಾತನ್ನು ನೆರವೇರಿಸುವುದು ತನ್ನ ಡ್ಯೂಟಿ (Duty) ಯಲ್ಲವೆಂದು ನನ್ನ ಮಾತಿಗೆ ಕಿವಿಕೊಡದೆ ಮುಂದೆ ತೆರಳುವುದರಲ್ಲಿದ್ದನು. ಆಗ ನಾನು ಪತ್ತೇದಾರಿಯ ಚಿಹ್ನೆಯನ್ನು ಅವನಿಗೆ ತೋರಿಸಲು, ಅವನು ದಿಗಿಲು ಬಿದ್ದು ಸಲಾಮಿನ ಮೇಲೆ ಸಲಾಮನ್ನು ಮಾಡುತ್ತಾ, ಆ ಕೂಡಲೇ ಓಡಿಹೋಗಿ ಗಾಡಿಯೊಂದನ್ನು ತಂದನು.

ನಾನು ಶರಚ್ಚಂದ್ರನನ್ನು ಗಾಡಿಯಲ್ಲಿ ಕೂಡಿಸಿ, ನಾನೂ ಕುಳಿತುಕೊಂಡು, ಪಹರೆಯವನನ್ನು ಕುರಿತು—ಅಯ್ಯ! ಈ ಮನೆಯಿಂದ ಯಾರಾದರೂ ಹೊರಗೆ ಹೋದುದನ್ನು ನೀನು ಕಂಡೆಯಾ? ಎಂದು ಕೇಳಿದೆನು. ಪಹರೆಯವನು—ಇಬ್ಬರು ಮಧ್ಯವಯಸ್ಕ

ರಾದ ಪುರುಷರೂ, ಒಬ್ಬ ಅಲ್ಪವಯಸ್ಕಳಾದ ಹೆಂಗಸೂ, ಈ ಮೂವರೂ ಗಾಡಿಯನ್ನು ಬಾಡಿಗೆಗೆ ತೆಗೆದುಕೊಂಡು ಈಗತಾನೇ ಹೊರಟು ಹೋದರು, ಎಂದನು.

ನಾನು ಈ ಮಾತನ್ನು ಕೇಳಿ, ಜೀಮೂತ, ದೀನೇಂದ್ರ ಪ್ರತಾರಿಣಿ ಇವರುಗಳು ಹೊರಟು ಹೋಗಿರಬೇಕೆಂದು ತಿಳಿದು ಮತ್ತೆ ಆತನನ್ನು ಕುರಿತು—ಅಯ್ಯಾ, ನಾಲ್ಕಾರುಜನ ಪಹರೆಯವರನ್ನು ಕರೆದು ಈ ಮನೆಯ ಸುತ್ತಲೂ ಕಾದಿರುವಂತೆ ಹೇಳಬೇಕು ಈ ಮನೆಗೆ ಬರುವವನ್ನಾಗಲಿ, ಇಲ್ಲಿಂದ ಹೊರಗೆ ಹೋಗುವವನ್ನಾಗಲಿ ದಸ್ತಗಿರಿ ಮಾಡಬೇಕು. ನಾನು ಮತ್ತೆ ಬಂದು ಮುಂದಿನ ಸಂಗತಿಗಳನ್ನು ನೋಡಿಕೊಳ್ಳುವೆನು, ಎಂದು ಹೇಳಿದೆನು. ಪಹರೆಯವನು—ಅಪ್ಪಣೆ, ಎಂದು ಹೇಳಿದೊಡನೆ, ನನ್ನ ಗಾಡಿಯು ಸರಸರ ಹೊರಟು ಯಥಾಕ್ರಮದಲ್ಲಿ ಅಮರನಾಥನ ಮನೆಯ ಬಳಿಗೆ ಬಂದು ಸೇರಿತು. ಅಮರನು ನನ್ನನ್ನು ನೋಡಿ, ನಾನಾಪ್ರಶ್ನೆಗಳನ್ನು ಹಾಕಲಾರಂಭಿಸಲು, ನಾನಾವುದಕ್ಕೂ ಉತ್ತರಕೊಡದೆ, ಬೇಗಲು ಡಾಕ್ಟರನ್ನು ಕರೆಯಿಸಿ ಶರಚ್ಚಂದ್ರನಿಗೆ ತಕ್ಕ ಉಪಚಾರಗಳನ್ನು ಮಾಡಬೇಕೆಂದು ಹೇಳಿ, ನಾನು ಅದೇಗಾಡಿಯಲ್ಲಿಯೇ ಕುಳಿತುಕೊಂಡು ತಡಮಾಡದೆ ರೈಲ್ವೆಸ್ಟೇಷನಿಗೆ ಬಂದೆನು. ಪ್ಲಾಟ್‌ಫಾರಂ (Platform) ನಲ್ಲಿದ್ದ ಮೂವರು ಪೋಲೀಸಿನವನನ್ನು ಜತೆಯಲ್ಲಿ ಕರೆದುಕೊಂಡು ಸ್ಟೇಷನ್‌ಮಾಸ್ಟರ ಬಳಿಗೆ ಹೋದೆನು. ರೈಲ್‌ಗಾಡಿಯು ಹೊರಡುವುದರಲ್ಲಿದ್ದಿತು. ನಾನು ಸ್ಟೇಷನ್‌ಮಾಸ್ಟರನ್ನು ಕುರಿತು—ಸರ್! ಪರೋಡೆಗಳ್ಳರು ಈ ಗಾಡಿಯಲ್ಲಿ ಕುಳಿತಿರುವರು ನಾನವರನ್ನು ದಸ್ತಗಿರಿ ಮಾಡಬೇಕಾಗಿರುವುದರಿಂದ, ದಯವಿಟ್ಟು ರೈಲನ್ನು ಐದು ನಿಮಿಷಕಾಲ ನಿಲ್ಲಿಸಲು ಅಪ್ಪಣೆಮಾಡಬೇಕು, ಎಂದು ಕೇಳಿದೊಡನೆಯೇ ಆತನು ಸಮ್ಮತಿಸಲಾಗಿ, ನಾನು ಪ್ರತಿಯೊಂದ

ಗಾಡಿಯನ್ನು ಪರೀಕ್ಷಿಸಲಾರಂಭಿಸಿದೆನು. ಕೊಂಚಕಾಲದೊಳಗಾಗಿಯೇ ಜೀಮೂತವಾಹನನೂ, ದೀನೇಂದ್ರಚಂದ್ರನೂ ಸಿಕ್ಕಿದರು. ಹೆಂಗಸರ ಗಾಡಿಯಲ್ಲಿ ಪ್ರತಾರಿಣಿಯೂ ಸಿಕ್ಕಿದಳು. ನಾನು ರೈಲ್ವೆ ಪೋಲೀಸಿನವರ ಸಹಾಯದಿಂದ ಈ ಮೂವರನ್ನೂ ಬಂದಿಗಳನ್ನಾಗಿ ಹಿಡಿದುಕೊಂಡೆನು.

* * * *

ಇದಾದ ಮೇಲೆ ಏನೇನು ನಡೆಯಿತೋ ಅದೆಲ್ಲವನ್ನೂ ವಿಸ್ತಾರವಾಗಿ ಗ್ರಂಥದಲ್ಲಿ ರಚಿಸುವುದು ಅಷ್ಟು ಶ್ಲಾಘ್ಯವಾಗಿಲ್ಲ. ಅದರ ಗೋಷ್ವಾರೆಯನ್ನು ಮಾತ್ರ ಇಲ್ಲಿ ವಿವರಿಸುವೆವು.

ದೀನೇಂದ್ರಚಂದ್ರ ಮತ್ತು ಅಮರನಾಥ, ಇವರಿಬ್ಬರೂ ಬಹಳ ಕಾಲದಿಂದಲೂ ಏಕತ್ರ ವ್ಯಾಪಾರಮಾಡಿಕೊಂಡಿದ್ದರು. ಕಾರಣಾಂತರದಿಂದ ಇಬ್ಬರ ಮನಸ್ಸು ಸೇರದಿರಲು, ಇಬ್ಬರೂ ಬೇರೆಬೇರೆಯಾದರು. ಅದೃಷ್ಟಬಲದಿಂದ ಅಮರನಾಥನಿಗೆ ಸಂಪತ್ತು ದಿನೇದಿನೇ ಅಧಿಕವಾಯಿತು. ದೀನೇಂದ್ರನಿಗೆ ವಿಪರೀತವಾಗಿ ಪರಿಣಮಿಸಿತು. ಆದುದರಿಂದ ದೀನೇಂದ್ರನು ಅಮರನ ಹತ್ತಿರಬಂದು ಸಹಾಯವನ್ನು ಬೇಡಿದನು. ಅಮರನು ಒಪ್ಪದೇಹೋದ್ದರಿಂದ, ದೀನೇಂದ್ರನು ಅತಿಯಾಗಿ ಕೋಪಗೊಂಡು ಅಮರನ ಸರ್ವನಾಶದಲ್ಲಿ ಮುಖ್ಯ ಕಾರಣನಾಗಿ ನಿಂತನು.

ಈ ಸರ್ವನಾಶಕ್ರಿಯೆಯಲ್ಲಿ ಜೀಮೂತವಾಹನನು ಮುಖ್ಯ ಮಂತ್ರಿಯಾದನು. ಜೀಮೂತನು ತನ್ನ ಬುದ್ಧಿಯಬಲದಿಂದ ರಾಮರತ್ನನನ್ನು ತನ್ನಲ್ಲಿಗೆ ಬರಮಾಡಿಕೊಂಡು ಅವನಿಗೆ ಮಾದಕರಸಾಯನವನ್ನು ತಿನ್ನಿಸಿ, ಅವನಿಂದ ಕಬ್ಬಿಣದ ಪೆಟ್ಟಿಗೆಯ ಬೀಗವನ್ನು ತೆಗೆವ ಉಪಾಯವನ್ನು ತಿಳಿದು ಅದನ್ನು ಒಂದು ಕಾಗದದಲ್ಲಿ ಬರೆದು ಕೆಲಸ

ವಾದ ಕೂಡಲೆ ಅದನ್ನು ರಾಮರತ್ನನ ಜೇಬಿನಲ್ಲಿ ಆತನಿಗೆ ಗೊತ್ತಾಗದಂತೆ ಹಾಕಿದನು.

ಉಪವನದಲ್ಲಿದ್ದ ತನ್ನ ಸ್ನೇಹಿತನ ಕಡೆಯಿಂದ ಸುಳ್ಳುತಂತಿಯ ವರ್ತಮಾನವನ್ನು ಕೊಡಿಸಿ, ಶಶಿಚಂದ್ರನನ್ನು ಅಮರನಾಥನ ಮನೆಯಿಂದ ದೂರಮಾಡಿದವನು ಜೀಮೂತವಾಹನನೇ.

ಯಾವ ಸಮಯದಲ್ಲಿ ಕಬ್ಬಿಣದ ಪೆಟ್ಟಿಗೆಯಿಂದ ಒಂದು ಲಕ್ಷ ರೂಪಾಯಿಗಳು ಅಪಹರಿಸಲ್ಪಟ್ಟವೋ, ಆಗ ಅಮರನಾಥನೂ ಶಶಿಚಂದ್ರನೂ ಆಫೀಸಿನಲ್ಲಿರಲಿಲ್ಲ. ರಾಮರತ್ನನು ಮಾತ್ರ ಆಫೀಸಿನಲ್ಲಿ ಕುಳಿತುಕೊಂಡು ಕೆಲಸ ಮಾಡುತ್ತಿದ್ದನು. ಆಗ ತಾರಾಪೀಡನು ಅಲ್ಲಿಗೆ ಬಂದು ತನಗೆ ಬೇಕಾದ ಹಣವನ್ನು ಕೊಟ್ಟುಬಿಡಬೇಕೆಂದು ರಾಮರತ್ನನನ್ನು ತಗಾದೆ ಮಾಡತೊಡಗಿದನು. ಮತ್ತಾರಾದರೂ ಕೇಳುವರೆಂಬ ಭಯದಿಂದ ರಾಮರತ್ನನು ತಾರಾಪೀಡನನ್ನು ಆಫೀಸಿನಿಂದ ಹೊರಗೆ ಕರೆದುಕೊಂಡು ಬಂದನು. ಈ ಸಮಯವನ್ನೇ ನಿರೀಕ್ಷಿಸಿಕೊಂಡಿದ್ದ ಜೀಮೂತನು ಲಕ್ಷರೂಪಾಯಿಗಳನ್ನೂ, ಒಂದು ಲೆಕ್ಕದ ಪುಸ್ತಕವನ್ನೂ ಅಪಹರಿಸಿದನು. ಅದೇ ರಾತ್ರಿಯಲ್ಲಿ ಜೀಮೂತನು ತಾರಾಪೀಡನನ್ನು ಬಿಟ್ಟುಕೊಂಡು, ಶಶಿಚಂದ್ರನ ಅಕ್ಷರದಂತೆ ಲೆಕ್ಕವನ್ನು ಅವನಿಂದ ಬರೆಯಿಸಿದನು. ಅದೇ ರಾಮನಾರಾಯಣನ ಹೆಸರಿನಲ್ಲಿ ಒಂದು ಲಕ್ಷರೂಪಾಯಿಗೆ ಖರ್ಚುಬಿದ್ದಿರುವ ಬರವಣಿಗೆ ಯಾಗಿರುವುದು.

ನ್ಯಾಯಾಸ್ಥಾನದಲ್ಲಿ ಮೊಕದ್ದಮೆಯು ನಡೆಯಲಾರಂಭವಾಯಿತು. ಮೊಕದ್ದಮೆಯು ಇತ್ಯರ್ಥವಾಗುವುದರೊಳಗಾಗಿಯೇ, ಶಶಿಚಂದ್ರನಿಗೂ ರಜನಿ ಉರುಫ್ ಇಂದಿರೆಗೂ ವಿವಾಹವಾಯಿತು. ರಾಮರತ್ನನು ಶಶಿರೇಖೆಯನ್ನು ಗಾಂಧರ್ವ ವಿವಾಹದಿಂದ ವರಿಸಿದನು.

ನ್ಯಾಯಸ್ಥಾನದಲ್ಲಿ ಮೊಕದ್ದಮೆಯು ತೀರ್ಮಾನವಾಗುವುದಕ್ಕೆ ಮುಂಚೆಯೇ, ನಾವು ಈ ಗ್ರಂಥವನ್ನು ಬರೆದು ಪ್ರಚಾರಪಡಿಸಬೇಕಾಗಿ ಬಂದು ಸೇರಿದ್ದರಿಂದ, ಮೊಕದ್ದಮೆಯ ಫಲಿತಾಂಶವನ್ನು ಇದರಲ್ಲಿ ಸಮೂದಿಸಲು ಯತ್ನವಿಲ್ಲದೇ ಹೋಯಿತು. ನಮ್ಮ ಈ ಮಹಾಪರಾಧವನ್ನು ಪ್ರಿಯವಾಠಕಮಹಾಶಯರೆಲ್ಲರೂ ಏಕವಾಕ್ಯತೆಯಾ ಕ್ಷಮಿಸಬೇಕೆಂದು ನಾವು ಪದೇಪದೇ ಪ್ರಾರ್ಥಿಸುವೆವು.

ನಾವು ಈ ಚಿಕ್ಕ ಗ್ರಂಥವನ್ನು ಇಲ್ಲಿಗೆ ಪೂರ್ತಿಮಾಡಿ ಉದಾರ ಹೃದಯರಾದ ಸ್ತ್ರೀಪುರುಷ ವಾಚಕರ ಅಪ್ಪಣೆಯನ್ನು ತೆಗೆದುಕೊಳ್ಳುವುದಕ್ಕೆ ಮೊದಲು, ನಮ್ಮ ಗ್ರಂಥದಲ್ಲಿ ಉಕ್ತನಾಗಿರುವ ಚೋರಚಕ್ರವರ್ತಿಯು ಸಾಕ್ಷಾತ್ತಾಗಿ ಬಂದು ತನ್ನ ಶಕ್ತಿವಿಶೇಷವನ್ನು ಗುರುವಿನಲ್ಲಿ ತೋರ್ಪಡಿಸಿದ್ದಕ್ಕಾಗಿ, ನಾವು ಬಹಳ ಸಂತೋಷದಿಂದ ಶಾಲನ್ನು ಆತನಿಗೆ ಪೂರ್ಣಪಾತ್ರವಾಗಿ ಸಮರ್ಪಿಸಿರುವೆವು. ನಮ್ಮ ಚೋರಚಕ್ರವರ್ತಿಗೆ ಸರ್ವದಾಮಂಗಳವಾಗುತ್ತಿರಲೆಂದು ನಾವು ಹಾರೈಸುವೆವು.

ಸಂಪೂರ್ಣಂ.